ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 21 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 125 | ಪುಟಗಳು: 12
ಜಾಹೀರಾತು: ad@mysurumithra.com, *website: www.mysurumithra.com*
ಸುದ್ದಿ, ಫೋಟೋಗೆ: news@mysurumithra.com

₹4

ಮಳೆಯಿಂದ ಬೆಳೆ ಹಾನಿಗೆ ಪರಿಹಾರ

ಕೃಷಿ, ಕಂದಾಯ ಇಲಾಖೆ ಜಂಟಿ ಸಮೀಕ್ಷೆ


ಚಲುವರಾಯಸ್ವಾಮಿ

ಬೆಂಗಳೂರು: ರಾಜ್ಯದಲ್ಲಿ ಮಳೆಯಿಂದ ಹಾಳಾಗಿರುವ ಬೆಳೆಗಳಿಗೆ ಪರಿಹಾರ ನೀಡಲು ಕೃಷಿ ಮತ್ತು ಕಂದಾಯ ಇಲಾಖೆಯಿಂದ ಜಂಟಿ ಸಮೀಕ್ಷೆ ನಡೆಸಲಾಗಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ವಿಧಾನಸಭೆಯಲ್ಲಿ ತಿಳಿಸಿದರು. ಶೂನ್ಯ ವೇಳೆಯಲ್ಲಿ ಬಿಜೆಪಿ ಶಾಸಕ ಸಿಮೆಂಟ್ ಮಂಜು, ಕಾಂಗ್ರೆಸ್ ಶಾಸಕ ಅಲ್ಲಮಪ್ರಭು ಪಾಟೀಲ, ಜೆ.ಟಿ. ಪಾಟೀಲ್ ಅವರ ಪ್ರಸ್ತಾವಗಳಿಗೆ ಉತ್ತರಿಸಿದ ಸಚಿವರು, ಈ ಸಲ ಭಾರಿ ಮಳೆಯಿಂದ ರಾಜ್ಯದ ಹಲವೆಡೆ ಬೆಳೆ ನಷ್ಟವಾಗಿರುವುದು ಸರ್ಕಾರದ ಗಮನದಲ್ಲಿದೆ. ಬೆಳೆ ನಷ್ಟದ ಬಗ್ಗೆ ಕಂದಾಯ ಮತ್ತು ಕೃಷಿ ಇಲಾಖೆ ಜಂಟಿ ಸಮೀಕ್ಷೆ ನಡೆಸುತ್ತಿದೆ. ಸಮೀಕ್ಷಾ ವರದಿ ಬಂದ ನಂತರ ಎನ್‌ಡಿಆರ್‌ಎಫ್ ▶ 6ನೇ ಪುಟಕ್ಕೆ

ನಾಯಕತ್ವ ಬದಲಾದರೆ ಅದು ದಲಿತರಿಗೆ ದಕ್ಕಬೇಕು...

ದಾವಣಗೆರೆಯಲ್ಲಿ ನಡೆಯುವ ಐತಿಹಾಸಿಕ ಸಮಾವೇಶದ ಮೂಲಕ ಕಾಂಗ್ರೆಸ್ ವರಿಷ್ಠರಿಗೆ ಬಲವಾದ ಸಂದೇಶ

ಒಳ ಮೀಸಲಾತಿ ವಿವಾದ ಇತ್ಯರ್ಥದ ನಂತರ ದಲಿತ ಸಮುದಾಯಗಳು ಒಗ್ಗೂಡಿ ನಿರ್ಣಯ

ಬೆಂಗಳೂರು,ಆ.20(ಕೆಎಂಶಿ)– ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ನಿಶ್ಚಿತವೆಂದಾದರೆ, ದಲಿತ ಸಮುದಾಯಕ್ಕೇ ಅದು ದಕ್ಕಬೇಕು ಎಂಬ ಹೋರಾಟ ತೀವ್ರಗೊಳಿಸಲು ಸಮುದಾಯದ ಬೃಹತ್ ಸಮಾವೇಶಕ್ಕೆ ಸಿದ್ಧತೆ ನಡೆದಿದೆ.

ದಲಿತರ ಒಳ ಮೀಸಲಾತಿ ವಿವಾದವನ್ನು ಸರ್ಕಾರ ಇತ್ಯರ್ಥಗೊಳಿಸಿದ ಬೆನ್ನಲ್ಲೇ ಎಡಗೈ–ಬಲಗೈ ಭಿನ್ನಾಭಿಪ್ರಾಯ ಮರೆತ ದಲಿತ ಸಮುದಾಯಗಳು ಒಗ್ಗೂಡಿ ದಾವಣಗೆರೆಯಲ್ಲಿ ಐತಿಹಾಸಿಕ ಸಮಾವೇಶ ನಡೆಸಲು ಸಜ್ಜಾಗಿವೆ. ಅಕ್ಟೋಬರ್–ನವೆಂಬರ್‌ನಲ್ಲಿ ರಾಜ್ಯ ರಾಜಕಾರಣದಲ್ಲಿ ಕ್ರಾಂತಿ ಉಂಟಾಗಲಿದೆ ಎಂಬ ಸುಳಿವಿನ ಹಿನ್ನೆಲೆಯಲ್ಲಿ 30 ಲಕ್ಷ ದಲಿತರನ್ನು ಸೇರಿಸಿ ಸಮಾವೇಶ ನಡೆಸಲು ಮುಂದಾಗಿದ್ದಾರೆ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಾವಣೆ ಮಾಡಲು ವರಿಷ್ಠರು ತೀರ್ಮಾನ ತೆಗೆದುಕೊಂಡರೆ, ಅಂತಹ ಸಮಯದಲ್ಲಿ ದಲಿತ ಸಮುದಾಯಕ್ಕೆ ಈ ಹುದ್ದೆ ನೀಡಬೇಕೆಂಬ ನಿರ್ಣಯವನ್ನು ಸಭೆ ಕೈಗೊಳ್ಳಲಿದೆ. ಒಳ ಮೀಸಲಾತಿ ಹಂಚಿಕೆ ನಂತರ ಸಮುದಾಯದ ಎಲ್ಲ ಗುಂಪುಗಳು ಒಂದಾಗಿ ಜನಸಂಖ್ಯೆಯಲ್ಲಿ ಮೊದಲ ಸ್ಥಾನದಲ್ಲಿದ್ದೇವೆ. ಸಮುದಾಯಕ್ಕೆ ಮುಖ್ಯಮಂತ್ರಿ ಸ್ಥಾನವನ್ನು ನೀಡಬೇಕೆಂದು ವರಿಷ್ಠರನ್ನು ಒತ್ತಾಯಿಸುವ ಉದ್ದೇಶದಿಂದಲೇ ದಾವಣಗೆರೆ ಸಮಾವೇಶ ಆಯೋಜಿಸಲಾಗುತ್ತಿದೆ. ಒಳ ಮೀಸಲಾತಿ ವಿವಾದ ಇತ್ಯರ್ಥ ಸಂಭ್ರಮದಲ್ಲಿ ನಡೆಯುವ ಈ ಸಮಾವೇಶದಲ್ಲಿ ಕರ್ನಾಟಕದಲ್ಲಿ ನಮ್ಮವರು ಮುಖ್ಯಮಂತ್ರಿ ಸ್ಥಾನಕ್ಕೇರಲು ಅನುವು ಮಾಡಿಕೊಡಬೇಕು ಎಂಬ ನಿರ್ಣಯ ಕೈಗೊಳ್ಳಲಾಗುವುದು. ಸ್ವಾತಂತ್ರ್ಯೋತ್ತರ ಕರ್ನಾಟಕದ ಇತಿಹಾಸಕ್ಕೆ ▶ 6ನೇ ಪುಟಕ್ಕೆ

ವಿಧಾನಸಭೆಯಲ್ಲಿ ಒಳ ಮೀಸಲಾತಿ ನಿರ್ಣಯವನ್ನ ಅಧಿಕೃತವಾಗಿ ಪ್ರಕಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ


- ಪರಿಶಿಷ್ಟ ಜಾತಿಗಳ ಚಲನಶೀಲತೆ ಅಧ್ಯಯನಕ್ಕೆ ಶಾಶ್ವತ ಪರಿಶಿಷ್ಟ ಜಾತಿಗಳ ಆಯೋಗ ರಚನೆ ಘೋಷಣೆ
- ಒಳ ಮೀಸಲಾತಿ ಆದೇಶದ ಬೆನ್ನಲ್ಲೇ ನೇಮಕಾತಿ ಪ್ರಕ್ರಿಯೆ ಆರಂಭ; ಒಮ್ಮೆಗೆ ಅನ್ವಯವಾಗಿ ವಯೋಮಿತಿ ಸಡಿಲಿಕೆ



ಬೆಂಗಳೂರು, ಆ.20(ಕೆಎಂಶಿ)–ಬಹಳ ಕಾಲದಿಂದ ನನೆಗುದಿಗೆ ಬಿದ್ದಿದ್ದ ಒಳ ಮೀಸಲಾತಿ ಹಂಚಿಕೆ ಇತ್ಯರ್ಥಗೊಂಡಿರುವುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ಘೋಷಿಸಿ, ಪರಿಶಿಷ್ಟ ಜಾತಿಗಳ ಚಲನಶೀಲತೆ ಅಧ್ಯಯನಕ್ಕೆ ಶಾಶ್ವತ ಪರಿಶಿಷ್ಟ ಜಾತಿಗಳ ಆಯೋಗ ರಚನೆಯನ್ನು ಪ್ರಕಟಿಸಿದ್ದಾರೆ. ಒಳ ಮೀಸಲಾತಿ ಕುರಿತ ಆದೇಶ ಹೊರಬರುತ್ತಿದ್ದಂತೆ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಹಾಗೂ ಒಂದು ಬಾರಿಗೆ ಅನ್ವಯವಾಗುವಂತೆ ವಯೋಮಿತಿ ಸಡಿಲಿಕೆಗೆ ತೀರ್ಮಾನಿಸಲಾಗಿದೆ ಎಂದರು.

ಒಳ ಮೀಸಲಾತಿ ಹೋರಾಟಗಾರರ ಮೇಲಿನ ಮೊಕದ್ದಮೆಗಳನ್ನು ಹಿಂಪಡೆಯುವುದಾಗಿಯೂ ಇದೇ ವೇಳೆ ತಿಳಿಸಿದ ಮುಖ್ಯಮಂತ್ರಿ, ಈಗ ಕೈಗೊಂಡಿರುವ ತೀರ್ಮಾನದಲ್ಲಿ ಯಾವುದಾದರೂ ಮಾರ್ಪಾಡು ಕಂಡುಬಂದರೆ, ಅವುಗಳನ್ನು ಮುಂದಿನ ರಾಷ್ಟ್ರೀಯ ಜನಗಣತಿಯಲ್ಲಿನ ಅಂಕಿ–ಅಂಶ ಆಧರಿಸಿ ಬದಲಾವಣೆಗೆ ಒಳಪಡಿಸುವ ಷರತ್ತಿಗೆ ಬದ್ಧವಾಗಿದೆ. ನ್ಯಾಯಮೂರ್ತಿ ನಾಗಮೋಹನದಾಸ್ ವರದಿ ಶಿಫಾರಸಿನಲ್ಲಿ ಮಾರ್ಪಾಟು ▶ 6ನೇ ಪುಟಕ್ಕೆ

ಕ್ರಿಮಿನಲ್ ಪ್ರಕರಣದಲ್ಲಿ 30 ದಿನ ಜೈಲಲ್ಲಿದ್ದರೆ ಪ್ರಧಾನಿ, ಸಿಎಂ, ಸಚಿವರ ವಜಾ


ಲೋಕಸಭೆಯಲ್ಲಿ ಅಮಿತ್ ಶಾ.

- ಲೋಕಸಭೆಯಲ್ಲಿ ಮಹತ್ವದ ಮಸೂದೆಗಳ ಮಂಡನೆ
- ಮಸೂದೆ ಪ್ರತಿ ಹರಿದು ಅಮಿತ್ ಶಾ ಮೇಲೆಸೆದು ವಿಪಕ್ಷಗಳ ಆಕ್ರೋಶ

ನವದೆಹಲಿ,ಆ.20–ಗಂಭೀರ ಕ್ರಿಮಿನಲ್ ಆರೋಪಗಳ ಮೇಲೆ ಕನಿಷ್ಠ 5 ವರ್ಷಗಳ ಜೈಲು ಶಿಕ್ಷೆಗೆ ಅರ್ಹವಾದ ಅಪರಾಧಗಳಲ್ಲಿ ಬಂಧನಕ್ಕೊಳಗಾಗಿ, ಸತತ 30 ದಿನಗಳ ಕಾಲ ನ್ಯಾಯಾಂಗ ಬಂಧನದಲ್ಲಿರುವ ಪ್ರಧಾನಮಂತ್ರಿ, ಮುಖ್ಯಮಂತ್ರಿಗಳು ಮತ್ತು ಸಚಿವರನ್ನು ಅವರ ಹುದ್ದೆಯಿಂದ ತೆಗೆದುಹಾಕುವ ಮೂರು ಮಸೂದೆಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಲೋಕಸಭೆಯಲ್ಲಿ ಬುಧವಾರ ಮಂಡಿಸಿದರು.

ಮಸೂದೆ ಪರವಾಗಿ ಲೋಕಸಭೆಯಲ್ಲಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಪ್ರಸ್ತಾವಿತ ಮಸೂದೆಯು ಕಾನೂನಿನ ದೃಷ್ಟಿಯಲ್ಲಿ ಎಲ್ಲರನ್ನೂ ಸಮಾನವಾಗಿ ಕಾಣುವ ಅವಕಾಶ ಒದಗಿಸುತ್ತದೆ ಎಂದು ಹೇಳಿದರು.

ಸಚಿವರು ವಿಧೇಯಕ ಮಂಡಿಸುತ್ತಿದ್ದಂತೆ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕೆಲವರು ಮಸೂದೆಗಳ ಪ್ರತಿಗಳನ್ನು ಹರಿದು ಹಾಕಿ ಅಮಿತ್ ಶಾ ಮೇಲೆ ಎಸೆದರು.

ಈ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಕಾಂಗ್ರೆಸ್ ನಾಯಕ ಕೆ.ಸಿ.ವೇಣುಗೋಪಾಲ್ ನಡುವೆ ತೀವ್ರ ವಾಕ್ಸಮರ ನಡೆಯಿತು. ಮಸೂದೆ ವಿರೋಧಿಸಿ ಮಾತನಾಡಿದ ಕೆ.ಸಿ.ವೇಣುಗೋಪಾಲ್, ಈ ಮಸೂದೆ ದೇಶದ ಒಕ್ಕೂಟ ವ್ಯವಸ್ಥೆಯನ್ನು ಮತ್ತು ಸಂವಿಧಾನದ ಮೂಲ ತತ್ವಗಳನ್ನು ಬುಡಮೇಲು ಮಾಡಲಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ರಾಜಕೀಯದಲ್ಲಿ ನೈತಿಕತೆ ತರಲು ಈ ಮಸೂದೆ ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ನಾನು ಗೃಹ ಸಚಿವರಿಗೆ ಒಂದು ಪ್ರಶ್ನೆ ಕೇಳಬಹುದೇ? ತಾವು ಗುಜರಾತ್ ಗೃಹ ಸಚಿವರಾಗಿದ್ದಾಗ ನಿಮ್ಮನ್ನು ಬಂಧಿಸಲಾಗಿತ್ತು. ಆ ಸಮಯದಲ್ಲಿ ತಾವು ನೈತಿಕತೆಯನ್ನು ಎತ್ತಿ ಹಿಡಿದಿದ್ದೀರಾ ಎಂದು ಕೆ.ಸಿ.ವೇಣುಗೋಪಾಲ್ ನೇರವಾಗಿ ಪ್ರಶ್ನಿಸಿದರು.

ಇದಕ್ಕೆ ತೀಕ್ಷ್ಣವಾಗಿ ತಿರುಗೇಟು ನೀಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ನಾನೊಂದು ವಿಷಯವನ್ನು ಸ್ಪಷ್ಟಪಡಿಸಲು ಬಯಸುತ್ತೇನೆ. ನನ್ನ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಲಾಗಿತ್ತು. ಆದಾಗ್ಯೂ, ನಾನು ನೈತಿಕತೆಗೆ ಬದ್ಧನಾಗಿ ಗೃಹ ಸಚಿವ ಸ್ಥಾನಕ್ಕೆ ▶ 6ನೇ ಪುಟಕ್ಕೆ

ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ರಾಜ್ಯ ಸರ್ಕಾರದಿಂದ 10 ಕೋಟಿ ಅನುದಾನ



ಬೆಂಗಳೂರು, ಆ.20– ನಮ್ಮ ದುಡ್ಡು, ಕೇರಳಕ್ಕೆ ನೆರವು. ಇದು ರಾಜ್ಯ ಸರ್ಕಾರದ ನಿಲುವು. ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಕ್ಷೇತ್ರಕ್ಕೆ ಕರ್ನಾಟಕ ಸರ್ಕಾರ ನೆರವು ನೀಡುತ್ತಿದೆ. ಪೂರಕ ಅಂದಾಜಿನಲ್ಲಿ ವಯನಾಡ್ ಜಿಲ್ಲೆಯ ಮೆಪ್ಪಾಡಿಯಲ್ಲಿ ಭೂಕುಸಿತದಿಂದ ಹಾನಿಗೊಳಗಾದ 100 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ಕಂದಾಯ ಇಲಾಖೆ ಅಡಿಯಲ್ಲಿ ಬರುವ ಎಸ್‌ಡಿಆರ್‌ಎಫ್ ಅನುದಾನದಡಿ 10 ಕೋಟಿ ಉಲ್ಲೇಖಿಸಲಾಗಿದೆ. ಆದರೆ, ಪ್ರಿಯಾಂಕ ಗಾಂಧಿ ಸಂಸದೆಯಾಗಿರುವ ವಯನಾಡ್ ಕ್ಷೇತ್ರದ ಮೆಪ್ಪಾಡಿ ಹಾನಿಗೆ ರಾಜ್ಯ ಸರ್ಕಾರ ಹಣ ನೀಡುತ್ತಿರುವುದು ಚರ್ಚೆಗೆ ಗ್ರಾಸವಾಗಿದೆ. ಇದೊಂದು ರೀತಿ ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ ಎಂಬಂತಿದೆ.

ಕೆರೆ ವಿಸ್ತೀರ್ಣಕ್ಕನುಗುಣವಾಗಿ ಬಫರ್‌ಜೋನ್ ನಿಗದಿ



ಬೆಂಗಳೂರು,ಆ.20(ಕೆಎಂಶಿ)–ಕೆರೆಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಬಫರ್‌ಜೋನ್ ನಿಗದಿಗೊಳಿಸುವ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ ವಿಧಾನಪರಿಷತ್‌ನಲ್ಲಿ ಅನುಮೋದನೆ ಪಡೆಯಿತು.

ವಿಧೇಯಕ ಮಂಡಿಸಿ ಮಾತನಾಡಿದ ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜ್, ರಾಜ್ಯದ ಕೆರೆಗಳ ಬಫರ್‌ಜೋನ್ 30 ಮೀಟರ್ ನಿಗದಿ ಮಾಡಲಾಗಿತ್ತು 5 ಗುಂಟೆವರೆಗೆ 0 ಮೀಟರ್, 5 ಗುಂಟೆಯಿಂದ 1 ಎಕರೆಯವರೆಗೆ 3 ಮೀಟರ್, 1–10 ಎಕರೆಯವರೆಗೆ 6 ಮೀಟರ್, 10–25 ಎಕರೆಯವರೆಗೆ 12 ಮೀಟರ್, 25–100 ಎಕರೆವರೆಗೆ 24 ಮೀಟರ್ ಮತ್ತು 100 ಎಕರೆಗಿಂತ

ಪರಿಷತ್‌ನಲ್ಲಿ ವಿಧೇಯಕ ಪಾಸ್

ದೊಡ್ಡದಾದ ಕೆರೆಗಳಿಗೆ 30 ಮೀಟರ್ ಬಫರ್ ವಲಯ ನಿಗದಿ ಮಾಡಲಾಗಿದೆ, ಬಫರ್‌ಜೋನ್‌ಗಳಲ್ಲಿ ರಸ್ತೆ ಸೇತುವೆ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಗೆ ಅವಕಾಶ ಕಲ್ಪಿಸಲಾಗಿದೆ ಎಂದರು.

ರಾಜ್ಯದಲ್ಲಿ 41,849 ಕೆರೆಗಳಿವೆ, 35,985 ಕೆರೆಗಳ ಸರ್ವೇ ಮುಗಿದಿದೆ. 5,687 ಕೆರೆಗಳ ಸರ್ವೇ ಬಾಕಿಯಿದೆ. ಒತ್ತುವರಿಯಾದ 13,644 ಕೆರೆಗಳ ಪೈಕಿ 7,987 ಕೆರೆಗಳ ಒತ್ತುವರಿ ತೆರವುಗೊಳಿಸಲಾಗಿದೆ, 5,687 ಕೆರೆಗಳ ಒತ್ತುವರಿ ತೆರವು ಆಗಬೇಕಿದೆ. ಪ್ರತಿ ತಿಂಗಳು ಜಿಲ್ಲಾ ಮಟ್ಟದಲ್ಲಿ ಸಭೆ ನಡೆಸಿ ತೆರವು ಕಾರ್ಯ ಚುರುಕುಗೊಳಿಸಲಾಗುತ್ತಿದೆ. ಬೆಂಗಳೂರು ಕೆರೆಗಳಲ್ಲಿ ಎನ್‌ಜಿಟಿ ಆದೇಶದಂತೆ 30 ಮೀಟರ್ ಬಫರ್‌ಜೋನ್ ಇಲ್ಲವಾಗಿದೆ. ಕೆರೆಗಳ ಸಂರಕ್ಷಣೆ ಜೊತೆಗೆ ಮೂಲಸೌಕರ್ಯ ಅಭಿವೃದ್ಧಿ ತಿದ್ದುಪಡಿ ವಿಧೇಯಕದ ಉದ್ದೇಶ ಎಂದರು. ತಿದ್ದುಪಡಿ ಕಾಯ್ದೆಗೆ ವಿರೋಧ ಪಕ್ಷದ ಸಭಾತ್ಯಾಗದ ನಡುವೆ ವಿಧೇಯಕಕ್ಕೆ ಸದನದ ಅಂಗೀಕಾರ ದೊರೆಯಿತು.

ಅಗ್ನಿ–5 ಖಂಡಾಂತರ ಕ್ಷಿಪಣಿ ಪರೀಕ್ಷೆ ಯಶಸ್ವಿ



ಬಾಲೇಶ್ವರ (ಒಡಿಶಾ): ಮಧ್ಯಂತರ ಶ್ರೇಣಿಯ ಪರಮಾಣು ಸಿಡಿತಲೆಗಳನ್ನು ಹೊತ್ತೊಯ್ಯಬಲ್ಲ ದೇಶೀಯವಾಗಿ ತಯಾರಿಸಿದ ಖಂಡಾಂತರ ಕ್ಷಿಪಣಿ 'ಅಗ್ನಿ–5'ರ ಪರೀಕ್ಷಾರ್ಥ ಪ್ರಯೋಗವು ಒಡಿಶಾದ ಚಾಂದೀಪುರದಲ್ಲಿ ಬುಧವಾರ ಯಶಸ್ವಿಯಾಗಿ ನಡೆಯಿತು. 5,000 ಕಿ.ಮೀ. ವ್ಯಾಪ್ತಿಯ ಶತ್ರು ನೆಲೆಗಳ ಮೇಲೆ ದಾಳಿ ನಡೆಸಬಲ್ಲ ಕ್ಷಿಪಣಿ ಇದಾಗಿದೆ. ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ನೇತೃತ್ವದಲ್ಲಿ 2012ರ ಏಪ್ರಿಲ್ 19ರಂದು ಅಗ್ನಿ ಕ್ಷಿಪಣಿಯ ಮೊದಲ ಪರೀಕ್ಷಾರ್ಥ ಉಡಾವಣೆ ನಡೆದಿತ್ತು. ಎರಡನೇ ಪರೀಕ್ಷಾರ್ಥ ಉಡಾವಣೆಯಲ್ಲೂ ಅಗ್ನಿ–5 ಯಶಸ್ವಿಯಾಗಿತ್ತು.

ಅಗ್ನಿ–5 ಕ್ಷಿಪಣಿ ಒಂದು ಟನ್‌ಗಿಂತಲೂ ಹೆಚ್ಚು ಭಾರದ ಪರಮಾಣು ಸಿಡಿತಲೆಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ. ಅಲ್ಲದೇ ಇದು ಸ್ವಯಂಚಾಲಿತ ಸೌಲಭ್ಯವನ್ನೂ ಹೊಂದಿದೆ. ವಿವಿಧ ರೇಡಾರ್ ಮತ್ತು ಸಂಪರ್ಕ ವ್ಯವಸ್ಥೆಯ ಮೂಲಕವೂ ಮಾಹಿತಿ ಪಡೆಯುವ ವಿಶೇಷ ಗುಣ ಇದಕ್ಕಿದೆ ಎಂದು ಡಿಆರ್‌ಡಿಓ ಮೂಲಗಳು ಹೇಳಿವೆ.

ರೈಲ್ವೆ ನೇಮಕಾತಿ ಕನ್ನಡದಲ್ಲಿ ಪರೀಕ್ಷೆ



ನವದೆಹಲಿ: ರೈಲ್ವೆಯಲ್ಲಿ ವಿವಿಧ ಹುದ್ದೆಗಳ ನೇಮಕಾತಿಗಾಗಿ ಕಂಪ್ಯೂಟರ್ ಆಧಾರಿತ ಪರೀಕ್ಷೆಗಳನ್ನು ಕನ್ನಡ ಸೇರಿದಂತೆ 15 ಭಾಷೆಗಳಲ್ಲಿ ನಡೆಸಲಾಗುತ್ತದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ ಪ್ರಶ್ನೆಗೆ ಉತ್ತರಿಸಿದ ಅವರು, ಅರ್ಜಿ ಸಲ್ಲಿಸುವ ಎಲ್ಲರನ್ನೂ ಸಮಾನವಾಗಿ ಪರಿಗಣಿಸಲಾಗುತ್ತದೆ. ಯಾವುದೇ ರಾಜ್ಯ ಅಥವಾ ಪ್ರದೇಶದ ಅಭ್ಯರ್ಥಿಗಳಿಗೆ ಆದ್ಯತೆ ನೀಡುವುದಿಲ್ಲ. ಅರ್ಜಿ ಸಲ್ಲಿಸುವಾಗ 15 ಭಾಷೆಗಳ ಪೈಕಿ ಯಾವುದಾದರೂ ಒಂದು ಪರೀಕ್ಷಾ ಮಾಧ್ಯಮ ಆಯ್ಕೆ ಮಾಡಿಕೊಳ್ಳಬೇಕು. ಪ್ರಶ್ನೆಗಳನ್ನು ಅಭ್ಯರ್ಥಿ ಆಯ್ಕೆ ಮಾಡಿದ ಭಾಷೆಯಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ನೀಡಲಾಗುತ್ತದೆ ಎಂದರು.

ಧರ್ಮಸ್ಥಳ ವಿರುದ್ಧದ ಷಡ್ಯಂತ್ರಕ್ಕೆ ದಿನ ಬೆಳಗಾದರೆ ಟ್ವಿಸ್ಟ್ ಮೇಲೆ ಟ್ವಿಸ್ಟ್

ಅನನ್ಯಾ ಭಟ್ ಎಂದು ಬಿಂಬಿಸಲಾಗುತ್ತಿರುವ 'ಫೋಟೋ'ದಲ್ಲಿರುವವರು ವಿರಾಜಪೇಟೆ ಕೆದಮಳ್ಳೂರು ಮಾಳೇಟಿರ ವಸಂತಿ...!!

- ಸುಜಾತ ಭಟ್‌ರಿಂದ ಸಹೋದರಿ 'ಫೋಟೋ' ದುರ್ಬಳಕೆ: ವಸಂತಿ ಸಹೋದರ ಆರೋಪ
- ತಮ್ಮ ಸಹೋದರಿ ಶವ ಕೆದಮಳ್ಳೂರಿನ ಬೊಯಿಕೇರಿ ಬಳಿ ಕೊಟ್ಟೋಳಿ ನದಿಯಲ್ಲಿ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿತ್ತು
- ಆಕೆ ಬೆಂಗಳೂರಿನ ಶ್ರೀವತ್ಸ ಪ್ರಸಾದ್ ಎಂಬುವರನ್ನು ಪ್ರೀತಿಸಿ ವಿವಾಹವಾಗಿದ್ದರು




ಅನನ್ಯಾ ಭಟ್ ಎಂದು ಬಿಂಬಿಸಲಾಗುತ್ತಿರುವ ಫೋಟೋದಲ್ಲಿರುವವರು ನನ್ನ ಸಹೋದರಿ ವಸಂತಿಯದು ಎಂದು ಪತ್ರಕರ್ತರಿಗೆ ಮಾಹಿತಿ ನೀಡುತ್ತಿರುವ ಸಹೋದರ

ಮಡಿಕೇರಿ,ಆ.20– ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಅನನ್ಯಾ ಭಟ್ ಎಂಬ ಯುವತಿ ನಾಪತ್ತೆಯಾಗಿದ್ದಾಳೆ ಎಂಬ ದೂರಿನ ಪ್ರಕರಣ ಇದೀಗ ಹೊಸ ತಿರುವು ಪಡೆದುಕೊಂಡಿದೆ. ಅನನ್ಯಾ ಭಟ್ ತನ್ನ ಮಗಳಾಗಿದ್ದು, ಆಕೆಯ ಅಸ್ಥಿ ಹುಡುಕಿ ಕೊಡಿ. ಆಕೆಯ ಅಂತ್ಯಸಂಸ್ಕಾರ ಮಾಡಬೇಕೆಂದು ಸುಜಾತ ಭಟ್ ಎಂಬುವರು ಧರ್ಮಸ್ಥಳ ಪೊಲೀಸ್ ಠಾಣೆಗೆ ನೀಡಿದ ದೂರಿನ ಬಗ್ಗೆ ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಅನುಮಾನಗಳು ಹುಟ್ಟಿಕೊಂಡಿವೆ. ಸುಜಾತಾ ಭಟ್ ಬಿಡುಗಡೆ ಮಾಡಿರುವ ಫೋಟೋ, 2007ರಲ್ಲಿ ವಿರಾಜಪೇಟೆಯ ಕೆದಮಳ್ಳೂರು ಗ್ರಾಮ ಬೊಯಿಕೇರಿ ಸಮೀಪದ ಕೊಟ್ಟೋಳಿ ನದಿಯಲ್ಲಿ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದ್ದ ಮಾಳೇಟಿರ ವಸಂತಿ ಎಂಬುವರ ಫೋಟೋವಾಗಿದೆ ಎಂದು ಸ್ವತಃ ಮಾಳೇಟಿರ ವಸಂತಿ ಅವರ ಸಹೋದರ ▶ 6ನೇ ಪುಟಕ್ಕೆ

ಯೂಟ್ಯೂಬರ್‌ಗಳಿಗೆ ಫಾರಿನ್ ಫಂಡ್: ಇಡಿ ಪರಿಶೀಲನೆ

ಬೆಂಗಳೂರು: ಧರ್ಮಸ್ಥಳ ವಿಷಯದಲ್ಲಿ ಅಪಪ್ರಚಾರ ಮಾಡಲು ಯೂಟ್ಯೂಬರ್‌ಗಳಿಗೆ ವಿದೇಶದಿಂದ ಹಣ ಹರಿದುಬಂದಿದೆ ಎಂಬ ಆರೋಪಕ್ಕೆ ಈಗ ಬಿಗ್ ಟ್ವಿಸ್ಟ್ ಸಿಕ್ಕಿದೆ. ಮಂಗಳವಾರ ಕೇಂದ್ರ ಗೃಹ ಸಚಿವಾಲಯಕ್ಕೆ ಸಂಸದ ಕೋಟ ಶ್ರೀನಿವಾಸ ಪೂಜಾರಿ ಪತ್ರ ಬರೆದಿದ್ದ ಬೆನ್ನಲ್ಲೇ ದಾಖಲೆಗಳ ಪರಿಶೀಲನೆ ಮಾಡುವಂತೆ ಜಾರಿ ನಿರ್ದೇಶನಾಲಯಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೂಚನೆ ನೀಡಿದ್ದಾರೆ. ಸಂಸದ ಕೋಟ ಶ್ರೀನಿವಾಸ್ ಪೂಜಾರಿ ಪ್ರತಿಕ್ರಿಯಿಸಿ, ದೇವಸ್ಥಾನದ ಪಾವಿತ್ರ್ಯತೆ ಉಳಿಸುವ ಸಲುವಾಗಿ ಗೃಹ ಸಚಿವರಿಗೆ ಪತ್ರ ಬರೆದಿದ್ದೇನೆ. ಯಾವುದೇ ವ್ಯಕ್ತಿಗತವಾಗಿ ನಾನು ಪತ್ರ ಬರೆದಿಲ್ಲ ಅಂದಿದ್ದಾರೆ. ಶಾಸಕ ಭರತ್ ಶೆಟ್ಟಿ ಮಾತನಾಡಿ, ಎನ್‌ಐಎ ಅಥವಾ ಇಡಿ ತನಿಖೆಯಾದರೆ ಯಾರ್‍ಯಾರ ಬ್ಯಾಂಕ್ ಖಾತೆಗಳಿಗೆ ಎಷ್ಟೆಲ್ಲ ಹಣ ಎಲ್ಲೆಲ್ಲಿಂದ ಬಂದಿದೆ ಎಂಬುದು ಗೊತ್ತಾಗಲಿದೆ ಎಂದಿದ್ದಾರೆ.


ಅನನ್ಯಾ ಭಟ್ ಕೇಸ್ ಎಸ್‌ಐಟಿಗೆ ವರ್ಗಾವಣೆ

ಧರ್ಮಸ್ಥಳ: ತಮ್ಮ ಮಗಳು ಅನನ್ಯಾ ಭಟ್, ಧರ್ಮಸ್ಥಳದಲ್ಲಿ ನಾಪತ್ತೆಯಾಗಿದ್ದಾರೆ ಎಂದು ತಾಯಿ ಸುಜಾತ್ ಭಟ್ ಆರೋಪ ಹಾಗೂ ದೂರು ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ. ಇದರ ಬೆನ್ನಲ್ಲೇ ಅನನ್ಯಾ ಭಟ್ ಪ್ರಕರಣವನ್ನು ಎಸ್‌ಐಟಿ (ವಿಶೇಷ ತನಿಖಾ ತಂಡ)ಗೆ ವರ್ಗಾವಣೆ ಮಾಡಿ ಡಿಜಿಪಿ ಆದೇಶ ನೀಡಿದ್ದಾರೆ.

ಅನನ್ಯಾ ಭಟ್ ಹೆಸರಿನ ಎಂಬಿಬಿಎಸ್ ವಿದ್ಯಾರ್ಥಿನಿ 2003ರಲ್ಲಿ ಧರ್ಮಸ್ಥಳದಿಂದ ನಾಪತ್ತೆಯಾಗಿದ್ದಾರೆ. ಈ ಕುರಿತು ಅಂದು ದೂರು ದಾಖಲಿಸಲು ಪೊಲೀಸರು ನಿರಾಕರಿಸಿದ್ದರು. ಧರ್ಮಸ್ಥಳ ದೇವಸ್ಥಾನದ ಸಿಬ್ಬಂದಿ ಈಕೆಯನ್ನು ಅಪಹರಿಸಿದ್ದರು ಎಂದು ತಾಯಿ ಸುಜಾತ್ ಭಟ್ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಅನನ್ಯಾ ಭಟ್ ನಾಪತ್ತೆ ಪ್ರಕರಣದಲ್ಲಿ ಸುಜಾತ್ ಭಟ್ ಹೇಳಿಕೆ, ತೋರಿಸಿದ ಮಗಳ ಫೋಟೋದ ಅಸಲಿಯತ್ತು ಕುರಿತು ಹಲವಾರು ಸಂಶಯಾಸ್ಪದ ವಿಚಾರಗಳು ಹೊರಬರುತ್ತಿದ್ದು, ಇದರ ಬೆನ್ನಲ್ಲೇ ಡಿಜಿಪಿಯವರು ಅನನ್ಯಾ ಭಟ್ ನಾಪತ್ತೆ ಪ್ರಕರಣವನ್ನು ಸದ್ಯ ಧರ್ಮಸ್ಥಳದಲ್ಲಿ ಬುರುಡೆ ತನಿಖೆ ಮಾಡುತ್ತಿರುವ ಎಸ್‌ಐಟಿಗೆ ವರ್ಗಾಯಿಸಿದ್ದಾರೆ.

ನೂರಾರು ಶವಗಳ ಹೂತು ಹಾಕಿದ್ದೇನೆಂಬ ಅನಾಮಿಕನ ಹೇಳಿಕೆ ಬರೀ ಬುರುಡೆ...!

- ಮಾಸ್ಕ್‌ಮ್ಯಾನ್‌ನ ಸಹೋದ್ಯೋಗಿ ಮದ್ದೂರು ರಾಜು ಮಾಹಿತಿ
- ಈತ ಹಣಕ್ಕಾಗಿ ಹೀಗೆ ಹೇಳುತ್ತಿರಬಹುದು; ಇಲ್ಲವೇ ಯಾರದೋ ಮಾತು ಕೇಳಿ ಹೀಗೆ ಹೇಳಿರಬಹುದು


ಮದ್ದೂರು ರಾಜು

ಬೆಂಗಳೂರು,ಆ.20–ಧರ್ಮಸ್ಥಳ ಪ್ರಕರಣಕ್ಕೆ ಟ್ವಿಸ್ಟ್ ಮೇಲೆ ಟ್ವಿಸ್ಟ್ ಸಿಗುತ್ತಿದ್ದು, ನೇತ್ರಾವತಿ ನದಿ ದಡದಲ್ಲಿ ನೂರಾರು ಮಹಿಳೆಯರು, ಯುವತಿಯರ ಶವಗಳನ್ನು ಹೂತು ಹಾಕಿದ್ದೇನೆ ಎಂಬ ಅನಾಮಿಕನ ಹೇಳಿಕೆ ಸುಳ್ಳು. ಆತ ಹಣದಾಸೆಗಾಗಿ ಈ ರೀತಿಯ ಸುಳ್ಳು ಆರೋಪ ಮಾಡಿರುವ ಸಾಧ್ಯತೆಯಿದೆ ಎಂದು ಈ ಹಿಂದೆ ಮಾಸ್ಕ್‌ಮ್ಯಾನ್ ಜೊತೆ ಧರ್ಮಸ್ಥಳದಲ್ಲಿ ಸ್ವಚ್ಛತಾ ಕೆಲಸ ಮಾಡುತ್ತಿದ್ದ ಮಂಡ್ಯ ಮೂಲದ ರಾಜು ಹೇಳಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿರುವ ಮಂಡ್ಯ ಜಿಲ್ಲೆ ಮದ್ದೂರಿನ ವೈದ್ಯನಾಥಪುರ ಗ್ರಾಮದ ರಾಜು, ಮೊದಲು ಅಲ್ಲಿ ನನ್ನ ಅತ್ತೆ, ಮಾವ ಸ್ವಚ್ಛತಾ ಕೆಲಸ ಮಾಡುತ್ತಿದ್ದರು. ನಂತರ ಅವರಿಗೆ ಹುಷಾರಿಲ್ಲದ ಕಾರಣ ನಾನು ಹೋಗಿದ್ದೆ. ನಾನು 10 ವರ್ಷದ ಹಿಂದೆ ಧರ್ಮಸ್ಥಳದಲ್ಲಿ ನಾಲ್ಕು ವರ್ಷ ಸ್ವಚ್ಛತಾ ಕೆಲಸ ಮಾಡಿಕೊಂಡಿದ್ದೆ. ಈ ಸಂದರ್ಭದಲ್ಲಿ ನಮ್ಮ ಕುಟುಂಬ ಮತ್ತು ಮಾಸ್ಕ್‌ಮ್ಯಾನ್ ಕುಟುಂಬ ಹತ್ತಿರ ಹತ್ತಿರ ನೆಲೆಸಿದ್ದೆವು. ಆತ ಕೊಟ್ಟಿರುವ ಹೇಳಿಕೆಗಳು ಬರೀ ಸುಳ್ಳು. ಅವನು ದುಡ್ಡಿನ ಆಸೆಗೆ ಈ ರೀತಿ ಆರೋಪಗಳನ್ನ ಮಾಡುತ್ತಿರಬೇಕು. ಯಾರೋ ಆತ–ನಾನು 10 ವರ್ಷದ ಹಿಂದೆ ಧರ್ಮಸ್ಥಳದಲ್ಲಿ ನಾಲ್ಕು ವರ್ಷ ಸ್ವಚ್ಛತೆಯ ಕೆಲಸ ಮಾಡಿಕೊಂಡಿದ್ದೆ. ಆತನಿಗೆ ದುಡ್ಡಿನ ಆಮಿಷ ಒಡ್ಡಿದ್ದಾರೆ. ಆತ ಯಾರದ್ದೋ ಮಾತನ್ನು ಕೇಳಿಕೊಂಡು ಈ ರೀತಿ ಮಾಡಿರಬೇಕು. ▶ 6ನೇ ಪುಟಕ್ಕೆ

ದೇವರಾಜ ಅರಸರಿಗೆ ಅವರೇ ಸಾಟಿ

ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್ (ಜೆಪಿ)



ಕಾವೇರಿ ಕ್ರಿಯಾ ಸಮಿತಿಯಿಂದ ಬುಧವಾರ ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಜನ್ಮದಿನ ಆಚರಿಸಲಾಯಿತು.

ಮೈಸೂರು, ಆ.20(ಜಿಎ)–ದೇವರಾಜ ಅರಸು ಅವರಿಗೆ ಅವರೇ ಸಾಟಿ ಎಂದು ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ, ನಟರೂ ಆದ ಜಯಪ್ರಕಾಶ್(ಜೆಪಿ) ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದ ಮುಂಭಾಗ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಆಯೋಜಿಸಿದ್ದ ಡಿ.ದೇವ ರಾಜ ಅರಸು ಅವರ 110ನೇ ಜಯಂತಿಯಲ್ಲಿ ಮಾತನಾಡಿದ ಅವರು, ಜನ ಮೆಚ್ಚಿದ ಮುಖ್ಯಮಂತ್ರಿಗಳು ದೇವರಾಜ ಅರಸ್ ಅವರಿಗೆ ಅವರೇ ಸಾಟಿ. ರಾಜ್ಯದ ಯಾವುದೇ ಮುಖಂಡರಿಗೂ ಅವರನ್ನು ಹೋಲಿಕೆ ಮಾಡುವುದು ಸರಿಯಲ್ಲ. ಸಾಕಷ್ಟು ಧೈರ್ಯದಿಂದ ಉಳುವವನೇ ಭೂಮಿ ಒಡೆಯ, ವರುಣ ಕಾಲುವೆ ನಿರ್ಮಾಣ ಮಾಡುವ ಮೂಲಕ ರೈತರ ಬದುಕನ್ನು ಹಸನಾಗಿಸಿದರು. ಅವರಂತೆ ಹೆಚ್ಚು ಕೆಲಸ ಮಾಡಿ. ಆದರೆ, ಹೋಲಿಕೆ ಮಾಡಬೇಡಿ ಎಂದರು. ಈ ಸಂದರ್ಭದಲ್ಲಿ ಕನ್ನಡಪರ ಹೋರಾಟಗಾರ ತೇಜಸ್ ಲೋಕೇಶ್‌ಗೌಡ, ಹನುಮಂತಯ್ಯ, ನೇಹ, ಸಿಂಧುವಳ್ಳಿ ಶಿವಕುಮಾರ್, ರಘು ಅರಸ್, ಚಂದ್ರು, ಪ್ರಭಾಕರ್, ಕುಮಾರ್, ರವೀಶ್, ಹಮೀದ್ ಮತ್ತಿತರರು ಉಪಸ್ಥಿತರಿದ್ದರು.

ಮೋದಿ ಪದವಿ ವ್ಯಾಸಂಗ ಕುರಿತ ಮಾಹಿತಿ: ತೀರ್ಪು ಕಾಯ್ದಿರಿಸಿದ ದೆಹಲಿ ಹೈಕೋರ್ಟ್



ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಪದವಿ ವ್ಯಾಸಂಗ ಕುರಿತ ಮಾಹಿತಿಯನ್ನು ಬಹಿ ರಂಗಪಡಿಸುವಂತೆ ಕೇಂದ್ರ ಮಾಹಿತಿ ಆಯೋಗ ನಿರ್ದೇಶನ ನೀಡಿದ್ದನ್ನು ಪ್ರಶ್ನಿಸಿ ದೆಹಲಿ ವಿಶ್ವವಿದ್ಯಾಲಯ (ಡಿಯು) ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದ ತೀರ್ಪನ್ನು ದೆಹಲಿ ಹೈಕೋರ್ಟ್ ಬುಧವಾರ ಕಾಯ್ದಿರಿಸಿತು.

ನ್ಯಾಯಮೂರ್ತಿ ಸಚಿನ್ ದತ್ತಾ ಅವರು ಬುಧವಾರ ಮಧ್ಯಾಹ್ನ 2.30ಕ್ಕೆ ತೀರ್ಪು ಪ್ರಕಟಿಸಬೇಕಿತ್ತು. ಆದರೆ, ಅವರು ಕಲಾಪ ನಡೆಸಲಿಲ್ಲ. ಆ.25ರಂದು ತೀರ್ಪು ಪ್ರಕಟಿಸುವ ನಿರೀಕ್ಷೆ ಇದೆ.

ವಿಚಾರಣೆ ವೇಳೆ ದೆಹಲಿ ವಿಶ್ವವಿದ್ಯಾಲಯ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಮಾಹಿತಿ ತಿಳಿದುಕೊಳ್ಳುವ ಹಕ್ಕಿಗಿಂತ ಖಾಸಗಿತನ ಹಕ್ಕು ಮಿಗಿಲಾದದ್ದು. ಹೀಗಾಗಿ, ಸಿಐಸಿ ಆದೇಶವು ರದ್ದುಗೊಳಿಸಲು ಯೋಗ್ಯವಾಗಿದೆ ಎಂದರು.

ಮೋದಿ ಅವರ ಪದವಿ ವ್ಯಾಸಂಗಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ತೋರಿಸಲು ದೆಹಲಿ ವಿಶ್ವವಿದ್ಯಾಲಯ ಸಿದ್ಧವಿದೆ. ಆದೇ, ಆರ್‌ಟಿಐ ಅಡಿ ಅರ್ಜಿ ಸಲ್ಲಿಸುವ ಅಪರಿಚಿತರು ಈ ದಾಖಲೆಗಳನ್ನು ಪರಿಶೀಲನೆ ನಡೆಸುವುದಕ್ಕಾಗಿ ಬಹಿರಂಗ ಪಡಿಸಲು ಸಾಧ್ಯವಿಲ್ಲ ಎಂದರು. ಮೋದಿ ಅವರ ಪದವಿ ವ್ಯಾಸಂಗಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವಂತೆ ಕೋರಿ ನೀರಜ್ ಎಂಬುವವರು ಆರ್‌ಟಿಐ ಅಡಿ ಅರ್ಜಿ ಸಲ್ಲಿಸಿದ್ದರು. ದಾಖಲೆಗಳನ್ನು ಪರಿಶೀಲಿಸಲು ಅವಕಾಶ ನೀಡಿ ಸಿಐಸಿ 2016ರ ಡಿಸೆಂಬರ್ 21ರಂದು ಆದೇಶಿಸಿತ್ತು. ಸಿಐಸಿ ಆದೇಶ ಪ್ರಶ್ನಿಸಿ ದೆಹಲಿ ವಿಶ್ವವಿದ್ಯಾಲಯ ದೆಹಲಿ ಹೈಕೋರ್ಟ್ ಮೊರೆ ಹೋಗಿತ್ತು. ಸಿಐಸಿ ಆದೇಶಕ್ಕೆ ತಡೆ ನೀಡಿ ಹೈಕೋರ್ಟ್ 2017ರ ಜನವರಿ 23ರಂದು ಆದೇಶಿಸಿತ್ತು.

ಬಿಳಿಕೆರೆ ಸೌರಗ್ರಾಮ



ಮೈಸೂರು: ಭಾರತ ಸರ್ಕಾರ ಪ್ರತಿಷ್ಠಿತ ಪಿ.ಎಂ. ಸೂರ್ಯಘರ್ ಯೋಜನೆಯಡಿ ಹುಣಸೂರು ತಾಲೂಕು ಬಿಳಿಕೆರೆ ಗ್ರಾಮವನ್ನು ಸೌರಗ್ರಾಮವೆಂದು ಆಯ್ಕೆ ಮಾಡಲಾಗಿದೆ. ಜು.1ರಿಂದ ಡಿ.31ರವರೆಗೆ 6 ತಿಂಗಳ ಅವಧಿ ಕಲ್ಪಿಸಲಾಗಿದೆ. ಗ್ರಾಹಕರು ಈ ಅವಧಿಯಲ್ಲಿ ಮನೆಗಳ ಮೇಲೆ ಸೌರ ಮೇಲ್ಛಾವಣಿ ಘಟಕಗಳನ್ನು ನಿಗಮದ ಅಧಿಕೃತ ಮಾರಾಟಗಾರರ ಸಮನ್ವಯದೊಂದಿಗೆ ಅಳವಡಿಸಿಕೊಂಡು ನವೀಕರಿಸಬಹುದಾದ ಶಕ್ತಿಯ ಮೂಲ ವಿದ್ಯುತ್ ಉತ್ಪಾದಿಸುವ ಸಂಬಂಧ ದೇಶದ ಅಭಿವೃದ್ಧಿಗೆ ಮೌಲ್ಯಯುತ ಕೊಡುಗೆಯನ್ನು ನೀಡಿದಂತಾಗುತ್ತದೆ ಎಂದು ಸೆಸ್ಕ್ ಬಿಳಿಕೆರೆ ಉಪವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಸಿ.ಅನಿಲ್ ತಿಳಿಸಿದ್ದಾರೆ.

ಮೈಸೂರು ನ್ಯೂ ಸಿಟಿ ಲಯನ್ಸ್ ಕ್ಲಬ್‌ಗೆ ಸೇರ್ಪಡೆ



ಮೈಸೂರು ನ್ಯೂ ಸಿಟಿ ಲಯನ್ಸ್ ಕ್ಲಬ್‌ಗೆ ಹೊಸ ಸದಸ್ಯರು ಸೇರ್ಪಡೆಯಾದರು.

ಮೈಸೂರು,ಆ.20–ಇತ್ತೀಚೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್‌ನ ಎಸ್.ಪಿ. ಭಟ್ ಸಭಾ ಭವನದಲ್ಲಿ ನಡೆದ ಸಮಾರಂಭದಲ್ಲಿ ಮೈಸೂರು ನ್ಯೂ ಸಿಟಿ ಲಯನ್ಸ್ ಕ್ಲಬ್‌ನ ಹೊಸ ಸದಸ್ಯರನ್ನು ಲಯನ್ ಕೆ.ಬಿ.ಭಾಸ್ಕರ್ (ಜಿಲ್ಲಾ ಅಧ್ಯಕ್ಷರು ಸಂವಿಧಾನ ಮತ್ತು ಪ್ರೋಟೋಕಾಲ್) ಸೇರ್ಪಡೆ ಮಾಡಿದರು.

ಲಯನ್ಸ್ ವರ್ಷದ 2025–2026ನೇ ಸಾಲಿನ ಹೊಸ ಅಧಿಕಾರಿಗಳ ತಂಡವನ್ನು ಜಿಲ್ಲಾ 317 ಜಿ ಯ ಪ್ರಥಮ ಉಪ ಜಿಲ್ಲಾ ಗವರ್ನರ್ ಲಯನ್ ಮಧಿದೇವ ಕುಮಾರ್ ಪದಗ್ರಹಣ ಮಾಡಿಸಿದರು.

ಕಾರ್ಯದರ್ಶಿ ಲಯನ್ ಕೆ.ಚಂದ್ರಹಾಸ್, ಪ್ರಾದೇಶಿಕ ಅಧ್ಯಕ್ಷ ಲಯನ್ ಸತೀಶ್, ಅಧ್ಯಕ್ಷ ಲಯನ್ ಎಸ್.ಕಿರಣ್, ಫಸ್ಟ್ ಲೇಡಿ ಲಯನ್ ಉಮಾಕಿರಣ್, ವಲಯಾಧ್ಯಕ್ಷೆ ಲಯನ್ ಗಾಯತ್ರಿ ಜಗದೀಶ್, ಖಜಾಂಚಿ ಲಯನ್ ಅನಿಲ್ ಕುಮಾರ್ ಮೋದಿ ಹಾಗೂ ಪ್ರಥಮ ಉಪಾಧ್ಯಕ್ಷ ಲಯನ್ ಬಿ.ಎಸ್. ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಸ್ವರ್ಣಾಮೃತ ಪ್ರಾಶನ

ಮೈಸೂರು: ಮೈಸೂರಿನ ಎಸ್‌ಡಿಎಂ–ಎಂಎಂಕೆ ಮಹಿಳಾ ಮಹಾವಿದ್ಯಾಲಯದಲ್ಲಿ ನಾಳೆ (ಆ.21) ಬೆಳಗ್ಗೆ 7ರಿಂದ ಸಂಜೆ 6ರವರೆಗೆ ಸ್ವರ್ಣಾಮೃತ ಪ್ರಾಶನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮಾಹಿತಿಗೆ ಡಾ.ಸುಮಂತ್ ಮೊ.8123087806 ಸಂಪರ್ಕಿಸಬಹುದು.

ನಿಧನ

ಬೋಜರಾಜ ಬಲ್ಲಾಳ್



ಮೈಸೂರು,ಆ.20–ರೈಲ್ವೆ ನಿವೃತ್ತ ಉದ್ಯೋಗಿ ಹಾಗೂ ಕೃಷ್ಣಮೂರ್ತಿಪುರಂ ನಿವಾಸಿ ಬೋಜರಾಜ ಬಲ್ಲಾಳ್ ಇಂದು ಮುಂಜಾನೆ ನಿಧನರಾದರು. ಮೃತರಿಗೆ 95 ವರ್ಷ ವಯಸ್ಸಾಗಿತ್ತು. ಇವರು ಪತ್ನಿ ಶಾರದಾ ಬಲ್ಲಾಳ್, ಪುತ್ರರಾದ ಹರೀಶ್ ಬಲ್ಲಾಳ್, ಮಹೇಶ್ ಬಲ್ಲಾಳ್, ಪುತ್ರಿ ಪದ್ಮಿನಿ ರಾಜ್ ಸೇರಿದಂತೆ ಅಪಾರ ಬಂಧು–ವರ್ಗ, ಸ್ನೇಹಿತರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಭಾವತಿ



ಮೈಸೂರಿನ ರಮಾಬಾಯಿ ನಗರದ ನಿವಾಸಿ, ಲೇಟ್ ಶಿವಕುಮಾರ್ ಹಂಚಿನಂಗಡಿ(ಗುಂಡ್ಲುಪೇಟೆ) ಅವರ ಧರ್ಮಪತ್ನಿ ಪ್ರಭಾವತಿ(73) ಬುಧವಾರ ನಿಧನರಾದರು. ಮೃತರು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಆ.21 ರಂದು ಮಧ್ಯಾಹ್ನ ವಿದ್ಯಾರಣ್ಯಪುರಂ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಆನೆ ಮರಿ ತಾಯಿಯೊಂದಿಗೆ ಸೇರಿಸಲು ಕರ್ನಾಟಕ, ಕೇರಳ ಅರಣ್ಯ ಸಿಬ್ಬಂದಿ ಜಂಟಿ ಕಾರ್ಯಾಚರಣೆ

ಕೇರಳದ ಶಾಲೆಯೊಂದರ ಆವರಣದಲ್ಲಿ ಪ್ರತ್ಯಕ್ಷವಾಗಿದ್ದ ಆನೆ ಮರಿ ಬೆಳಗಾಗುವುದರಲ್ಲಿ ರಾಜ್ಯದ ಅರಣ್ಯ ಪ್ರದೇಶದಲ್ಲಿ ಪತ್ತೆಯಾಗಿದ್ದು ಅಚ್ಚರಿ ಸಂಗತಿ

ಮೈಸೂರು, ಆ.20(ಎಂಟಿವೈ)–ಕೇರಳದ ಸುಲ್ತಾನ್ ಬತೇರಿಯಲ್ಲಿ ಪತ್ತೆಯಾಗಿ, ಮೂರು ದಿನದ ಬಳಿಕ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಬಳ್ಳೆ ಸಮೀಪ ಕಾಣಿಸಿಕೊಂಡಿದ್ದ 3 ತಿಂಗಳ ಹೆಣ್ಣಾನೆ ಮರಿಯನ್ನು ಮರಳಿ ತಾಯಿ ಮಡಿಲಿಗೆ ಸೇರಿಸಲು ಕರ್ನಾಟಕ ಮತ್ತು ಕೇರಳ ಅರಣ್ಯ ಸಿಬ್ಬಂದಿ ಜಂಟಿ ಕಾರ್ಯಾಚರಣೆಗೆ ತೀರ್ಮಾನಿಸಿದ್ದು, ತಾಯಿ ಆನೆಯ ಹುಡುಕಾಟ ಆರಂಭವಾಗಿದೆ.

ಕೇರಳದ ವೈಯನಾಡು ಜಿಲ್ಲೆ ಸುಲ್ತಾನ್ ಬತೇರಿಯ ಪುಲಪಳ್ಳಿ ಸರ್ಕಾರಿ ಶಾಲಾ ಆವರಣದಲ್ಲಿ ಮೂರು ದಿನದ ಹಿಂದೆ ಕಾಣಿಸಿಕೊಂಡಿದ್ದ ತಾಯಿಯಿಂದ ಬೇರ್ಪಟ್ಟಿದ್ದ ಮೂರು ತಿಂಗಳ ಈ ಹೆಣ್ಣಾನೆ ಮರಿ, ಮಂಗಳವಾರ ಗಡಿ ದಾಟಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಡಿ.ಬಿ.ಕುಪ್ಪೆ ವಲಯದ ಕಡಗದ್ದೆ ಬಳಿ ಪ್ರತ್ಯಕ್ಷವಾಗಿತ್ತು. ಎರಡು ದಿನದಿಂದ ಹಸಿವಿನಿಂದ ಬಳಲಿದ್ದ ಆನೆ ಮರಿ ವಿಷಯ ತಿಳಿದು ಸ್ಥಳಕ್ಕಾಗಮಿಸಿದ್ದ ಅರಣ್ಯ ಸಿಬ್ಬಂದಿ ಆನೆ ಮರಿಗೆ ಉಪಚರಿಸಿದ್ದರು.

ಪಶುವೈದ್ಯರ ಸಲಹೆ ಪಡೆದು ಸುತ್ತಮುತ್ತಲಿನ ಗ್ರಾಮ, ಹಾಡಿಗಳಲ್ಲಿ ಮೇಕೆ (ಆಡು) ಹಾಲನ್ನು ಸಂಗ್ರಹಿಸಿ ಆನೆ ಮರಿಗೆ ಕುಡಿಸಿ, ರಕ್ಷಿಸಿದ್ದರು. ಹಸುವಿನ ಹಾಲು ಣಿಸಿದರೆ, ಅದರ ಆರೋಗ್ಯದಲ್ಲಿ ವ್ಯತ್ಯಯವಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಮೇಕೆ ಹಾಲಿನ ಮೊರೆ ಹೋಗಲಾಗಿತ್ತು. ರಾತ್ರಿಯಿಡೀ ತಾಯಿಯ ನಿರೀಕ್ಷೆಯೊಂದಿಗೆ ಮರಿ ಆನೆಯ ಜೊತೆಯಲ್ಲಿಯೇ ಕಾಲ ಕಳೆದ ಸಿಬ್ಬಂದಿಗೆ ನಿರಾಸೆಯಾಗಿದೆ.



ಆಹಾರವಿಲ್ಲದೆ ನಿತ್ರಾಣಗೊಂಡು ಸೊರಗಿರುವ ಆನೆ ಮರಿ.

ಕೇರಳ ಅಧಿಕಾರಿಗಳೊಂದಿಗೆ ಚರ್ಚೆ: ಅಂತರಸಂತೆ ಎಸಿಎಫ್ ಮಧು, ವೈಯನಾಡು ಅರಣ್ಯ ವಿಭಾಗದ ಡಿಸಿಎಫ್ ವರುಣ್ ಹಾಗೂ ಎಸಿಎಫ್ ಅಜಿತ್ ಅವರನ್ನು ಸಂಪರ್ಕಿಸಿ ಆನೆ ಮರಿಯ ಮಾಹಿತಿ ನೀಡಿದ್ದಾರೆ. ಅಲ್ಲದೆ, ಮರಿಯಾನೆಗೆ ಕೇವಲ 3 ತಿಂಗಳಾಗಿರುವುದರಿಂದ ಅದರ ಸಂರಕ್ಷಣೆ ಸವಾಲಾಗಿದ್ದು, ತಾಯಿ ಮಡಿಲಿಗೆ ಸೇರಿಸಿದರೆ ಆನೆ ಮರಿ ಚೇತರಿಸಿಕೊಳ್ಳುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜಂಟಿ ಕಾರ್ಯಾಚರಣೆ: ಕೇರಳ ಮತ್ತು ಕರ್ನಾಟಕ ಅರಣ್ಯ ಇಲಾಖೆ ಜಂಟಿ ಕಾರ್ಯಾಚರಣೆ ಮೂಲಕ ತಾಯಿ ಆನೆ ಹುಡುಕಲು ನಿರ್ಧರಿಸಲಾಗಿದ್ದು, ಇಂದು ಪುಲಪಳ್ಳಿ ಸಮೀಪದ ಅರಣ್ಯ ಪ್ರದೇಶದಲ್ಲಿ ಶೋಧನೆ ಆರಂಭಿಸಲಾಗಿದೆ. ಒಂದು ವೇಳೆ ಯಾವುದೇ ಆನೆ ಅದರ ತಾಯಿ ಇರಬಹುದು ಎಂಬ ಅನುಮಾನ ಬಂದರೆ ಮರಿಯನ್ನು ಅದರ ಬಳಿ ಬಿಟ್ಟು, ಗಮನಿಸಲಾಗುತ್ತದೆ. ಅದು ವಾತ್ಸಲ್ಯ ತೋರಿದರೆ ಸರಿ, ಇಲ್ಲದಿದ್ದರೆ ಆರೈಕೆ ಮಾಡಲು ನಿರ್ಧರಿಸಲಾಗಿದೆ.

ಹೊಳೆ ಬಳಿ ಬಂದು ಹೋದ ಹೆಣ್ಣಾನೆ: ಈ ನಡುವೆ ಕೇರಳ ಭಾಗದ ಹಾಡಿಯೊಂದರ ಬಳಿ ಕಳೆದ ಎರಡು ದಿನದಿಂದ ಹೆಣ್ಣಾನೆಯೊಂದರ ತೊಳಲಾಟದ ಮಾಹಿತಿಯನ್ನು ಸ್ಥಳೀಯರು ನೀಡಿದ್ದು, ಇದೀಗ ಆ ಭಾಗದಲ್ಲಿ ತಾಯಿ ಆನೆ ಇರುವಿಕೆಯ ವಿಶ್ವಾಸದಿಂದ ಹುಡುಕಾಟಕ್ಕೆ ನಿರ್ಧರಿಸಲಾಗಿದೆ.

ಕೇರಳ ಸಿಬ್ಬಂದಿ ಬಿಟ್ಟು ಹೋದರೆ..??

ಆನೆ ಮರಿ ಗಡಿ ದಾಟಿರುವ ಸಂಗತಿಯೇ ರೋಚಕವಾಗಿದೆ. ಹೊಳೆ ತುಂಬಿ ಹರಿಯುತ್ತಿರುವುದರಿಂದ ಮೂರು ತಿಂಗಳ ಮರಿ, ಈಜಿ ದಡ ಸೇರುವುದು ಅಸಾಧ್ಯ ಎಂಬುದು ತಜ್ಞರ ಅಭಿಪ್ರಾಯವಾಗಿದೆ. ಕೇರಳದ ಪುಲ್ಪಪಳ್ಳಿಯ ಶಾಲಾ ಆವರಣದಿಂದ ರಕ್ಷಣೆ ಮಾಡಿ, ಗೂಡ್ಸ್ ವಾಹನದಲ್ಲಿ ಅಲ್ಲಿನ ಸಿಬ್ಬಂದಿ ತಂದು ಸಮೀಪದ ಅರಣ್ಯ ಪ್ರದೇಶದಲ್ಲಿ ಬಿಟ್ಟು ಹೋಗಿದ್ದಾರೆ. ಬಳಿಕ ಆನೆ ಮರಿಯೂ ವಾಹನವನ್ನು ಹಿಂಬಾಲಿಸಿರುವ ವಿಡಿಯೋ ತುಣುಕು ವೈರಲ್ ಆಗಿದೆ. ಆದರೆ ಮರುದಿನವೆ ಕರ್ನಾಟಕದಲ್ಲಿ ಪ್ರತ್ಯಕ್ಷವಾಗಿರುವುದು ಅಚ್ಚರಿ ಉಂಟುಮಾಡಿದೆ. ಕೇರಳ ಅರಣ್ಯ ಸಿಬ್ಬಂದಿ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಕರ್ನಾಟಕ ಗಡಿ ದಾಟಿಸಿ ಬಿಟ್ಟು ಹೋಗಿರುವ ಶಂಕೆ ವ್ಯಕ್ತವಾಗುತ್ತಿದೆ. ಆದರೆ, ರಸ್ತೆ ಮಾರ್ಗದಲ್ಲಿ ಹಾದು ಬರಲು ಸಾಧ್ಯವಿಲ್ಲ. ಚೆಕ್‌ಪೋಸ್ಟ್ ಸಿಬ್ಬಂದಿಯ ಕಣ್ತಪ್ಪಿಸಿ, ಆನೆ ಮರಿಯನ್ನು ಗಡಿ ದಾಟಿಸಲು ಸಾಧ್ಯವಿಲ್ಲ. ಆದರೆ, ಬೋಟ್‌ನಲ್ಲಿ ಹೊಳೆ ದಾಟಿಸಿ, ಬಿಟ್ಟು ಹೋಗಿರಬಹುದು ಎಂಬ ಅನುಮಾನ ಸ್ಥಳೀಯರದ್ದು. ಆದರೆ, ಈ ಆರೋಪವನ್ನು ವೈಯನಾಡು ಅರಣ್ಯ ಸಿಬ್ಬಂದಿ ನಿರಾಕರಿಸಿದ್ದಾರೆ. ಈ ನಡುವೆ ನಾಗರಹೊಳೆಯ ಡಿ.ಬಿ.ಕುಪ್ಪೆ ವಲಯದ ಕಡಗದ್ದೆ ಬಳಿ ಹೊಳೆ ಭಾಗದ ಕಾಡು ಜಾಡಿ(ಹಾದಿ)ನಲ್ಲಿ ಬರುತ್ತಿದ್ದ ಆನೆ ಮರಿಯನ್ನು ನೋಡಿರುವ ಸ್ಥಳೀಯರು ಆ ವೇಳೆ ಹೊಳೆ ಭಾಗದಲ್ಲಿ ಯಾರೂ ಇರಲಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಆನೆ ಕ್ಯಾಂಪ್‌ನಲ್ಲೇ ಸಾಕಿ

ಆನೆ ಮರಿಯನ್ನು ಕರ್ನಾಟಕದ ಯಾವುದಾದರೂ ಆನೆ ಕ್ಯಾಂಪ್‌ನಲ್ಲೇ ಸಾಕುವಂತೆ ಪ್ರಾಣಿ ಪ್ರಿಯರು ಆಗ್ರಹಿಸಿದ್ದಾರೆ. ಆನೆ ಮರಿ ಗಡಿ ದಾಟಿ ಕರ್ನಾಟಕ ಪ್ರವೇಶಿಸಿರುವುದರಿಂದ ಮತ್ತೆ ಅದನ್ನು ಕೇರಳಕ್ಕೆ ಕಳುಹಿಸದೆ, ರಾಜ್ಯದ ಯಾವುದಾದರು ಕ್ಯಾಂಪ್‌ನಲ್ಲಿ ಪಾಲನೆ ಮಾಡುವಂತೆ ಸಾಮಾಜಿಕ ಜಾಲತಾಣಗಳಲ್ಲಿ ಒಕ್ಕೊರಲ ಆಗ್ರಹವಿದೆ. ರಾಜ್ಯದ ಕ್ಯಾಂಪ್‌ಗಳಲ್ಲಿ ಹೆಣ್ಣಾನೆ ಕೊರತೆ ಇರುವುದರಿಂದ ಆನೆ ಮರಿಯನ್ನು ಇಲ್ಲಿಯೇ ಸಾಕುವಂತೆಯೂ ಒತ್ತಾಯಿಸಲಾಗುತ್ತಿದೆ.

ಮೈಸೂರು ದಸರಾ ಮಹೋತ್ಸವ–2025

ರಸ್ತೆಗಳ ಗುಂಡಿ ಮುಚ್ಚುವ ಕಾರ್ಯ ಆರಂಭ

ಮೈಸೂರು,ಆ.20(ಎಂಟಿವೈ)– ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನ ಗುಂಡಿ ಬಿದ್ದ ರಸ್ತೆಗಳಿಗೆ ಮುಕ್ತಿ ನೀಡುವ ನಿಟ್ಟಿನಲ್ಲಿ ಮೈಸೂರು ಮಹಾನಗರಪಾಲಿಕೆ ಪ್ರಯತ್ನಶೀಲವಾಗಿದ್ದು, ವಿವಿಧ ವಲಯ ಕಚೇರಿ ವ್ಯಾಪ್ತಿಯಲ್ಲಿ ಹಂತ ಹಂತವಾಗಿ ರಸ್ತೆ ಗುಂಡಿ ಮುಚ್ಚುವ ಹಾಗೂ ಮರು ಡಾಂಬರೀಕರಣ ಕಾಮಗಾರಿ ಆರಂಭಿಸಿದೆ.

ಮೈಸೂರು ನಗರಪಾಲಿಕೆ ವಲಯ ಕಚೇರಿ–4ರ ವ್ಯಾಪ್ತಿಯ ವಿವಿಧ ರಸ್ತೆಗಳ ಗುಂಡಿ ಮುಚ್ಚುವ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಮೊದಲಿಗೆ ಪ್ರಮುಖ ರಸ್ತೆಗಳನ್ನು ಗುರುತಿಸಲಾಗಿದೆ. 30 ಲಕ್ಷರೂ. ವೆಚ್ಚದಲ್ಲಿ ಗುಂಡಿ ಮುಚ್ಚುವ ಕಾಮಗಾರಿ ಆರಂಭಿಸಿದೆ. ಅಲ್ಲದೆ, 1.25 ಕೋಟಿ ರೂ. ವೆಚ್ಚದಲ್ಲಿ ವಿವಿಧ ರಸ್ತೆಗಳ ಮರು ಡಾಂಬರೀಕರಣ, ಪಾದಚಾರಿ ಮಾರ್ಗ ನಿರ್ಮಾಣ, ಚರಂಡಿ ನಿರ್ಮಾಣ ಹಾಗೂ ದುರಸ್ತಿ ಕಾಮಗಾರಿ ಆರಂಭಿಸಲಾಗಿದೆ. ದಸರಾ ಉದ್ಘಾಟನೆಗೆ ಕೇವಲ 33 ದಿನ ಬಾಕಿ ಇರುವುದರಿಂದ ರಸ್ತೆಯ ಗುಂಡಿ ಮುಚ್ಚುವ ಕಾಮಗಾರಿ ಆರಂಭಿಸಲಾಗಿದೆ.



ಮೈಸೂರು ವಿಶ್ವವಿದ್ಯಾನಿಲಯದ ಬಳಿ ಬೋಗಾದಿ ರಸ್ತೆಯಲ್ಲಿ ಗುಂಡಿ ಮುಚ್ಚುವ ಕಾರ್ಯ ಪ್ರಾರಂಭವಾಗಿದೆ.

ಬೋಗಾದಿಯ ರಿಂಗ್ ರಸ್ತೆಯ ಜಂಕ್ಷನ್‌ನಿಂದ ಕುಕ್ಕರಹಳ್ಳಿ ಕೆರೆವರೆಗೂ ಗುಂಡಿ ಮುಚ್ಚುವ ಹಾಗೂ ಮರು ಡಾಂಬರೀಕರಣ ಮಾಡುವ ಕಾರ್ಯ ಆರಂಭವಾಗಿದೆ. ಅಲ್ಲದೆ, ಹುಣಸೂರು ರಸ್ತೆ, ಜೆ.ಸಿ. ರಸ್ತೆ, ಗೋಕುಲಂ ಮುಖ್ಯರಸ್ತೆ ಹಾಗೂ ಕೆಆರ್‌ಎಸ್ ರಸ್ತೆಗಳಲ್ಲೂ ಗುಂಡಿ ಮುಚ್ಚುವ ಕಾರ್ಯ ಆರಂಭಿಸಲಾಗಿದ್ದು, 10 ದಿನದೊಳಗೆ ಕಾಮಗಾರಿ ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ.

ಸಂಪುಟದಿಂದ ಕೆ.ಎನ್.ರಾಜಣ್ಣ ವಜಾ ಖಂಡಿಸಿ ಆ.29ಕ್ಕೆ ಮೈಸೂರಲ್ಲಿ, ಸೆ.2ಕ್ಕೆ ಚಾ.ನಗರದಲ್ಲಿ ನಾಯಕರ ಸಂಘ ಪ್ರತಿಭಟನೆ

ಮೈಸೂರು, ಆ.20(ಜಿಎ)–ಸಚಿವ ಸಂಪುಟದಿಂದ ಕೆ.ಎನ್.ರಾಜಣ್ಣ ಅವರನ್ನು ವಜಾಗೊಳಿಸಿರುವುದನ್ನು ಖಂಡಿಸಿ, ಸಂಪುಟಕ್ಕೆ ಮರು ಸೇರ್ಪಡೆ ಮಾಡಿಕೊಳ್ಳುವಂತೆ ಆಗ್ರಹಿಸಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕರ ಕ್ಷೇಮಾಭಿವೃದ್ಧಿ ಸಂಘ ವತಿಯಿಂದ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಎಂ.ರಾಮಚಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಗಸ್ಟ್ 29ರಂದು 10 ಗಂಟೆಗೆ ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಮೆರವಣಿಗೆ ಮೂಲಕ ಡಿಸಿ ಕಚೇರಿಗೆ ತೆರಳಿ ಮನವಿ ಸಲ್ಲಿಸಲಾಗುವುದು. ಸೆಪ್ಟೆಂಬರ್ 2ರಂದು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಲಿದ್ದು, ಅಂದು ಬೆಳಗ್ಗೆ 10 ಗಂಟೆಗೆ ಚಾಮರಾಜೇಶ್ವರ ದೇವಾಲಯದಿಂದ ಜಿಲ್ಲಾಧಿಕಾರಿ ಕಚೇರಿವರೆಗೂ ಮೆರವಣಿಗೆಯಲ್ಲಿ ತೆರಳಿ ನಂತರ ಡಿಸಿಗೆ ಮನವಿ ಸಲ್ಲಿಸುತ್ತೇವೆ ಎಂದರು.

ಈ ಪ್ರತಿಭಟನೆಗೆ ಎಲ್ಲರೂ ಪಕ್ಷಾತೀತವಾಗಿ ಭಾಗವಹಿಸಬೇಕು. ಈಗಾಗಲೇ ಸಂಘದ ವತಿಯಿಂದ ತಾಲೂಕು ಮಟ್ಟದಲ್ಲಿ ಸಮುದಾಯದ ಜನರನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದ್ದು, ಈ ಬೃಹತ್ ಪ್ರತಿಭಟನೆ ಮೂಲಕ ರಾಜ್ಯ ಸರ್ಕಾರಕ್ಕೆ ಸಮುದಾಯದ ಒಗ್ಗಟ್ಟು ಪ್ರದರ್ಶಿಸುತ್ತೇವೆ ಎಂದು ತಿಳಿಸಿದರು.

ಕೆ.ಎನ್.ರಾಜಣ್ಣ ಅವರಿಗೆ ಮಾಡಿದ ಅವಮಾನ ನಾಯಕ ಸಮುದಾಯಕ್ಕೆ ಮಾಡಿದ ಘೋರ ಅನ್ಯಾಯವಾಗಿದೆ. ರಾಜ್ಯದ ಶೋಷಿತ ಸಮುದಾಯವಾದ ನಾಯಕ ಸಮುದಾಯವನ್ನು ದಮನ ಮಾಡಲು ಹುನ್ನಾರ ನಡೆದಿದೆ. ಇದೇ ರೀತಿ ನಾಗೇಂದ್ರ ಅವರಿಗೆ ಅನ್ಯಾಯ ಮಾಡಲಾಯಿತು. ಈಗ ಯಾವುದೇ ನೋಟಿಸ್ ನೀಡದೇ ರಾಜಣ್ಣ ಅವರನ್ನು ಸಂಪುಟದಿಂದ ಏಕಾಏಕಿ ವಜಾ ಮಾಡಲಾಗಿದೆ. ಪಕ್ಷದ ವಿರುದ್ಧ ಹೇಳಿಕೆ ನೀಡಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ, ಈ ಹಿಂದೆ ಪಕ್ಷದ ವಿರುದ್ಧ ಹೇಳಿಕೆ ನೀಡಿದವರಿಗೆ ಏಕೆ ಕ್ರಮ ಕೈಗೊಂಡಿಲ್ಲ. ನಾಯಕ ಸಮುದಾಯ ಎಂದು ಈ ರೀತಿ ಮಾಡುತ್ತಿದ್ದಾರೆ ಎಂದು ಅವರು ದೂರಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಮಹದೇವನಾಯಕ, ಆರ್.ರಾಚಪ್ಪ, ಕೆಂಪನಾಯಕ, ಶ್ರೀನಿವಾಸ ನಾಯಕ, ದ್ಯಾವಪ್ಪನಾಯಕ, ಅಣ್ಣಯ್ಯ ನಾಯಕ, ಮಹದೇವಸ್ವಾಮಿ, ಪ್ರಭಾಕರ್ ಹುಣಸೂರು ಮತ್ತಿತರರಿದ್ದರು.

ಆ.23, ಕರ್ನಾಟಕ ಪವರ್‌ಲಿಫ್ಟಿಂಗ್ ಬೆಂಚ್‌ಪ್ರೆಸ್ ಚಾಂಪಿಯನ್‌ಶಿಪ್

ಮೈಸೂರು,ಆ.20–ಮೈಸೂರು ಜಿಲ್ಲಾ ಪವರ್‌ಲಿಫ್ಟಿಂಗ್ ಅಸೋಸಿಯೇಷನ್ ಹಾಗೂ ಅಪೋಲೋ ವ್ಯಾಯಾಮ ಶಾಲೆಯ ಪ್ರಾಯೋಜಕತ್ವದಲ್ಲಿ ಸಬ್ ಜ್ಯೂನಿಯರ್, ಜೂನಿಯರ್, ಸೀನಿಯರ್ ಮತ್ತು ಮಾಸ್ಟರ್ಸ್ (ಪುರುಷರು ಮತ್ತು ಮಹಿಳೆಯರು) ಬೆಂಚ್‌ಪ್ರೆಸ್ ಚಾಂಪಿಯನ್‌ಶಿಪ್–2025 ಸ್ಪರ್ಧೆಯನ್ನು ಲಯನ್ಸ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್, ಯೂನಿವರ್ಸಿಟಿ ಆಫ್ ಮೈಸೂರು ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಹಳೇ ಡಿ.ಸಿ.ಆಫೀಸ್ ಹತ್ತಿರ ಆ.23ರಂದು ಆಯೋಜಿಸಲಾಗಿದೆ.

ಪ್ರವೇಶ ಶುಲ್ಕ ರೂ. 400 ಆಗಿರುತ್ತದೆ. ಮಾಹಿತಿಗೆ 9380755849 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.08.2025 ಗುರುವಾರ, ಮಳೆ ನಕ್ಷತ್ರ: ಮಖ 17.08.2025ರಿಂದ 30.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಪುಷ್ಯ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಹೆಚ್.ವಿ.ರಾಜೀವ್ ಸ್ನೇಹ ಬಳಗ, ಸುಯೋಗ್ ಆಸ್ಪತ್ರೆ :** ವಿಶ್ವ ಹಿರಿಯರ ದಿನಾಚರಣೆ ಪ್ರಯುಕ್ತ ಹೃದಯ ತಪಾಸಣೆ ಹಾಗೂ ಆರೋಗ್ಯ ತಪಾಸಣಾ ಶಿಬಿರ, ಮುಖ್ಯ ಅತಿಥಿಗಳು : ಸುಯೋಗ್ ಆಸ್ಪತ್ರೆ ಡಾ.ಎಸ್.ಪಿ.ಯೋಗಣ್ಣ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಚಂದ್ರಶೇಖರ್, ಸ್ಥಳ: ಸುಮ ಸೋಪಾನ ಉದ್ಯಾನವನ, ವಿಶ್ವಮಾನವ ಜೋಡಿ ರಸ್ತೆ, ಕುವೆಂಪುನಗರ, ಬೆಳಗ್ಗೆ 7 ರಿಂದ.

■ **ಸಂತ ಫಿಲೋಮಿನಾ ಪದವಿ ಪೂರ್ವ ಕಾಲೇಜು ಮತ್ತು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)** : ತಾಲ್ಲೂಕು ಮಟ್ಟದ ಬಾಲಕರ ವಾಲಿಬಾಲ್ ಹಾಗೂ ಬಾಲಕಿಯರ ಥ್ರೋಬಾಲ್ ಪಂದ್ಯಾವಳಿ, ಸ್ಥಳ: ಕಾಲೇಜಿನ ಒಳಾಂಗಣ ಕ್ರೀಡಾಂಗಣ, ಬನ್ನಿಮಂಟಪ, ಬೆಳಗ್ಗೆ 9ಕ್ಕೆ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯವರ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣ ಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9ರಿಂದ ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಹೈಪೋಥೈರಾಯ್ಡಿಸಮ್‌ಗೆ ಚಿಕಿತ್ಸಾ ಶಿಬಿರ, ಮಧುಮೇಹದ ಗಾಯಗಳಿಗೆ ಚಿಕಿತ್ಸೆ, ಮೈಗ್ರೇನ್‌ಗೆ ಪರಿಹಾರ ಹಾಗೂ ಆಕ್ಯುಪಂಕ್ಚರ್ ಚಿಕಿತ್ಸೆ, ಎಲ್ಲಾ ತರಹದ ತಲೆನೋವಿಗೆ ಚಿಕಿತ್ಸೆ, ಆರ್ಥರೈಟಿಸ್‌ಗೆ, ಕುತ್ತಿಗೆ ನೋವು ಮತ್ತು ಭುಜದ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸಯಾಟೀಕ, ಗೃಧ್ರಸಿ ರೋಗದ ಚಿಕಿತ್ಸಾ ಶಿಬಿರ, ಸ್ಥಳ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.

■ **ಕಾವೇರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ :** ಸ್ವರ್ಣಪ್ರಾಶನ ಕಾರ್ಯಕ್ರಮ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಬೀಜ ಗ್ರಂಥಿ ದೋಷ, ಮಕ್ಕಳಲ್ಲಿ ಕಂಡು ಬರುವ ಕೆಮ್ಮು, ಅಸ್ತಮಾ, ಬೆನ್ನುನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.

■ **ಬಾಸುದೇವ ಸೋಮಾನಿ ಕಾಲೇಜು :** ಸೋಮಾನಿ ಸಂಭ್ರಮ, ಉದ್ಘಾಟನೆ : ಕಾಲೇಜು ಅಧ್ಯಕ್ಷ ಡಾ. ಎಂ. ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು : ಕಾರ್ಯದರ್ಶಿ ಕುಬೇರ್ ಪಿ. ಗೌಡ, ಚೀಫ್ ಅಡ್ಮಿನಿಸ್ಟ್ರೇಟರ್ ಪಿ. ಗೀತಾಂಜಲಿ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಮಹದೇವಸ್ವಾಮಿ, ಕಾಲೇಜು ಡೀನ್ ಡಾ. ಟಿ. ರಮೇಶ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಕಲಾಸೌರಭ :** ರಾಗಾಮಾಲಾ ಸೌರಭ, ವಿದುಷಿ ಡಾ. ಸುಕನ್ಯಾ ಪ್ರಭಾಕರ್ ಅವರಿಂದ ಕಾನಡ ರಾಗದ ಅಧ್ಯಯನ ಶಿಬಿರ, ಸ್ಥಳ: ಕಲಾಸೌರಭ, ರಾಮಕೃಷ್ಣನಗರ, ಸಂಜೆ 4.30ಕ್ಕೆ.

■ **ಶ್ರೀಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ. ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಪ್ರವಚನ, ವಾಚನ–ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ಗಂಟೆಯಿಂದ.

■ **ಸಂಚಲನ ಮೈಸೂರು :** ಸಂಚಲನ ರಂಗ ತಂಡದ ಕಲಾವಿದರಿಂದ ಎರಡೆರಡ್ಲಾ ಐದು ನಾಟಕ ಪ್ರದರ್ಶನ, ರಚನೆ : ಆಸಿಫ್ ಕ್ಷತ್ರಿಯ, ನಿರ್ದೇಶನ : ಶ್ವೇತಾ ಶ್ರೀನಿವಾಸ್ ಮತ್ತು ಆಸಿಫ್ ಕ್ಷತ್ರಿಯ, ಸ್ಥಳ: ಕಿರುರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ.ಸಿ.ನಾಗಣ್ಣ, ನಿರ್ಮಾಣ–ಜಿ. ಶಾಂತ ಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಜಯಂತಿ ವಿ. ಭಟ್, ವ್ಯಾಖ್ಯಾನ : ಡಾ.ಬಿ.ವಿ.ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಡಿನಲ್ಲಿನ ಕಥೆಗಳು. ಭಾಗವಹಿಸುತ್ತಾರೆ– ನಿವೃತ್ತ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕರ್ನಾಟಕ ರಾಜ್ಯ ಮೃಗಾಲಯ ಪ್ರಾಧಿಕಾರದ ಸದಸ್ಯರಾದ ಎಂ. ಎನ್. ಜಯಕುಮಾರ್, ಪ್ರಸ್ತುತಿ : ಶಾಂತಕುಮಾರ್ .ಜಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ, 6.50 ಕೃಷಿರಂಗ–ಮಂಡ್ಯದಲ್ಲಿ ನಡೆದ ನಂ ಕಂಪನಿ ಬಾನುಲಿ ಸರಣಿಯ ಸಮಾರೋಪ ಸಮಾರಂಭದ ಅವತರಣಿಕೆಗಳು, ಪ್ರಸ್ತುತಿ– ಎನ್.ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ–ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ಸಾಮಾನ್ಯ ಜ್ಞಾನ ರಸಪ್ರಶ್ನೆ ಕಾರ್ಯಕ್ರಮ, ನಡೆಸಿಕೊಡುತ್ತಾರೆ ನಿವೇದಿತಾ ಎಚ್., 9.30 ಕನ್ನಡ ಭಾರತಿ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ.

ಮೈಸೂರು ಮಿತ್ರ

ದಸರಾ ವೇಳೆ ಮೈಸೂರು ಘನತೆ–ಗೌರವ ಕಾಪಾಡಿಕೊಳ್ಳಬೇಕಾದರೆ....

ರಸ್ತೆಗುಂಡಿ ಮುಚ್ಚಿ, ರಸ್ತೆಬದಿ ವ್ಯಾಪಾರಿಗಳಿಗೆ ಕಡಿವಾಣ ಹಾಕಿ, ಪ್ಲಾಸ್ಟಿಕ್ ನಿರ್ಮೂಲನೆ ಮಾಡಿ

● ಮೈಸೂರು ಪಾಲಿಕೆ ಆಡಳಿತ ವರ್ಗಕ್ಕೆ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡರ ಸಲಹೆ ● ಗೌಡರ ಈ ಸಲಹೆಗೆ ವಿವಿಧ ಸಂಘಟನೆಗಳ ಮುಖಂಡರ ಒಕ್ಕೊರಲ ಸಹಮತ ● ದಸರಾ ಸಂದರ್ಭ ಸ್ವಚ್ಛತೆಗೆ ಆದ್ಯತೆ ನೀಡುವ ಸಂಬಂಧ ವಿವಿಧ ಸಂಘ–ಸಂಸ್ಥೆಗಳ ಮುಖಂಡರೊಂದಿಗೆ ಪಾಲಿಕೆ ಆಯುಕ್ತರ ಸಭೆ

ಮೈಸೂರು, ಆ.20(ಎಸ್‌ಪಿಎನ್)– ಈ ಬಾರಿ ದಸರಾ ಮಹೋತ್ಸವ ಸಂದರ್ಭದಲ್ಲಿ ಸ್ವಚ್ಛತೆ, ಸಂಚಾರ ವಿಚಾರವಾಗಿ ದೇಶ – ವಿದೇಶಗಳಲ್ಲಿ ಮೈಸೂರಿನ ಘನತೆ, ಗೌರವ ಉಳಿಸಿಕೊಳ್ಳಬೇಕಾದರೆ, ಮೊದಲು ಗುಂಡಿ ಮುಚ್ಚಿ, ಅನಧಿಕೃತ ರಸ್ತೆಬದಿ ವ್ಯಾಪಾರಿಗಳಿಗೆ ಕಡಿವಾಣ ಹಾಕಿ ಹಾಗೂ ಎಲ್ಲೆಂದರಲ್ಲಿ ಬಿಸಾಕುವ ಪ್ಲಾಸ್ಟಿಕ್ ತ್ಯಾಜ್ಯ ನಿರ್ಮೂಲನೆ ಅತ್ಯಗತ್ಯ ಎಂದು ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡರ ಸಲಹೆಗೆ ವಿವಿಧ ಸಂಘಟನೆಗಳ ಮುಖಂಡರು ಒಕ್ಕೊರಲ ಬೆಂಬಲ ಸೂಚಿಸಿದರು.

ಮೈಸೂರು ಶಾರದಾದೇವಿನಗರದಲ್ಲಿರುವ ಮೈಸೂರು ನಗರ ಪಾಲಿಕೆ ವಲಯ ಕಚೇರಿ–3ರಲ್ಲಿ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಅವರ ನೇತೃತ್ವದಲ್ಲಿ ದಸರಾ ಸಂದರ್ಭದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡುವ ಸಂಬಂಧ ಮೈಸೂರಿನ ವಿವಿಧ ಸಂಘ–ಸಂಸ್ಥೆಗಳ ಪ್ರಮುಖರೊಂದಿಗಿನ ಸಭೆಯಲ್ಲಿ ಈ ಅಭಿಪ್ರಾಯ ವ್ಯಕ್ತವಾಯಿತು.

ಫುಟ್‌ಪಾತ್ ಅತಿಕ್ರಮಣಕ್ಕೆ ಕಡಿವಾಣ ಹಾಕಿ: ಈ ಬಾರಿಯ ದಸರಾ ಮಹೋತ್ಸವದಲ್ಲಿ ಸ್ವಚ್ಛತೆಗೆ ವಿಶೇಷ ಆದ್ಯತೆ ನೀಡುವುದರೊಂದಿಗೆ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಲು ಮೈಸೂರು ಮಹಾನಗರ ಪಾಲಿಕೆ ಮುಂದಾಗಿರುವುದು ಉತ್ತಮ ವಿಚಾರ. ಆದರೆ, ಮೈಸೂರು ಸುಂದರವಾಗಿ ಕಾಣಲು ರಸ್ತೆಬದಿ ವ್ಯಾಪಾರಿಗಳು ರಸ್ತೆ ಆಕ್ರಮಿಸುವುದರಿಂದ ಸಾಧ್ಯವಾಗುತ್ತಿಲ್ಲ. ಫುಟ್‌ಪಾತ್ ಒತ್ತುವರಿಯಿಂದಾಗಿ ಪಾದಚಾರಿಗಳ ಓಡಾಟಕ್ಕೆ ತೊಂದರೆ ಅನುಭವಿಸುತ್ತಿರುವ ವಿದೇಶಿ ಪ್ರವಾಸಿಗರ ಮನಸ್ಸಿನಲ್ಲಿ ಮೈಸೂರಿನ ಬಗ್ಗೆ ಕೆಟ್ಟ ಭಾವನೆ ಮೂಡುತ್ತಿದೆ. ಇದಕ್ಕೆ ಮೊದಲು ಕಡಿವಾಣ ಹಾಕಿ ಎಂದು ಸಲಹೆ ನೀಡಿದರು.

ಈ ವಿಚಾರವಾಗಿ ಎಲ್ಲಾ ಸಂಘ–ಸಂಸ್ಥೆಗಳು ಪಾಲಿಕೆ ಅಧಿಕಾರಿಗಳ ಬೆಂಬಲಕ್ಕೆ ನಿಲ್ಲುತ್ತೇವೆ. ದಸರಾ ಸಂದರ್ಭದಲ್ಲಿ ಸ್ವಯಂ ಸೇವಕರಾಗಿ ಕೆಲಸ ಮಾಡಲು ಕೆಲವು ಯುವಕರು ಉತ್ಸುಕರಾಗಿದ್ದಾರೆ. ಯಾವ ಕೆಲಸ, ಎಷ್ಟು ಮಂದಿ ಸ್ವಯಂ ಸೇವಕರ ಅವಶ್ಯಕತೆ ಇದೆ ಎಂಬುದನ್ನು ಮಾಹಿತಿ ನೀಡಿದರೆ, ಸಹಕಾರಿಸುವುದಾಗಿ ಮಾಹಿತಿ ನೀಡಿದರು. ಇದಕ್ಕೆ ಯುವ ಬ್ರಿಗೇಡ್ ಹಾಗೂ ಇತರೆ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಸ್ವಯಂಸೇವಕರಿಗೆ ವ್ಯವಸ್ಥೆ ಮಾಡಲು ಒಪ್ಪಿಕೊಂಡರು.

ಇದಕ್ಕೂ ಮುನ್ನ ಪಾಲಿಕೆ ಎಇಇ ಮೃತ್ಯುಂಜಯ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ಲಾಸ್ಟಿಕ್ ತ್ಯಾಜ್ಯಗಳಿಂದ ಮೈಸೂರು ಅರಮನೆ, ಅಂಬಾರಿ ಮತ್ತು ಸ್ವಚ್ಛತೆಯ ಪ್ರತಿನಿಧಿಯಾದ ಪೌರಕಾರ್ಮಿಕ ಮಹಿಳೆಯ ಕಲಾಕೃತಿಯನ್ನು ನಿರ್ಮಿಸುವ ಮೂಲಕ ಸ್ವಚ್ಛತೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಪಾಲಿಕೆ ನಿರ್ಧರಿಸಿದ್ದು, ಇದಕ್ಕೆ ಮೈಸೂರಿನ ಸಂಘ–ಸಂಸ್ಥೆಗಳ ಬೆಂಬಲವೂ ಅತೀಮುಖ್ಯ ಎಂದರು.

ಆಹಾರ ವೇಸ್ಟ್ ಮಾಡಬೇಡಿ: ಈ ಬಾರಿ ಆಹಾರ ಮೇಳದಲ್ಲಿ ಜನರು ತಿನ್ನದೇ ವೇಸ್ಟ್ ಮಾಡಿ ಬಿಸಾಡುವ ಆಹಾರ ತ್ಯಾಜ್ಯವನ್ನು ಜನರಿಗೆ ತೋರಿಸುವ ಕುರಿತು ಆಲೋಚನೆ ಮಾಡುತ್ತಿದ್ದು, ಇದರಿಂದ ಜನರಲ್ಲಿ ಆಹಾರವನ್ನು ವೇಸ್ಟ್ ಮಾಡದಂತೆ ಅರಿವು ಮೂಡಿಸುವ ಕುರಿತು ಆಲೋಚನೆ ಇದೆ ಎಂದರು.

ಒಣ ಕಸ ಸಂಗ್ರಹ: ನಗರದಲ್ಲಿ ಉತ್ಪಾದನೆಯಾಗುವ ಒಣ ಕಸವನ್ನು ವಿಲೇವಾರಿ ಮಾಡಲು ಖಾಸಗಿ ಪಾನೀಯ ಕಂಪನಿಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗುತ್ತಿದ್ದು, ಸಂಸ್ಥೆಯ ಸ್ವಯಂ ಸೇವಕರು ಒಣಕಸವನ್ನು ಸಂಗ್ರಹಿಸಿ ವಿಲೇವಾರಿ ಮಾಡಲಿದ್ದಾರೆ. ಇದಕ್ಕಾಗಿ ಕಾರ್ಯಸೂಚಿ ರೆಡಿ ಮಾಡಲಾಗುತ್ತಿದೆ ಎಂದರು.

ಪ್ಲಾಸ್ಟಿಕ್ ಕಡಿವಾಣಕ್ಕೆ ದಂಡ ಹಾಕಿ: ಮೈಸೂರು ಗ್ರಾಹಕ ಪರಿಷತ್ ಕಾರ್ಯಾಧ್ಯಕ್ಷ ಬಾಮೀ ವಿ.ಶೆಣೈ ಸಲಹೆ ನೀಡುತ್ತಾ, ದಸರಾ ಸಂದರ್ಭದಲ್ಲಿ ಪ್ಲಾಸ್ಟಿಕ್ ತ್ಯಾಜ್ಯಕ್ಕೆ ಕಡಿವಾಣ ಹಾಕಬೇಕು. ಪಾಲಿಕೆ ನಿಗದಿಪಡಿಸಿದ ಜಾಗದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ವಿಲೇವಾರಿ ಮಾಡದ ಸಾರ್ವಜನಿಕರಿಗೆ ದಂಡ ಹಾಕುವ ವ್ಯವಸ್ಥೆ ತ್ವರಿತವಾಗಿ ಜಾರಿಗೆ ತನ್ನಿ. ಅಂತೆಯೇ ದಸರಾ ಕಾರ್ಯಕ್ರಮದ ವಿವಿಧ ವೇದಿಕೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಬೇಕು. ನೀವು ಅಂದುಕೊಂಡ (ಪಾಲಿಕೆ ಅಧಿಕಾರಿಗಳು) ಕೆಲಸ ಆಗಬೇಕಾದರೆ, ಮಾಜಿ ಮೇಯರ್‌ಗಳು, ಮಾಜಿ ಸದಸ್ಯರ ಸಭೆಯನ್ನು ಪ್ರತ್ಯೇಕವಾಗಿ ಕರೆಯುವಂತೆ ಆಯುಕ್ತರಿಗೆ ಸಲಹೆ ನೀಡಿದರಲ್ಲದೆ, ಸ್ವಚ್ಛತೆ ಕುರಿತು ಶಾಲಾ ಮಕ್ಕಳಲ್ಲಿ ಅಭಿಯಾನ ಭಾಗವಾಗಿಸುವಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಸ್ವಚ್ಛತಾ ಪೋಸ್ಟರ್ ಅನ್ನು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಬಿಡುಗಡೆಗೊಳಿಸಿದರು. ಸಭೆಯಲ್ಲಿ ಪಾಲಿಕೆ ಉಪ ಆಯುಕ್ತ ದಾಸೇಗೌಡ, ಆರೋಗ್ಯಾಧಿಕಾರಿ ಡಾ.ನಾಗರಾಜು, ವಲಯ ಆಯುಕ್ತ ಸತ್ಯಮೂರ್ತಿ, ಆಮ್ ಆದ್ಮಿ ಪಾರ್ಟಿಯ ಮಾಳವಿಕಾ ಗುಬ್ಬಿವಾಣಿ, ಪಾರಂಪರಿಕ ತಜ್ಞ ಪ್ರೊ.ರಂಗರಾಜು, ಎಂಜಿಪಿ ಡಿ.ವಿ.ದಯಾನಂದ ಸಾಗರ್, ಶೋಭನಾ ಸಾಂಬಶಿವನ್ ಸೇರಿದಂತೆ ನಾನಾ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಆಗಮಿಸಿದ್ದರು. ಸ್ವಚ್ಛ ಸರ್ವೇಕ್ಷಣ್ ಸಂದರ್ಭದಲ್ಲಿ ಪಾಲಿಕೆಯೊಂದಿಗೆ ಸಹಕರಿಸಿದ ವಿವಿಧ ಸಂಘಟನೆಗಳ ಮುಖಂಡರಿಗೆ ಪ್ರಮಾಣಪತ್ರ ವಿತರಿಸಿದರು.

ಗುಂಡಿ ಮುಚ್ಚಲು 9 ಕೋಟಿ ಅನುದಾನ

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ಕೆ.ಬಿ.ಲಿಂಗರಾಜು ಸಲಹೆ ನೀಡುತ್ತಾ, ದಸರಾ ಸಂದರ್ಭದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ಬಗ್ಗೆ ಪಾಲಿಕೆ ಅಧಿಕಾರಿಗಳು ಸುಧಾರಣೆಗೆ ಮುಂದಾಗುತ್ತಿರುವುದು ಒಳ್ಳೆಯ ಬೆಳವಣಿಗೆ. ದಸರಾ ವಿವಿಧ ವೇದಿಕೆಗಳಲ್ಲಿ ಪ್ಲಾಸ್ಟಿಕ್ ಬಳಕೆಗೆ ಮೂಲದಲ್ಲೇ ಕಡಿವಾಣ ಹಾಕಿ. ದಸರಾ ಉತ್ಸವ ಉದ್ಘಾಟನೆಗೂ ಮುನ್ನ 'ಗುಂಡಿ ಮುಕ್ತ ಮೈಸೂರು' ಎಂದು ಘೋಷಿಸಿ ಎಂದು ಆಗ್ರಹಿಸಿದರು. ಇದಕ್ಕೆ ಉತ್ತರಿಸಿದ ಆಯುಕ್ತ ಶೇಖ್ ತನ್ವೀರ್ ಆಸೀಫ್, ನಗರ ಪ್ರಮುಖ ರಸ್ತೆಗಳಲ್ಲಿ ಬಿದ್ದಿರುವ ಗುಂಡಿ ಮುಚ್ಚಲು ಈಗಾಗಲೇ ಟೆಂಡರ್ ನೀಡಲಾಗಿದೆ. ಕಳೆದ ಮೂರು ತಿಂಗಳಿಂದ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಗುಂಡಿಮುಚ್ಚಲು ಸಾಧ್ಯವಾಗುತ್ತಿಲ್ಲ. ಇನ್ನು ಮಳೆ ನಿಲ್ಲಲಿ, ಬಿಡಲಿ ಗುಂಡಿ ಮುಚ್ಚಿ ಎಂದು ಕಟ್ಟುನಿಟ್ಟಿನ ಆದೇಶ ನೀಡಿ, 9 ಕೋಟಿ ಅನುದಾನ ಮೀಸಲಿಡಲಾಗಿದೆ ಎಂದು ವಿವಿಧ ಸಂಘಟನೆಗಳ ಪ್ರಮುಖರ ಪ್ರಶ್ನೆಗೆ ಉತ್ತರಿಸಿದರು.



ನಾಡಹಬ್ಬ ದಸರಾ ಮಹೋತ್ಸವದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡುವ ಪೋಸ್ಟರ್‌ಗಳನ್ನು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ನೇತೃತ್ವದಲ್ಲಿ ವಿವಿಧ ಸಂಘಟನೆಗಳು ಬಿಡುಗಡೆಗೊಳಿಸಿದವು.

ಸ್ಥಳದಲ್ಲೇ ಕಲೆಕ್ಟ್ ಮಾಡಿ

ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಮಾತನಾಡಿ, ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನಲೆಯಲ್ಲಿ ಮೈಸೂರು ನಗರದಲ್ಲಿ 15 ದಿನಗಳ ಕಾಲ ನಡೆಯುವ ನಾನಾ ಕಾರ್ಯಕ್ರಮ ವೀಕ್ಷಿಸಲು ಲಕ್ಷಾಂತರ ಮಂದಿ ಪ್ರವಾಸಿಗರು ಆಗಮಿಸುವ ಹಿನ್ನಲೆಯಲ್ಲಿ ಸ್ವಚ್ಛತೆಗೆ ಪ್ರಥಮ ಆದ್ಯತೆ ನೀಡಲಾಗುವುದು. ಕಾರ್ಯಕ್ರಮ ನಡೆಯುವ ಎಲ್ಲಾ ವೇದಿಕೆಗಳಲ್ಲೂ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಾಧ್ಯವಾದಷ್ಟು ಜನರಿಂದ ಸ್ಥಳದಲ್ಲೇ ಕಲೆಕ್ಟ್ ಮಾಡಲು ವ್ಯವಸ್ಥೆ ಮಾಡುವಂತೆ ಅನೇಕರು ಸಲಹೆ ನೀಡಿದರು.

ಈ ಬಾರಿ ವಿವಿಧ ವೇದಿಕೆಗಳಲ್ಲಿ ಉತ್ಪತ್ತಿಯಾಗುವ ಪ್ಲಾಸ್ಟಿಕ್ ತ್ಯಾಜ್ಯದಿಂದಲೇ ಮೈಸೂರು ಅರಮನೆ, ಅಂಬಾರಿ ಆನೆ ಮತ್ತು ಪೌರ ಕಾರ್ಮಿಕ ಮಹಿಳೆಯ ಕಲಾಕೃತಿಯನ್ನು ನಿರ್ಮಿಸಿ ಮೈಸೂರು ನಗರದ ಹೃದಯ ಭಾಗದಲ್ಲಿ ಅನಾವರಣಗೊಳಿಸುವ ಮೂಲಕ ಜನರಿಗೆ ಎಲ್ಲೆಂದರಲ್ಲಿ ಕಸ ಹಾಕದಂತೆ ಅರಿವು ಮೂಡಿಸುವ ಕುರಿತು ಸಭೆಗೆ ಮಾಹಿತಿ ನೀಡಿದರು.

ಪ್ರಾಥಮಿಕ ತರಗತಿ ವಿದ್ಯಾರ್ಥಿಗಳಿಗೆ 'ಆಪರೇಷನ್ ಸಿಂಧೂರ್' ಪಾಠ

ನವದೆಹಲಿ, ಆ.20– ಜಮ್ಮು–ಕಾಶ್ಮೀರದ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತೀಯ ಸೇನೆಯ ಕಾರ್ಯಾಚರಣೆ 'ಆಪರೇಷನ್ ಸಿಂದೂರ್' ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ ಎರಡು ವಿಶೇಷ ಮಾಡ್ಯೂಲ್‌ಗಳನ್ನು ಬಿಡುಗಡೆ ಮಾಡಿದೆ.

ಸಂವಾದಾತ್ಮಕ ಶೈಲಿಯಲ್ಲಿ ಪ್ರಸ್ತುತಪಡಿಸಲಾದ ಈ ಮಾಡ್ಯೂಲ್‌ಗಳು ಕಾರ್ಯಾಚರಣೆಯ ಪ್ರತಿಯೊಂದು ಅಂಶ ಮತ್ತು ಅದರ ಹಿಂದಿನ ಹಂತವನ್ನು ವಿವರಿಸುತ್ತವೆ.

'ಆಪರೇಷನ್ ಸಿಂದೂರ್ ಎ ಸಾಗಾ ಆಫ್ ವೇಲರ್' ಶೀರ್ಷಿಕೆಯ ಮೊದಲ ಮಾಡ್ಯೂಲ್ ಅನ್ನು ಪೂರ್ವಸಿದ್ಧತಾ ಮತ್ತು ಮಧ್ಯಮ ಹಂತಕ್ಕಾಗಿ ವಿನ್ಯಾಸಗೊಳಿಸಲಾಗಿದೆ, ಆದರೆ 'ಆಪರೇಷನ್ ಸಿಂದೂರ್ ಎ ಮಿಷನ್ ಆಫ್ ಹಾನರ್ ಅಂಡ್ ಬ್ರೇವರಿ' ದ್ವಿತೀಯ ಹಂತವನ್ನು ಗುರಿಯಾಗಿರಿಸಿಕೊಂಡಿದೆ. ಎರಡನ್ನೂ ಆನ್‌ಲೈನ್‌ನಲ್ಲಿ ಬಿಡುಗಡೆ ಮಾಡಲಾಗಿದೆ.

ಪ್ರಾಥಮಿಕ ತರಗತಿಗಳಿಗೆ ಮಾಡ್ಯೂಲ್ ಮೇ 13 ರಂದು ಆಡಂಪುರದಲ್ಲಿ ಸೈನಿಕರನ್ನು ಭೇಟಿಯಾಗುವ ಪ್ರಧಾನಿ ನರೇಂದ್ರ ಮೋದಿಯವರ ಚಿತ್ರದೊಂದಿಗೆ ಪ್ರಾರಂಭವಾಗುತ್ತದೆ. 'ಆಪರೇಷನ್ ಸಿಂದೂರ್ ಸಾಮಾನ್ಯ ಮಿಲಿಟರಿ ಕಾರ್ಯಾಚರಣೆಯಲ್ಲ. ಇದು ಭಾರತದ ನೀತಿ, ಉದ್ದೇಶ ಮತ್ತು ನಿರ್ಣಾಯಕ ಸಾಮರ್ಥ್ಯದ ಸಂಗಮ' ಎಂದು ಪ್ರಧಾನಿ ಮೋದಿಯವರ ಉಲ್ಲೇಖವು ಚಿತ್ರದ ಶೀರ್ಷಿಕೆಯೊಂದಿಗೆ ಪುಸ್ತಕಕ್ಕೆ ಧ್ವನಿಯನ್ನು ಹೊಂದಿಸುತ್ತದೆ.

ಪತ್ರಿಕಾ ಗೋಷ್ಠಿಗಳಲ್ಲಿ ವಿವರಿಸಿದಂತೆ ಮೇ.7 ರಂದು ಬೆಳಗ್ಗೆ 1.05 ಕ್ಕೆ ಪ್ರಾರಂಭಿಸಲಾದ ಕಾರ್ಯಾಚರಣೆಯ ವಿವರಗಳನ್ನು ಛಾಯಾಚಿತ್ರಗಳು ಮತ್ತು ಚಾರ್ಟ್‌ಗಳೊಂದಿಗೆ ವಿವರವಾಗಿ ವಿವರಿಸಲಾಗಿದೆ.

ಮಾಧ್ಯಮಿಕ ತರಗತಿಯ ಪುಸ್ತಕವು ಭಾರತದಲ್ಲಿ ಶಾಂತಿಯನ್ನು ಕದಡಲು ಪಾಕಿಸ್ತಾನ ಮಾಡಿದ ಪ್ರಯತ್ನಗಳು ಮತ್ತು 1947, 1965, 1971ರ ಯುದ್ಧಗಳು ಮತ್ತು 1999ರಲ್ಲಿ ಕಾರ್ಗಿಲ್ ಯುದ್ಧಗಳನ್ನು ವಿವರಿಸುತ್ತದೆ. 2016ರ ಉರಿ ದಾಳಿಯಲ್ಲಿ 19 ಸೈನಿಕರು ಹುತಾತ್ಮರಾಗಿದ್ದು ಮತ್ತು 40 ಸಿಆರ್‌ಪಿಎಫ್ ಯೋಧರು ಹುತಾತ್ಮರಾಗಿದ್ದ 2019ರ ಪುಲ್ವಾಮಾ ದಾಳಿಯನ್ನು ವಿವರಿಸಲಾಗಿದೆ. ಪಾಕಿಸ್ತಾನದ ಭಯೋತ್ಪಾದಕ ಶಿಬಿರಗಳು, ಭಾರತ ನಿಯೋಜಿಸಿದ ಕ್ಷಿಪಣಿಗಳು ಮತ್ತು ಅದರ ಮೇಲಿನ ವಿವರವಾದ ನಕ್ಷೆಗಳನ್ನು ಉಲ್ಲೇಖಿಸಲಾಗಿದೆ.

ವಿಧಾನಸಭೆಯಲ್ಲಿ 2025–26ನೇ ಸಾಲಿನ 3352.57 ಕೋಟಿಯ ಪೂರಕ ಅಂದಾಜು ಮಂಡನೆ

ಬೆಂಗಳೂರು, ಆ.20(ಕೆಎಂಶಿ)–2025–26ನೇ ಸಾಲಿನ 3,352.57 ಕೋಟಿ ರೂ. ಮೊತ್ತದ ಪೂರಕ ಅಂದಾಜನ್ನು (ಮೊದಲನೇ ಕಂತು) ವಿಧಾನಸಭೆಯಲ್ಲಿಂದು ಮಂಡಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಪೂರಕ ಅಂದಾಜು ಮಂಡಿಸಿದರು.



ಹೆಚ್.ಸಿ.ಮಹದೇವಪ್ಪ

ಪೂರಕ ಅಂದಾಜುಗಳ ಒಟ್ಟು ಮೊತ್ತದಲ್ಲಿ 0.60 ಕೋಟಿ ರೂ. ಪ್ರಭೃತ ವೆಚ್ಚ ಮತ್ತು 3,351.97 ಕೋಟಿ ರೂ. ಪುರಸ್ಕೃತ ವೆಚ್ಚ ಸೇರಿವೆ. ಮೀಸಲು ನಿಧಿಯಿಂದ ಭರಿಸಲಾಗುವ 262.20 ಕೋಟಿ ರೂ. ಪುರಸ್ಕೃತವಾಗಬೇಕಿದ್ದು, ಇದರಲ್ಲಿ ಕೇಂದ್ರ ಸಹಾಯಕ್ಕೆ ಸಂಬಂಧಿಸಿದ 820.70 ಕೋಟಿ ರೂ. ಸೇರಿದೆ. ಹೊರ ಹೋಗುವ ನಿವ್ವಳ ನಗದು ಮೊತ್ತ 2,269.66 ಕೋಟಿ ರೂ.ಗಳಾಗಿದೆ.

ಜನಾರ್ಧನ ರೆಡ್ಡಿ ಆರೋಪಕ್ಕೆ ತಮಿಳುನಾಡು ಕಾಂಗ್ರೆಸ್ ಸಂಸದ ತಿರುಗೇಟು

ಬೆಂಗಳೂರು: ಧರ್ಮಸ್ಥಳ ವಿರುದ್ಧದ ಷಡ್ಯಂತ್ರದ ಹಿಂದೆ ತಮಿಳುನಾಡು ಕಾಂಗ್ರೆಸ್ ಸಂಸದ ಸಸಿಕಾಂತ್ ಸೆಂಥಿಲ್ ಇದ್ದಾರೆ ಎಂಬ ಶಾಸಕ ಜನಾರ್ಧನ ರೆಡ್ಡಿ ಆರೋಪಕ್ಕೆ ದಕ್ಷಿಣ ಕನ್ನಡದ ಮಾಜಿ ಜಿಲ್ಲಾಧಿಕಾರಿಯೂ ಆದ ತಮಿಳ್ನಾಡು ಸಂಸದ ಸಸಿಕಾಂತ್ ಸೆಂಥಿಲ್ ತಿರುಗೇಟು ನೀಡಿದ್ದಾರೆ. ಮಾಸ್ಕ್ ಮ್ಯಾನ್‌ಗೆ ಬುರುಡೆ ಕೊಟ್ಟಿದ್ದೇ ಸಸಿಕಾಂತ್ ಸೆಂಥಿಲ್ ಎಂದು ಜನಾರ್ಧನ ರೆಡ್ಡಿ ಆರೋಪಿಸಿದ್ದರು.

ಇಂದು ಪ್ರತಿಕ್ರಿಯಿಸಿರುವ ಸಸಿಕಾಂತ್ ಸೆಂಥಿಲ್, ಶಾಸಕ ಜನಾರ್ಧನ ರೆಡ್ಡಿ ಆರೋಪ ಕೇವಲ ಊಹಾ ಪೋಹ. ಅವರು ಕಟ್ಟು ಕತೆಗಳನ್ನು ಹೇಳುತ್ತಿದ್ದಾರೆ. ರೆಡ್ಡಿ ಆರೋಪ ಕೇಳಿ ನಗು ಬರುತ್ತಿದೆ. ನನಗೆ ಇದರ ಹಿಂದೆ ಏನಿದೆ ಎಂಬುದು ಗೊತ್ತಿಲ್ಲ ಎಂದಿದ್ದಾರೆ. ನಾನು ಐಎಎಸ್ ಹುದ್ದೆಗೆ ರಾಜೀನಾಮೆ ನೀಡಿ 6 ವರ್ಷ ಆಗಿದೆ. ಈಗ ನಾನು ಬೇರೆ ಪಕ್ಷದಲ್ಲಿ ಇದ್ದೇನೆ. ಬಳ್ಳಾರಿಯಲ್ಲಿ ಕರ್ತವ್ಯದಲ್ಲಿ ಇದ್ದಾಗ ಜನಾರ್ಧನ ರೆಡ್ಡಿ ಬಂಧನವಾಗಿತ್ತು. ನಾನು ಅವಾಗ ಮಾತ್ರ ರೆಡ್ಡಿಯವರನ್ನು ನೋಡಿದ್ದು ಎಂದು ಸೆಂಥಿಲ್ ಹೇಳಿದ್ದಾರೆ.

ಬಳ್ಳಾರಿಯಲ್ಲಿ ನಾನು ಸಹಾಯಕ ಆಯುಕ್ತನಾಗಿದ್ದಾಗ ರೆಡ್ಡಿಯವರ ಅಪರಾಧಗಳನ್ನು ಬಹಿರಂಗ ಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದೇನೆ. ನನ್ನ ಕೆಲಸದ ಭಾಗವಾಗಿ ನಾನು ಇದನ್ನು ಮಾಡಿದ್ದೇನೆ. ಬಹುಶಃ ಆ ಕಾರಣಗಳಿಂದ ನನ್ನ ಮೇಲೆ ಈ ಆರೋಪ ಮಾಡಿರಬಹುದು. ಇದನ್ನ ಹೊರತುಪಡಿಸಿ ಇದು ಬಿಜೆಪಿಯ ಹತಾಶ ರಾಜಕೀಯವಾಗಿರಬಹುದು ಎಂದು ತಿರುಗೇಟು ನೀಡಿದ್ದಾರೆ.

ಇತ್ತೀಚೆಗೆ ಕರ್ನಾಟಕದಲ್ಲಿ ಹೊರಬಂದ 'ಮತಗಳ್ಳತನ' ಪ್ರಕರಣದ ಗಮನವನ್ನು ಬೇರೆಡೆ ಸೆಳೆಯುವ ಪ್ರಯತ್ನಕ್ಕಾಗಿ ರೆಡ್ಡಿ ಆರೋಪ ಮಾಡಿರಬಹುದು. ವದಂತಿಗೆ ನಾನು ಹೆಚ್ಚು ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಹೇಳಿದ್ದಾರೆ.

ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತಿಟ್ಟಿರುವುದಾಗಿ ಅನಾಮಿಕ ದೂರು ನೀಡಿದ್ದ ಪ್ರಕರಣ ಸಂಬಂಧ ಮಂಗಳವಾರ ಮಾತನಾಡಿದ್ದ ಜನಾರ್ದನ ರೆಡ್ಡಿ, ಧರ್ಮಸ್ಥಳ ದೇವಸ್ಥಾನದ ವಿರುದ್ಧ ನಡೆಯುತ್ತಿರುವ ಷಡ್ಯಂತ್ರದ ಹಿಂದೆ ಸಸಿಕಾಂತ್ ಸೆಂಥಿಲ್ ಕೈವಾಡವಿದೆ. ಈ ಸಂಪೂರ್ಣ ಪ್ರಕರಣದ ಹಿಂದಿನ ಮಾಸ್ಟರ್ ಮೈಂಡ್ ಸಸಿಕಾಂತ್ ಸೆಂಥಿಲ್ ಎಂದು ಗಂಭೀರ ಆರೋಪ ಮಾಡಿದ್ದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಫಾರಿ ವಲಯದಲ್ಲಿ

ನಿತ್ರಾಣ ಸ್ಥಿತಿಗೆ ಸಿಲುಕಿರುವ ನಾಲ್ಕು ಮರಿಗಳ ತಾಯಿ ಹುಲಿ

ಇದಕ್ಕೆ ಚಿಕಿತ್ಸೆ ನೀಡುವ ವಿಧಾನ ಕಂಡುಕೊಳ್ಳಲು ತಜ್ಞರ ಮೊರೆ ಹೋದ ಅರಣ್ಯ ಇಲಾಖೆ ಅಧಿಕಾರಿ ವರ್ಗ

ಮೈಸೂರು, ಆ.20(ಎಂಟಿವೈ, ಪಿಎಂ)– ಇತ್ತೀಚೆಗೆ ನಾಲ್ಕು ಮರಿಗಳಿಗೆ ಜನ್ಮ ನೀಡಿದ್ದ ತಾಯಿ ಹುಲಿಯೊಂದು ಬೇಟೆಯಾಡುವ ವೇಳೆ ಗಾಯಗೊಂಡು ನಿತ್ರಾಣ ಸ್ಥಿತಿಯಲ್ಲಿರುವುದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಫಾರಿ ವಲಯದಲ್ಲಿ ತಡವಾಗಿ ಬೆಳಕಿಗೆ ಬಂದಿದೆ.



ಎಐನಿಂದ ಸೃಜಿಸಿರುವ ಕಾಲ್ಪನಿಕ ಹುಲಿ ಚಿತ್ರ

ಸದರಿ ವಲಯದಲ್ಲಿ ಮೂರುಕೆರೆ ಫೀಮೇಲ್ ಎಂದೇ ಈ ಹುಲಿ ಗುರುತಿಸಲ್ಪಟ್ಟಿದ್ದೆ. ಕಳೆದ ನಾಲ್ಕೈದು ತಿಂಗಳ ಹಿಂದೆ ನಾಲ್ಕು ಮರಿಗೆ ಜನ್ಮ ನೀಡಿದ್ದು ಈ ಹುಲಿಯು ಸಫಾರಿಗರಿಗೆ ಸದಾ ದರ್ಶನ ನೀಡುವ ಮೂಲಕ ಗಮನ ಸೆಳೆದಿತ್ತು. ಸಫಾರಿ ವಲಯದ ಮೂರುಕೆರೆ ಹಾಗೂ ತಾವರೆಕಟ್ಟೆ ಸೇರಿದಂತೆ ವಿವಿಧ ಭಾಗದಲ್ಲಿ ಮರಿಯೊಂದಿಗೆ ಕಾಣಿಸಿಕೊಳ್ಳುತ್ತಿದ್ದ ಈ ತಾಯಿ ಹುಲಿ ಬಂಡಿಪುರದ ಪ್ರವಾಸೋದ್ಯಮಕ್ಕೆ ಚೈತನ್ಯ ತುಂಬಿತ್ತು.

ಆಹಾರಕ್ಕಾಗಿ ಬೇಟೆಯಾಡುವ ಸಂದರ್ಭದಲ್ಲಿ ಸದರಿ ಹುಲಿಯು ತೀವ್ರವಾಗಿ ಗಾಯಗೊಂಡಿದೆ. ಎದುರಾಳಿ ಪ್ರಾಣಿಗಳು ತೀವ್ರ ಪ್ರತಿರೋಧವೊಡ್ಡಿರುವ ಪರಿಣಾಮ ಈ ಹುಲಿಯ ಹಿಂಭಾಗದ ಕಾಲಿಗೆ ಹಾಗೂ ತೊಡೆ ಭಾಗಕ್ಕೆ ಬಲವಾದ ಪೆಟ್ಟು ಬಿದ್ದಿದ್ದು, ನಡೆಯಲಾಗದ ಪರಿಸ್ಥಿತಿಗೆ ಸಿಲುಕಿದೆ ಎನ್ನಲಾಗಿದೆ.

ತನ್ನ ನಾಲ್ಕು ಮರಿಗಳ ಜೊತೆಗೆ ಈ ತಾಯಿ ಹುಲಿ, ನಡೆಯಲಾಗದೇ ಕುಂಟುತ್ತಿರುವುದನ್ನು ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಸಫಾರಿ ವಾಹನದ ಚಾಲಕರು ನಾಲ್ಕು ದಿನದ ಹಿಂದೆ ಗಮನಿಸಿದ್ದರು. ಇದೀಗ ಅದು ಚೇತರಿಸಿಕೊಳ್ಳದೇ ಸಂಕಷ್ಟಕ್ಕೆ ಸಿಲುಕಿರುವುದು ಅರಣ್ಯ ಇಲಾಖೆ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಹಿರಿಯ ಅಧಿಕಾರಿಗಳ ಅನುಮತಿ ಮೇರೆಗೆ ತಾಯಿ ಹುಲಿ ಇದ್ದ ಸ್ಥಳದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲನೆ ನಡೆಸಿದ್ದು, ಆ ಹುಲಿ ಗಾಯದ ನಡುವೆಯೂ ತನ್ನ ಮರಿಗಳಿಗೆ ಆಹಾರ ಪೂರೈಸುವ ನಿಟ್ಟಿನಲ್ಲಿ ಜಿಂಕೆ ಸೇರಿದಂತೆ ಸಣ್ಣಪುಟ್ಟ ಪ್ರಾಣಿಗಳನ್ನು ಬೇಟೆಯಾಡುತ್ತಿದೆ.

ಆದರೆ ಅದು ದಿನದಿಂದ ದಿನಕ್ಕೆ ನಿತ್ರಾಣಗೊಳ್ಳುತ್ತಿದೆ. ಇದನ್ನು ಗಮನಿಸಿದ ಅಧಿಕಾರಿಗಳು ಅದನ್ನು ಸೆರೆಹಿಡಿದು ಚಿಕಿತ್ಸೆ ಕೊಡಿಸುವ ಆಲೋಚನೆಗೆ ಬಂದಿದ್ದರು. ಆದರೆ ಆ ಹುಲಿಗೆ ಚಿಕ್ಕ ವಯಸ್ಸಿನ ನಾಲ್ಕು ಮರಿ ಇರುವ ಕಾರಣ ಅವುಗಳ ಹಿತದೃಷ್ಟಿಯಿಂದ ಸೆರೆ ಹಿಡಿಯುವ ಆಲೋಚನೆ ಕೈಬಿಟ್ಟು, ಡ್ರೋನ್ ಮೂಲಕ ಹುಲಿಯ ಚಲನವಲನ ಮತ್ತು ಅದರ ಆರೋಗ್ಯ ಸ್ಥಿತಿಯನ್ನು ಗಮನಿಸಲಾಗುತ್ತಿದೆ. ಈ ಹುಲಿಗೆ ಚಿಕಿತ್ಸೆ ನೀಡುವ ವಿಧಾನ ಕಂಡುಕೊಳ್ಳಲು ಅರಣ್ಯ ಇಲಾಖೆ ಅಧಿಕಾರಿಗಳು ತಜ್ಞರ ಅಭಿಪ್ರಾಯ ಸಂಗ್ರಹಿಸುತ್ತಿದ್ದಾರೆ.

ಕೇಂದ್ರ ವಿಮಾನಯಾನ ಸಚಿವರೊಂದಿಗೆ ಮೈಸೂರು ವಿಮಾನ ನಿಲ್ದಾಣದ ಅಭಿವೃದ್ಧಿ ಕುರಿತು ಸಂಸದ ಯದುವೀರ್ ಚರ್ಚೆ



ಸಂಸದ ಯದುವೀರ್ ಬುಧವಾರ ನವದೆಹಲಿಯಲ್ಲಿ ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಅವರನ್ನು ಭೇಟಿಯಾಗಿ ಮೈಸೂರು ವಿಮಾನ ನಿಲ್ದಾಣ ಅಭಿವೃದ್ಧಿ ಸಂಬಂಧ ಸುದೀರ್ಘ ಚರ್ಚೆ ನಡೆಸಿದರು.


ನವದೆಹಲಿ, ಆ.20– ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೇಂದ್ರ ನಾಗರಿಕ ವಿಮಾನಯಾನ ಸಚಿವರಾದ ರಾಮ್ ಮೋಹನ್ ನಾಯ್ಡು ಅವರನ್ನು ಭೇಟಿ ಮಾಡಿ, ಮೈಸೂರು ವಿಮಾನ ನಿಲ್ದಾಣಕ್ಕೆ ಸಂಬಂಧಿಸಿದಂತೆ ಹಲವು ವಿಷಯಗಳನ್ನು ಚರ್ಚಿಸಿದರು.

ಒಪ್ಪಂದದ ಪ್ರಕಾರ ರಾಜ್ಯ ಸರ್ಕಾರವು ಉಪಯುಕ್ತತೆಗಳನ್ನು ಬದಲಾಯಿಸಲು ಒಪ್ಪಿಕೊಂಡಿದೆ ಮತ್ತು ಅದಕ್ಕಾಗಿ ಅಂದಾಜು ಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿದೆ. ಅಲ್ಲದೆ, ಭೂಮಿ ಹಸ್ತಾಂತರವು ಆದಷ್ಟು ಬೇಗ ನಡೆಯುವುದು ಉತ್ತಮ ಮತ್ತು ಯುಟಿಲಿಟಿ ಶಿಫ್ಟಿಂಗ್ ಕಾರ್ಯವು ರನ್‌ವೇ ವಿಸ್ತರಣೆಗೆ ಸಮಾನಾಂತರವಾಗಿ ನಡೆಯಬಹುದು. ಇದು ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆ ಬೇಗನೆ ಪ್ರಕ್ರಿಯೆಯನ್ನು ವೇಗಗೊಳಿಸುತ್ತದೆ ಎಂದು ಸಚಿವರಿಗೆ ಸಂಸದರು ತಿಳಿಸಿದರು.

ಮೈಸೂರಿನ ಸಿಎನ್‌ಡಿ ತ್ಯಾಜ್ಯದಿಂದ ವಿಮಾನ ನಿಲ್ದಾಣದ ಭೂಮಿಯನ್ನು ಸಮತಟ್ಟುಗೊಳಿಸಲು ಆಳವಾದ ಕಂದಕಗಳನ್ನು ತುಂಬಿಸುವ ಸಾಧ್ಯತೆಗಳ ಕುರಿತು ಸಂಸದರು ವಿವರಿಸಿದರು. ಇದಕ್ಕೆ ಸಚಿವರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ಸಾಧ್ಯವಾದರೆ AI ಅಧ್ಯಯನ ನಡೆಸಿ ಪರಿಶೀಲಿಸುವುದರ ಕುರಿತು ತಿಳಿಸಿದರು. ಇದಲ್ಲದೆ, ಕೊಡಗು ಜಿಲ್ಲೆಯಲ್ಲಿ ವಾಯುನೆಲೆಯನ್ನೂ ತ್ವರಿತಗೊಳಿಸಬೇಕೆಂದು ನಾನು ಮನವಿ ಸಲ್ಲಿಸಿದೆ. ಆ ಪ್ರಕ್ರಿಯೆ ಇನ್ನೂ ನಡೆದಿಲ್ಲ, ಭೂಮಿ ಹಸ್ತಾಂತರ ಇನ್ನೂ ನಡೆದಿಲ್ಲ ಮತ್ತು ಅದು ಕೂಡ ಆದಷ್ಟು ಬೇಗ ಆಗಬೇಕೆಂದು ಅವರಲ್ಲಿ ಮನವಿ ಮಾಡಿದರು.

ಮೈಸೂರಲ್ಲಿ ಶೀಘ್ರ ಹೈಟೆಕ್ ಮತ್ಸ್ಯದರ್ಶಿನಿ ಮೀನು ಉಪಾಹಾರ ಮಳಿಗೆ ಆರಂಭ

● ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದಿಂದ ಯೋಜನೆ ಅನುಷ್ಠಾನ ● 80 ಲಕ್ಷ ವೆಚ್ಚದಲ್ಲಿ ಮೈದಳೆಯಲಿದೆ ನಗರದ ಮೊದಲ ರಾಜ್ಯ ಸರ್ಕಾರ ಸ್ವಾಮ್ಯದ ಹೈಟೆಕ್ ಮತ್ಸ್ಯದರ್ಶಿನಿ ಮಳಿಗೆ





ಹೈಟೆಕ್ ಮತ್ಸ್ಯದರ್ಶಿನಿ ಮೀನು ಉಪಾಹಾರ ಮಳಿಗೆಯಾಗಿ ಪರಿವರ್ತನೆಯಾಗಲಿರುವ ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಸಮೀಪದ ಕಟ್ಟಡ.

ಮೈಸೂರು,ಆ.20(ಪಿಎಂ)– ಹಳೇ ಜಿಲ್ಲಾಧಿಕಾರಿ ಕಚೇರಿ ಸಮೀಪ ಬಳಕೆಗೆ ಬಾರದೇ ಖಾಲಿ ಉಳಿದಿರುವ ಕಟ್ಟಡವೊಂದು ಶೀಘ್ರದಲ್ಲಿ ಹೈಟೆಕ್ ಮತ್ಸ್ಯದರ್ಶಿನಿ ಮೀನು ಉಪಾಹಾರ ಮಳಿಗೆಯಾಗಿ ಮೈದಳೆದು, ಪೌಷ್ಟಿಕ ಮೀನು ಖಾದ್ಯಗಳನ್ನು ಒದಗಿಸಲಿದೆ.

ಆ ಮೂಲಕ ಮೈಸೂರಿನಲ್ಲಿ ಕರಾವಳಿ ಶೈಲಿಯಲ್ಲಿ ಮೀನಿನ ಭಕ್ಷ್ಯ ಸವಿಯುವ ಅವಕಾಶ ದೊರೆಯಲಿದೆ. ರಾಜ್ಯ ಸರ್ಕಾರದಿಂದ 2024–25ರ ಬಜೆಟ್‌ನಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಹೈಟೆಕ್ ಮತ್ಸ್ಯದರ್ಶಿನಿ ಮೀನು ಉಪಾಹಾರ ಮಳಿಗೆಯನ್ನು ಮೈಸೂರಿನಲ್ಲಿ ಆರಂಭಿಸುವುದಾಗಿ ಘೋಷಣೆಯಾಗಿತ್ತು. ಈ ಯೋಜನೆ ಅನುಷ್ಠಾನ ಜವಾಬ್ದಾರಿ ಹೊತ್ತಿರುವ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮವು (ಕೆಎಫ್‌ಡಿಸಿ) ಈಗಾಗಲೇ 80 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಡಿಪಿಆರ್ (ವಿಸ್ತೃತ ಯೋಜನಾ ವರದಿ) ಸಿದ್ಧಪಡಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಿದೆ.

ಮತ್ಸ್ಯದರ್ಶಿನಿ ಮಳಿಗೆ ಆರಂಭಿಸಲು ಹೆಚ್ಚುವರಿಯಾಗಿ ಅಗತ್ಯವಿರುವ 30 ಲಕ್ಷ ರೂ. ಅನ್ನು ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ಭರಿಸಲು ಸಿದ್ಧವಿದ್ದು, ಈ ಹಿನ್ನೆಲೆಯಲ್ಲಿ ಒಟ್ಟು 80 ಲಕ್ಷ ರೂ. ವೆಚ್ಚದಲ್ಲಿ ಸದರಿ ಮಳಿಗೆ ಆರಂಭಿಸಲು ಸರ್ಕಾರ ಅನುಮೋದನೆ ನೀಡುವುದು ಖಚಿತ ಎನ್ನಲಾಗಿದೆ. ಸದರಿ ಮಳಿಗೆ ಆರಂಭದ ಪ್ರಕ್ರಿಯೆಯಲ್ಲಿ ಮೀನುಗಾರಿಕೆ ಇಲಾಖೆ ಸಹ ಉಸ್ತುವಾರಿ ವಹಿಸಿದ್ದು, ನಿಗಮದ ಅಧಿಕಾರಿಗಳ ಜೊತೆಗೆ ಮೀನುಗಾರಿಕೆ ಇಲಾಖೆ ಅಧಿಕಾರಿಗಳೂ ಈಗಾಗಲೇ ಹಳೇ ಜಿಲ್ಲಾಧಿಕಾರಿ ಕಚೇರಿ ಸಮೀಪದ ಕಟ್ಟಡವನ್ನು ಇತ್ತೀಚಿಗೆ ಪರಿಶೀಲನೆ ನಡೆಸಿದ್ದಾರೆ.

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮವು ಶೀತಲ ಸರಪಣಿ ಮೂಲಕ ಕರ್ನಾಟಕದ ಒಳನಾಡಿನಲ್ಲಿ ಸಮುದ್ರದ ಮೀನನ್ನು ಜನಪ್ರಿಯಗೊಳಿಸಿದ ಕೀರ್ತಿ ಹೊಂದಿದೆ. ಪ್ರಸ್ತುತ ನಿಗಮವು ಬೆಂಗಳೂರಿನ ಕಬ್ಬನ್ ಪಾರ್ಕ್, ಮಂಗಳೂರು, ತಮಕೂರು ಹಾಗೂ ಕೋಲಾರದಲ್ಲಿ ಮತ್ಸ್ಯದರ್ಶಿನಿಗಳನ್ನು ಹೊಂದಿದ್ದು, ಬೆಂಗಳೂರು ನಗರದ ವಿವಿಧ ಕಡೆ ಸುಮಾರು 25 ಏಜೆನ್ಸಿದಾರರ ಮೂಲಕ ಸೇವೆ ಒದಗಿಸುತ್ತಿದೆ. ಬೆಂಗಳೂರು ನಾಗರಿಕರು ನಿಗಮದ ಖಾದ್ಯಗಳು ಹಾಗೂ ಮೀನು ಉತ್ಪನ್ನಗಳನ್ನು ಖರೀದಿಸಲು ಹೆಚ್ಚಿನ ಉತ್ಸಾಹ ತೋರುತ್ತಿದ್ದು, ಜನರಿಂದ ಉತ್ತಮ ಸ್ಪಂದನೆ ದೊರಕಿದೆ.

ಶುಚಿ–ರುಚಿಯಾದ ಪೌಷ್ಟಿಕ ಮೀನು ಖಾದ್ಯಗಳನ್ನು ಸಾರ್ವಜನಿಕರಿಗೆ ಹೊರೆಯಾಗದ ದರದಲ್ಲಿ ಒದಗಿಸುವುದು. ಪರಿಸರ ಸ್ನೇಹಿ ಮೂಲಗಳಿಂದ ತಾಜಾ ಸಮುದ್ರಾಹಾರವನ್ನು ಪೂರೈಸುವುದು. ಅಡುಗೆಯವರು, ಸೇವಾ ಸಿಬ್ಬಂದಿ ಮತ್ತು ಆಡಳಿತ ಸಿಬ್ಬಂದಿ ಸೇರಿದಂತೆ ಮೊದಲಾದ ಕೆಲಸಗಳಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶಗಳೊಂದಿಗೆ ಮೈಸೂರಿನಲ್ಲಿ ಮತ್ಸ್ಯದರ್ಶಿನಿ ಮೀನು ಉಪಾಹಾರ ಮಳಿಗೆ ಆರಂಭಿಸಲಾಗುತ್ತಿದೆ.

ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ನಿಗಮ ಯಶಸ್ವಿಯಾಗಿ ಹೈಟೆಕ್ ಮತ್ಸ್ಯದರ್ಶಿನಿ ಉಪಾಹಾರ ಮಳಿಗೆ ನಡೆಸುವ ಮೂಲಕ ಹೆಚ್ಚಿನ ಹೊರೆಯಾಗದ ರೀತಿಯ ದರದಲ್ಲಿ ಕರಾವಳಿ ಭಾಗದ ಮೀನೂಟ ಸವಿಯಲು ಅವಕಾಶ ಕಲ್ಪಿಸಿದೆ. ಇದೇ ಮಾದರಿಯಲ್ಲಿ ಮೈಸೂರಿನಲ್ಲಿಯೂ ಕರಾವಳಿ ರುಚಿಯಲ್ಲಿ ನಾನಾ ಸಮುದ್ರ ಮೀನುಗಳ ತವಾ ಫ್ರೈ, ರವಾ ಫ್ರೈ ಹಾಗೂ ಡೀಪ್ ಫ್ರೈ ಸೇರಿದಂತೆ ವಿವಿಧ ರೀತಿಯ ಪಾಕವಿಧಾನದಲ್ಲಿ ಮೀನೂಟ ಬಡಿಸಲಿದೆ. ಮೆಸ್ ಮಾದರಿಯಲ್ಲಿ ಮೈಸೂರಿನ ಉದ್ದೇಶಿತ ಮಳಿಗೆ ಕಾರ್ಯನಿರ್ವಹಿಸಲಿದೆ.

ಮೈಸೂರಿನಲ್ಲಿ ಆರಂಭವಾಗಲಿರುವ ಹೈಟೆಕ್ ಮತ್ಸ್ಯದರ್ಶಿನಿ ಮೀನು ಉಪಾಹಾರ ಮಳಿಗೆ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಜಿ.ಹೆಚ್.ಮಂಜುನಾಥ್, ಜಿಲ್ಲಾಧಿಕಾರಿಗಳು ತ್ವರಿತವಾಗಿ ಸ್ಪಂದಿಸಿ ಹಳೇ ಜಿಲ್ಲಾಧಿಕಾರಿ ಕಚೇರಿ ಸಮೀಪದ ಕಟ್ಟಡ ಒದಗಿಸಿಕೊಟ್ಟಿದ್ದಾರೆ. ಅದರ ನವೀಕರಣ ಕಾಮಗಾರಿ ಶೀಘ್ರವೇ ಪ್ರಾರಂಭವಾಗಲಿದೆ. ಎರಡು ತಿಂಗಳ ಹಿಂದೆಯೇ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮಕ್ಕೆ ಕಟ್ಟಡದ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ತಿಳಿಸಿದರು.

ಆ ಮೂಲಕ ರಾಜ್ಯ ಸರ್ಕಾರ ಸ್ವಾಮ್ಯದ ನಗರದ ಮೊದಲ ಹೈಟೆಕ್ ಮತ್ಸ್ಯದರ್ಶಿನಿ ಮಳಿಗೆ ಮೈಸೂರಿನಲ್ಲಿ ಆರಂಭಗೊಳ್ಳಲಿದೆ. ಕಟ್ಟಡವನ್ನು ಆಕರ್ಷಕವಾಗಿ ನವೀಕರಣ ಮಾಡಲಾಗುವುದು. ನಿಗಮ ವತಿಯಿಂದ ನವೀಕರಣ ನಡೆಯಲಿದ್ದು, ಬಳಿಕ ಮಳಿಗೆಯ ನಿರ್ವಹಣೆಯೂ ನಿಗಮದಿಂದಲೇ ನಡೆಯಲಿದೆ. ಅಲ್ಲಿ ನಿಗಮದ ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ. ಶೀಘ್ರದಲ್ಲಿ ನವೀಕರಣ ಕಾಮಗಾರಿ ಪ್ರಾರಂಭವಾಗಲಿದ್ದು, ಬಹುಶಃ ಇನ್ನು ಎರಡು ತಿಂಗಳಲ್ಲಿ ಸಾರ್ವಜನಿಕರ ಸೇವೆಗೆ ಮಳಿಗೆ ಲಭ್ಯವಾಗಲಿದೆ ಎಂದು ವಿವರಿಸಿದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಗುಂಡ, ಪುಟ್ಟನನ್ನು ಯಾಕೋ ಹೊಡೆದೆ?
ಗುಂಡ : ಅವನು ನನ್ನನ್ನು ಒಂದು ತಿಂಗಳ ಹಿಂದೆ ಇಂಗ್ಲೀಷ್‌ನಲ್ಲಿ ಬೈದಿದ್ದ ಟೀಚರ್.
ಟೀಚರ್ : ಆದರೆ, ಅದಕ್ಕಾಗಿ ಈಗ್ಯಾಕೆ ಹೊಡೆದೆ!
ಗುಂಡ : ಅದರ ಅರ್ಥ ನಿನ್ನೆ ಗೊತ್ತಾಯಿತು ಟೀಚರ್!

ಮೈಸೂರು ಮಿತ್ರ

ಗುರುವಾರ, 21 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಮಾತಾಡಿದಂತೆ ಜೀವಿಸಲು ಆಗೋದಿಲ್ಲ. ಬರೆದಿಟ್ಟಂತೆ ಬದುಕಲೂ ಆಗೋದಿಲ್ಲ. ನಮ್ಮಿಂದ ಬೇರೆಯವರಿಗೆ ತೊಂದರೆಯಾಗದಂತೆ ಬದುಕಿದರೆ ಸಾಕು. ಅದೇ ಸಂತೃಪ್ತ ಬದುಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸತ್ಯ ಯಾವಾಗಲೂ ಕಹಿಯಾಗಿರುತ್ತದೆ.

ನಿಮ್ಮ ಪತ್ರಗಳು

■ ಕನಕದಾಸನಗರದಲ್ಲಿ ಪ್ರತಿದಿನ ಕಸ ಸಂಗ್ರಹಣೆ ಮಾಡಲು ಕ್ರಮ ವಹಿಸಿ

ಮಾನ್ಯರೆ,

ಮೈಸೂರು ಮಹಾನಗರ ಪಾಲಿಕೆ ವಾರ್ಡ್ ನಂ 46ರ ವ್ಯಾಪ್ತಿಯ ದಟ್ಟಗಳ್ಳಿ 3ನೇ ಹಂತ, ಜೆ ಬ್ಲಾಕ್ ಕನಕದಾಸನಗರ, 13ನೇ ಬಿ ಮುಖ್ಯ ರಸ್ತೆ ಇಲ್ಲಿ ಕಸ ಸಂಗ್ರಹಣೆ ಮಾಡಲು ಕಸದ ವಾಹನ ಬರುತ್ತಿಲ್ಲ. ಸಿಬ್ಬಂದಿ ಪ್ರತಿದಿನ ಕಸ ಸಂಗ್ರಹಣೆ ಮಾಡದೆ ವಾರದಲ್ಲಿ ಒಂದು, ಎರಡು ದಿನ ಮಾತ್ರ ಕಸ ಸಂಗ್ರಹಣೆ ಮಾಡಲು ಬರುತ್ತಾರೆ. ಉಳಿದ ದಿನ ಬರದೇ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಇದರಿಂದ ನಿವಾಸಿಗಳಿಗೆ ತೊಂದರೆಯಾಗುತ್ತಿದೆ. ಕೆಲವರು ಕಸವನ್ನು ಖಾಲಿ ನಿವೇಶನದಲ್ಲಿ ಎಸೆಯುತ್ತಿದ್ದಾರೆ. ಇದು ಅನೈರ್ಮಲ್ಯಕ್ಕೆ ಕಾರಣವಾಗುತ್ತಿದೆ. ಈ ಬಗ್ಗೆ ದೂರು ನೀಡಲು ಪಾಲಿಕೆ ದೂರು ಸಂಖ್ಯೆಗೆ ಕರೆ ಮಾಡಿದರೆ ಅವರು ಕರೆ ಸ್ವೀಕರಿಸುವುದಿಲ್ಲ. ಒಮ್ಮೊಮ್ಮೆ ಸ್ವೀಕರಿಸಿದರೂ, ಗುತ್ತಿಗೆದಾರರಿಗೆ ತಿಳಿಸಿ ಕಸ ಸಂಗ್ರಹಣೆ ಮಾಡಲು ವ್ಯವಸ್ಥೆ ಮಾಡದೆ, ಅವರಿಗೆ ನಾಳೆ ಬಂದು ಕಸ ಸಂಗ್ರಹ ಮಾಡಲು ತಿಳಿಸುತ್ತೇವೆ ಎನ್ನುತ್ತಾರೆ. ಕಸದ ಗುತ್ತಿಗೆದಾರರು, ಮೇಲ್ವಿಚಾರಕರು ಕಸ ಸಂಗ್ರಹಣೆಯ ಉಸ್ತುವಾರಿ ಮಾಡುತ್ತಿಲ್ಲ. ಕಸ ಸಂಗ್ರಹ ಮಾಡದ ಸಿಬ್ಬಂದಿಗಳ ವಿರುದ್ಧ ಕ್ರಮ ವಹಿಸುತ್ತಿಲ್ಲ. ಈ ಬಗ್ಗೆ ಸೂಕ್ತ ಕ್ರಮ ವಹಿಸಿ ಅವರ ವಿರುದ್ಧ ಕ್ರಮ ಜರುಗಿಸಲು ಕೋರುತ್ತೇನೆ. ಪಾಲಿಕೆ ದೂರು ಕೋಶದಲ್ಲಿ ಈ ಹಿಂದೆ ಇದ್ದಂತೆ complaint number ನೀಡುವುದಿಲ್ಲ. ಇದರಿಂದ ನಾಗರಿಕರಿಗೆ ದೂರು ನೀಡಿದ್ದಕ್ಕೆ ದಾಖಲೆ ಸಿಗುತ್ತಿಲ್ಲ. ಹಾಗೂ ದೂರಿನ ಬಗ್ಗೆ ಕ್ರಮ ವಹಿಸಿದ ಬಗ್ಗೆ, ದೂರಿನ ಸ್ಥಿತಿಗತಿಯ ಬಗ್ಗೆ ಜನರಿಗೆ ನೈಜ ಸ್ಥಿತಿ ತಿಳಿಯುತ್ತಿಲ್ಲ. ಅಲ್ಲದೆ ದೂರುಗಳ ಬಗ್ಗೆ ಕ್ರಮ ವಹಿಸಿದ, ವಹಿಸದಿರುವ ಮಾಹಿತಿ ಕೂಡ ಆಯುಕ್ತರ ಗಮನಕ್ಕೆ ಬರುತ್ತಿಲ್ಲ. ಆದ್ದರಿಂದ, ಪಾಲಿಕೆಯ ದೂರು ಕೋಶವು ದಿನದ 24 ಗಂಟೆಯೂ ಕಾರ್ಯ ನಿರ್ವಹಿಸುವ ವ್ಯವಸ್ಥೆಯಾಗಲಿ ಹಾಗೂ ಸಾರ್ವಜನಿಕರು ದೂರು ನೀಡಿದರೆ ಸೂಕ್ತ ಕ್ರಮ ವಹಿಸುವ ವ್ಯವಸ್ಥೆಯಾಗಲಿ.

–ಪ್ರಕಾಶ್ ಮುಳ್ಳೂರು, ಕನಕದಾಸನಗರ, ಮೈಸೂರು.

■ ಮಾದಕ ವಸ್ತುಗಳ ಮಾರಾಟಕ್ಕೆ ಕಡಿವಾಣ ಹಾಕಿ

ಮಾನ್ಯರೆ,

ಸಾಂಸ್ಕೃತಿಕ ನಗರವೆಂದೇ ಹೆಸರಾದ ಮೈಸೂರಿನಲ್ಲೇ ತಯಾರಾದ ಮಾದಕ ವಸ್ತುಗಳು ಅಂಗಡಿಗಳಲ್ಲಿ ಕದ್ದು ಮುಚ್ಚಿ ಮಾರಾಟ ಮಾಡುತ್ತಿರುವುದು ಆತಂಕಕಾರಿ ವಿಷಯವಾಗಿದೆ.

ಇಂದು ಕಾಲೇಜಿನ ಪ್ರಥಮ ಹಂತದಲ್ಲೆ ಹಲವಾರು ವಿದ್ಯಾರ್ಥಿಗಳು ಡ್ರಗ್ಸ್, ಮದ್ಯಪಾನ, ಧೂಮಪಾನದ ದಾಸರಾಗುತ್ತಿದ್ದಾರೆ. ತಮ್ಮ ಉತ್ತಮ ಗುರಿಯ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದ ಹಂತದಲ್ಲೆ ಯುವಜನತೆಯು ಮಾದಕ ವ್ಯಸನಿಗಳಾಗಿ ಮಾನಸಿಕ ಖಿನ್ನತೆಗೆ ಒಳಗಾಗುತ್ತಿರುವುದು ಸಮಾಜದ ದುರ್ದೈವ ಸಂಗತಿಯಾಗಿ ಪರಿಣಮಿಸಿದೆ. ಆಧುನಿಕ ಮಜಲುಗಳಿಗೆ ಮನಸೋತು ಶಿಕ್ಷಣದ ನೈತಿಕತೆ, ಸಂಸ್ಕೃತಿಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಯುವಕರು ಸೋಲುತ್ತಿದ್ದಾರೆ. ವಿವೇಕ, ವಿನಯ ಸಚ್ಚಾರಿತ್ರ್ಯವಿಲ್ಲದ ವಿದ್ಯೆಗೆಂದು ಬೆಲೆ ಸಿಗದು. ಇಂದಿನ ಯುವಕರೇ ನಾಳಿನ ದೇಶದ ಸರ್ವೋನ್ನತಿಯ ನಾಯಕತ್ವದ ರೂವಾರಿಗಳು. ಸಂಸ್ಕೃತಿ ಪಾಲಿಸುವ ಯುವಕರೇ ಅಡ್ಡದಾರಿಯಲ್ಲಿ ನಡೆಯುತ್ತಿರುವುದಕ್ಕೆ ಇಂದಿನ ಸಾಮಾಜಿಕ ಪರಿಸರವೇ ಹೆಚ್ಚು ಕಾರಣವಾಗುತ್ತಿದೆ ಎನ್ನಬಹುದು. ಪೋಷಕರಿಗೆ ಮಕ್ಕಳ ದುರ್ವರ್ತನೆ ಉಗಳಲು ಆಗದ ನುಂಗಲು ಆಗದ ಅತಂತ್ರ ಸ್ಥಿತಿಯಾಗಿದೆ.


ಇದಕ್ಕೆ ಪರಿಹಾರವೆಂದರೆ ಮಾದಕ ವಸ್ತಗಳೇ ಮಾರಾಟವಾಗದಂತೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳೇ ಮಾದಕ ವಸ್ತುಗಳ ಮಾರಾಟಕ್ಕೆ ನಿರ್ಬಂಧಪಡಿಸುವಲ್ಲಿ ಜಾಗರೂಕರಾಗಬೇಕಿದೆ. ಯುವಜನತೆ ಸಮಾಜಕ್ಕೆ, ದೇಶಕ್ಕೆ ಮಾದರಿಯಾಗಿ ಸೇರ್ಪಡೆಗೊಳ್ಳಲು ಸಮಾಜ ಹಾಗೂ ಶಿಕ್ಷಣವೇ ಮೂಲವಾಗಿದೆ.

–ಯಶೋಧ ರಾಮಕೃಷ್ಣ, ವಿಜಯನಗರ, ಮೈಸೂರು

■ ಮೈಸೂರಲ್ಲಿ ಬೀದಿನಾಯಿ ಹಾವಳಿಗೆ ಹೇಗಾದರೂ ಸರಿ ಬ್ರೇಕ್ ಹಾಕಲೇಬೇಕು

ಮಾನ್ಯರೇ

ಇತ್ತೀಚಿಗೆ ಸುಪ್ರೀಂಕೋರ್ಟ್, ಹೊಸ ದಿಲ್ಲಿಗೆ ಸಂಬಂಧಿಸಿದಂತೆ ಬೀದಿ ನಾಯಿಗಳನ್ನ ಆಶ್ರಯ ಕೇಂದ್ರಕ್ಕೆ ಸ್ಥಳಾಂತರಿಸುವಂತೆ ಆದೇಶ ನೀಡಿತ್ತು. ಆದರೆ



ಪ್ರಾಣಿ ದಯಾ ಸಂಘದವರು, ಪ್ರಾಣಿ ಪ್ರಿಯರು ಹಾಗೂ ಇತರ ಸ್ವಯಂಸೇವಾ ಸಂಸ್ಥೆಗಳು ನಾಯಿಗಳ ಸ್ಥಳಾಂತರಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಬೀದಿ ನಾಯಿಗಳ ಆಶ್ರಯಕ್ಕೆ ಮೈಸೂರು ಮಹಾನಗರ ಪಾಲಿಕೆ ಜಾಗ ಕಲ್ಪಿಸಿದರು ಅದರ ನಿರ್ವಹಣೆ ಅಷ್ಟು ಸುಲಭ ಸಾಧ್ಯವಲ್ಲ. ಯಾರಾದರೂ ಎನ್‌ಜಿಓಗಳು ನಿರ್ವಹಣೆಗೆ ಮುಂದೆ ಬರುತಾರೆ ಎಂದು ಕಾಯುತ್ತಿದೆ. ಸುಪ್ರೀಂಕೋರ್ಟ್‌ನ ಆದೇಶ ಪಾಲಿಸುವುದು ಮೈಸೂರಿನಂತಹ ನಗರಗಳಲ್ಲಿ ಸ್ವಲ್ಪ ಕಷ್ಟವಾಗಬಹುದು. ಆದರೆ ದಾಳಿ ಮಾಡುವಂತಹ, ಕಚ್ಚುವಂತಹ ನಾಯಿಗಳನ್ನ ಹಿಡಿದು ಚಿಕಿತ್ಸೆ ನೀಡಿ ಗುಣಮುಖವಾದ ನಂತರ ತಂದು ಅದೇ ಜಾಗಕ್ಕೆ ವಾಪಸ್ಸು ಬಿಡಬಹುದು.

ಮೈಸೂರು ಪಾಲಿಕೆಯ 44ನೇ ವಾರ್ಡ್ ವ್ಯಾಪ್ತಿಯ ಬೋಗಾದಿ 2ನೇ ಹಂತ ಮತ್ತು ಜನತಾನಗರಗಳಲ್ಲಿ ಮಾಂಸಾಹಾರಿ ಹೋಟೆಲ್‌ಗಳು, ಬೀದಿಬದಿ ಫಾಸ್ಟ್‌ಫುಡ್‌ಗಳು ಹಾಗೂ ಮಾಂಸದ ಅಂಗಡಿಗಳ ಸಂಖ್ಯೆ ತುಂಬಾ ಇದೆ. ಯಥೇಚ್ಛ ಆಹಾರ ಸಿಗುವುದರಿಂದ ಹಾಗೂ ಇಲ್ಲಿ ಖಾಲಿ ನಿವೇಶನಗಳು ಹೆಚ್ಚು ಇರುವ ಕಾರಣ ಬೀದಿನಾಯಿಗಳ ಸಂಖ್ಯೆ ಹೆಚ್ಚಿದೆ. ಇವುಗಳ ದಾಳಿಗಳಿಗೆ ಹಲವಾರು ಕಾರಣಗಳಿವೆ. ಸಾರ್ವಜನಿಕರೂ ಸಹ ಮಾಂಸ, ಮೂಳೆ, ಬಿಸ್ಕತ್ ಇತರ ಆಹಾರ ನೀಡುತ್ತಾರೆ. ಆಹಾರ ಸಿಗದಾಗ, ಬೀದಿಗೆ ಬಂದ ಸಂದರ್ಭದಲ್ಲಿ ಅವು ಜನರ ಮೇಲೆ ದಾಳಿ ಮಾಡುತ್ತಿರುತ್ತವೆ. ಇವೆಲ್ಲಾ ಕಾರಣಗಳಿಂದ ವೃದ್ಧರು, ಮಕ್ಕಳು ಭಯದಲ್ಲಿ ಓಡಾಡುವ ಸ್ಥಿತಿ ನಿರ್ಮಾಣವಾಗಿದೆ. ನಿಮಗೆಲ್ಲಾ ತಿಳಿದಿರುವಂತೆ ಉತ್ತರ ಪ್ರದೇಶದಲ್ಲಿ ಕಬಡ್ಡಿ ಆಟಗಾರ ಮೋರಿಯಲ್ಲಿ ಬಿದ್ದಿದ್ದ ನಾಯಿಯನ್ನು ರಕ್ಷಣೆ ಮಾಡಲು ಹೋಗಿ ಅದು ಕಚ್ಚಿದ ಪರಿಣಾಮ ರೇಬಿಸ್ ಕಾಯಿಲೆಗೆ ತುತ್ತಾಗಿ ಮರಣ ಹೊಂದಿದ್ದ. ಈ ರೀತಿ ಹಲವಾರು ಉದಾಹರಣೆಗಳು ಇವೆ. ಈ ಬಗ್ಗೆ ಸೂಕ್ತ ಕ್ರಮ ವಹಿಸಬೇಕಾಗಿ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರಲ್ಲಿ ಮನವಿ ಮಾಡುತ್ತೇನೆ.

–ಸುರೇಶ್, ಅಧ್ಯಕ್ಷರು, ಬೋಗಾದಿ 2ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ



ಡಾ. ಹೆಚ್.ವಿ. ನಾಗರಾಜ ರಾವ್
ಸಂಸ್ಕೃತ ವಿದ್ವಾಂಸರು,
ಮೈಸೂರು.
ಮೊಬೈಲ್ : 97394 15291

ಸಂಸ್ಕೃತಿ ಚಿಂತನಾ

ಆಕಾಶವಾಣಿಯ ಆ ದಿನಗಳು

ಇಪ್ಪತ್ತನೆಯ ಶತಮಾನದಲ್ಲಿ ನಾನಾ ಅದ್ಭುತಗಳು ಮಾನವನ ಜೀವನದಲ್ಲಿ ಪ್ರವೇಶಿಸಿದುವು. ವಿಮಾನ, ಆಕಾಶವಾಣಿ ಅಥವಾ ರೇಡಿಯೋ, ಟೆಲಿಫೋನ್, ದೂರದರ್ಶನ, ಸಂಚಾರಿ ದೂರವಾಣಿ ಇತ್ಯಾದಿ. ಒಂದೊಂದೂ ನಮ್ಮ ಬದುಕಿಗೆ ಹೊಸ ಆಯಾಮವನ್ನೇ ಒದಗಿಸಿ ನೂತನತೆಯನ್ನು ತಂದುಕೊಟ್ಟಿವೆ. ಇವುಗಳೆಲ್ಲ ಇಲ್ಲದ ಹಿಂದಿನ ಕಾಲದ ಜನರ ಬದುಕು ಬರಡಾಗಿತ್ತು ಎನಿಸಿದರೂ ಆಶ್ಚರ್ಯವಿಲ್ಲ.

ನಾನು ಹುಟ್ಟಿದ ಹಳ್ಳಿಯಲ್ಲಿ ಆಗ ವಿದ್ಯುಚ್ಛಕ್ತಿ ಇರಲಿಲ್ಲ. ಹಾಗಾಗಿ ನಾನು ರೇಡಿಯೋವನ್ನು ಆಗ ಕಂಡಿರಲಿಲ್ಲ ಅಥವಾ ಕೇಳಿರಲಿಲ್ಲ. ಪ್ರೌಢಶಾಲೆಯಲ್ಲಿ ಓದಲು ತಾಲೂಕು ಕೇಂದ್ರವಾದ ಗುಡಿಬಂಡೆಗೆ ಬಂದಾಗ ರೇಡಿಯೋ ಪೆಟ್ಟಿಗೆಯನ್ನು ಕಂಡೆ. ಅದು ಎಲ್ಲರ ಮನೆಯಲ್ಲೂ ಇರುವ ವಸ್ತುವಾಗಿರಲಿಲ್ಲ. ಊರಿನ ಮುಖ್ಯ ರಸ್ತೆಯಲ್ಲಿದ್ದ ಒಂದು ಅಂಗಡಿಯಲ್ಲಿತ್ತು. ಆಗ, ಸಾವಿರದ ಒಂಬೈನೂರ ಐವತ್ತರ ದಶಕದಲ್ಲಿ ಸಿಲೋನಿನಿಂದ ಪ್ರಸಾರಗೊಳ್ಳುತ್ತಿದ್ದ ಚಿತ್ರಗೀತೆಗಳ ಕಾರ್ಯಕ್ರಮ ಜನಪ್ರಿಯವಾಗಿತ್ತು. ಅದನ್ನು ಆಗಾಗ ದೂರದಲ್ಲಿ ನಿಂತು ನಾನೂ ಕೇಳುತ್ತಿದ್ದೆ. ಹೆಚ್ಚು ಹೊತ್ತು ಕೇಳಲಾಗುತ್ತಿರಲಿಲ್ಲ. ನಮ್ಮ ಅಧ್ಯಾಪಕರೋ ಅಥವಾ ಹಿರಿಯರೋ ಅದನ್ನು ನೋಡಿಬಿಟ್ಟರೆ ದಂಡನೆ ಕಟ್ಟಿಟ್ಟಬುತ್ತಿ. ವಿದ್ಯಾರ್ಥಿ ಜೀವನದಲ್ಲಿ ಅದಕ್ಕೆ ಕಾಲವನ್ನು ವ್ಯರ್ಥವಾಗಿ ಕಳೆಯಬಾರದು ಎಂಬ ಕಟ್ಟು ಇತ್ತು.

ಅನಂತರ ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದಾಗ ಎಲ್ಲರ ಮನೆಗಳಲ್ಲೂ ರೇಡಿಯೋ ಇದ್ದುದನ್ನು ಕಂಡೆ. ಅಷ್ಟು ಕಾಲಕ್ಕೆ ಟ್ರಾನ್ಸಿಸ್ಟರ್ ಕೂಡ ಬಳಕೆಗೆ ಬಂದಿತ್ತು. ಜನರು ಅದನ್ನು ಉಪಯೋಗಿಸಿ ಕ್ರಿಕೆಟ್ ವೀಕ್ಷಕ ವಿವರಣೆಯನ್ನು ಕೇಳುವುದು ಆ ದಿನಗಳ ಫ್ಯಾಶನ್. ಆಕಾಶವಾಣಿಯ ವಾರ್ತಾ ಪ್ರಸಾರವನ್ನು ಕೇಳಿ ಕನ್ನಡದಲ್ಲಿ ಹೇಗೆ ಮಾತನಾಡಬೇಕೆಂಬುದನ್ನೂ, ಪದಗಳ ಉಚ್ಚಾರಣೆಯನ್ನೂ ಕಲಿಯಲು ಎಲ್ಲರೂ ಬಯಸುತ್ತಿದ್ದರು. ಕೆಲವು ವರ್ಷಗಳಾದ ಮೇಲೆ ಎಂದರೆ 1970ರ ದಶಕದಲ್ಲಿ, ನನ್ನ ವಿದ್ಯಾಭ್ಯಾಸ ಮುಗಿದು ಪ್ರಾಚ್ಯ ವಿದ್ಯಾಸಂಶೋಧನಾಲಯದಲ್ಲಿ ಸಂಶೋಧಕನಾಗಿ ಕೆಲಸ ಮಾಡುತ್ತಿದ್ದೆ. ಆಗ ನನಗೆ ಮೈಸೂರು ಆಕಾಶವಾಣಿಯಿಂದ ಬೆಳಗ್ಗೆ ಪ್ರಸಾರವಾಗುತ್ತಿದ್ದ ಚೆನ್ನುಡಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಹ್ವಾನ ಬಂತು. ನನಗೆ ವಿಸ್ಮಯ, ಹಿಗ್ಗು. ಆಕಾಶವಾಣಿಯಲ್ಲಿ ಕೇವಲ ಶ್ರೋತೃವಾಗಿದ್ದ ನಾನು ವಕ್ತೃವೂ ಆದುದು ಆಶ್ಚರ್ಯವಾಯಿತು. ಆಗ ಶ್ರೀಮತಿ ಪುಟ್ಟತಾಯಮ್ಮನವರು ನಿಲಯ ನಿರ್ದೇಶಕರಾಗಿದ್ದರು ಎಂದು ನೆನಪು. ಶ್ರೀಮತಿ ಜ್ಯೋತ್ಸ್ನಾಕಾಮತ್ ನಿರ್ದೇಶಕರಾಗಿದ್ದಾಗ ಸಂಸ್ಕೃತ ನಾಟಕಗಳನ್ನು ರಚಿಸಲು ನನಗೆ ಪ್ರೋತ್ಸಾಹ ಕೊಟ್ಟರು. ಆಮೇಲೆ ಶ್ರೀಮತಿ ವಿಜಯಾಹರನ್ ಅವರು ನಿರ್ದೇಶಕರಾದಾಗ ಕಾರ್ಯಕ್ರಮ ವೈವಿಧ್ಯ ಉಂಟಾಗಿ ಹೆಚ್ಚು ಅವಕಾಶಗಳು ನನಗೂ ಲಭ್ಯವಾದುವು.

ವಿಜಯಾಹರನ್ : ನಾನು ಕಂಡ ಅಪೂರ್ವ ವ್ಯಕ್ತಿಗಳಲ್ಲೊಬ್ಬರು ಶ್ರೀಮತಿ ವಿಜಯಾಹರನ್ ಅಥವಾ ನಾನು ಕಂಡ ಅಪೂರ್ವ ದಂಪತಿಗಳು ಎಂದರೆ ವಿಜಯಾ ಮತ್ತು ಪ್ರಣಕಾರ್ತಿ ಹರನ್. ಇಬ್ಬರೂ ವಿದ್ಯೆಯಲ್ಲಿ ಉನ್ನತೋನ್ನತರು. ಪತ್ನಿಯೂ ಪತಿಯೂ ಹೀಗೆ ವಿದ್ಯಾಕ್ಷೇತ್ರದಲ್ಲಿ ಸಮಾನ ಸಿದ್ಧಿಯನ್ನು ಕಂಡಿರುವುದು ವಿರಳ. ಜೊತೆಗೆ ಇಬ್ಬರೂ ಅತ್ಯುತ್ತಮ ಸುಸಂಸ್ಕೃತ ರೀತಿ ನೀತಿಗಳನ್ನನುಸರಿಸುವವರು. ಅಷ್ಟೇ ಅಲ್ಲದೆ ಸಾಹಿತ್ಯ ಸೃಷ್ಟಿಯಲ್ಲಿ ಅವರು ಒಬ್ಬರಿಗೆ ಇನ್ನೊಬ್ಬರೇ ಸಾಟಿ. ಕನ್ನಡಕ್ಕೆ ಅವರಿಬ್ಬರ ಕೊಡುಗೆ ಎಷ್ಟಿದೆಯೆಂದರೆ ಅದೇ



ಒಂದು ಮಹಾಪ್ರಬಂಧಕ್ಕೆ ವಸ್ತುವಾಗುತ್ತದೆ. ಕನ್ನಡದಲ್ಲಿ ಹೇಗೆ ಬರೆಯಬೇಕೆಂದು ಕಲಿಯ ಬಯಸುವ ಜನರಿಗೆ ಅವರ ಪುಸ್ತಕಗಳು ಮಾದರಿ. ಈಗ ಅವರು ಆಕಾಶವಾಣಿಯಲ್ಲಿ ದೀರ್ಘಕಾಲದ ಸೇವೆಯಲ್ಲಿ ತಮ್ಮ ಅನುಭವಗಳನ್ನೆಲ್ಲ **'ಆಕಾಶವಾಣಿಯ ಆ ದಿನಗಳು'** ಎಂಬ ಪುಸ್ತಕದಲ್ಲಿ ಚಿತ್ರಿಸಿದ್ದಾರೆ. ಎಷ್ಟೋ ಸಹಸ್ರ ಜನ ವಿವಿಧ ಸಂಸ್ಥೆಗಳಲ್ಲಿ ದುಡಿದಿರುತ್ತಾರೆ. ನಾನಾ ಪ್ರಸಂಗಗಳನ್ನು ಎದುರಿಸಿರುತ್ತಾರೆ. ಆದರೆ ನಿವೃತ್ತಿಯ ಅನಂತರ ಅವನ್ನೆಲ್ಲ ಕ್ರಮಶಃ ದಾಖಲಿಸುವ ಸ್ವಾರಸ್ಯಮಯವಾದ ಸಾಹಿತ್ಯದ ರೂಪದಲ್ಲಿ ಅದನ್ನು ಜನರಿಗೆ ಕೊಡುವ ಪ್ರತಿಭೆ ಎಷ್ಟು ಜನರಿಗಿದೆ? ವಿಜಯಾಹರನ್ ಅವರ ಕೃತಿ ಲಾಖನ ಕಲೆಯ ಪರಿಪಕ್ವತೆಯನ್ನೂ ಜೀವನಾನ್ವೇಷಣೆಯಲ್ಲಿ ಅವರ ಪರಿಣತಿಯನ್ನೂ ಬಿಂಬಿಸುತ್ತದೆ.

ವಿಜಯಾಹರನ್ ಆಕಾಶವಾಣಿಗೆ ಸೇರಿದ್ದು ಉದ್ಘೋಷಕಿಯಾಗಿ, ಹಂತ ಹಂತವಾಗಿ ಮೇಲೇರಿ ನಿಲಯದ ನಿರ್ದೇಶಕ ಸ್ಥಾನವನ್ನಲಂಕರಿಸಿ ನಿವೃತ್ತಿಯನ್ನು ಪಡೆದರು. ಅವರು ಎದುರಿಸಿದ ಸವಾಲುಗಳು ಹಲವಾರು. ನಾವು ಹೊರಗಿನಿಂದ ಮಾತ್ರ ಆ ಸಂಸ್ಥೆಯನ್ನು ಕಂಡು ಬೆರಗಾದವರು. ಒಂದು ಕ್ಷಣವೂ ತಡವಾಗದೆ ಅದರ ಕಾರ್ಯಕ್ರಮಗಳು ವರ್ಷದ 365 ದಿನಗಳೂ ನಿಯತವಾಗಿ ನಡೆಯಬೇಕಾದರೆ ಎಷ್ಟು ಜನ ಕಷ್ಟಪಟ್ಟಿರುತ್ತಾರೆ ಎಂಬುದು ನಮಗೆ ತಿಳಿಯದು. ವಿಜಯಾ ಅವರ ಪುಸ್ತಕವನ್ನು ಓದಿದ ಮೇಲೆ ಆಕಾಶವಾಣಿಯ ಪ್ರಸಾರ ಕಾರ್ಯದ ಕಷ್ಟ ಕೋಟಲೆಗಳು ನಮ್ಮ ಅರಿವಿಗೆ ಬರುತ್ತವೆ. ವಿಜಯಾ ಅವರು ಬೆಳಗ್ಗೆ ಮೂರೂವರೆ ಘಂಟೆಗೇ ಎದ್ದು ಸ್ನಾನಾದಿಗಳನ್ನು ಮಾಡಿ ಕಚೇರಿಗೆ ಧಾವಿಸಿ ಐದೂವರೆಗೆ ಪ್ರಸಾರವನ್ನು ಆರಂಭಿಸುತ್ತಿದ್ದ ಪರಿಯನ್ನು ಓದಿ ತಿಳಿದುಕೊಂಡಾಗ ಸಾಫಲ್ಯದ ಮತ್ತು ಯಶಸ್ಸಿನ ಹಿಂದೆ ಅಡಗಿ ಕುಳಿತಿರುವ ದೃಢ ಪರಿಶ್ರಮದ ಅರಿವು ನಮಗೆ ಉಂಟಾಗುತ್ತದೆ. ಭದ್ರಾವತಿ, ಹಾಸನ, ಮೈಸೂರು ಮುಂತಾದ ಪ್ರದೇಶಗಳಲ್ಲಿ ಒದಗಿ ಬಂದ ಸನ್ನಿವೇಶಗಳನ್ನು ಲೇಖಕರು ಬಣ್ಣಿಸುವುದನ್ನು ಓದಿದಾಗ ಮೈನವಿರೇಳುತ್ತದೆ. ಬದುಕಿನ ತಿರುಳು ಹಾಸ್ಯ. ಸಾಹಿತ್ಯದಲ್ಲಂತೂ ಹಾಸ್ಯವಿಲ್ಲದಿದ್ದರೆ ಅದು ಕಣ್ಣಿಲ್ಲದ ಪ್ರಾಣಿಯಂತೆ. ವಿಜಯಾ ಅವರು ತಮ್ಮ ವೃತ್ತಿ ಜೀವನದಲ್ಲಿ ಎದುರಾದ ಹಲವು ಹಾಸ್ಯಮಯ ಸನ್ನಿವೇಶಗಳನ್ನು ಈ ಪುಸ್ತಕದಲ್ಲಿ ಸೇರಿಸಿದ್ದಾರೆ. ಅಧಿಕಾರಿಯೊಬ್ಬರು ಸಮಾರಂಭದಲ್ಲಿ ಔತಣವನ್ನು ಏರ್ಪಡಿಸುವುದಕ್ಕಾಗಿ ಕುಕ್ಕರ್‌ಗಳು ಬೇಕು ಎಂದು ಹೇಳಿಬಿಟ್ಟರು. ಉದ್ಯೋಗಿಗಳೆಲ್ಲ ತಮ್ಮ ಮನೆಗಳಲ್ಲಿದ್ದ ಕುಕ್ಕರ್‌ಗಳನ್ನು ಮಾರನೆಯ ದಿನ ಕಚೇರಿಗೆ ತಂದರು. ಈ ಪಾತ್ರೆಗಳನ್ನೇಕೆ ತಂದಿರಿ, ಅಡುಗೆ ಮಾಡುವ ಜನರು ಬೇಕು ಎಂದು ನಾನು ಹೇಳಿದ್ದು ಎಂದರಂತೆ ಅಧಿಕಾರಿ. ಇಂಗ್ಲೀಷಿನಲ್ಲಿ ಕುಕ್ ಎಂದರೆ ಅಡುಗೆ ಮಾಡುವವನು, ಕುಕ್ಕರ್ ಎಂದರೆ ಅಡುಗೆ ಮಾಡುವ ಪಾತ್ರೆ ಎಂಬ ಸೂಕ್ಷ್ಮ ಆ ಅಧಿಕಾರಿಗೆ ತಿಳಿಯದ ಕಾರಣ ಎಲ್ಲರೂ ಬಿದ್ದು ಬಿದ್ದು ನಗುವಂತಾಯಿತು ಎಂಬುದೊಂದು ವಿಜಯಾ ಅವರು ಕೊಟ್ಟಿರುವ ಉದಾಹರಣೆ.

ಯಾರೋ ಹಿರಿಯರೊಬ್ಬರು 'ನೀವು ಪ್ರಣಕಾರ್ತಿ ಹರನ್ ಅವರ ಎರಡನೆಯ ಪತ್ನಿಯೇ? ಎಂದು ಕೇಳಿದ ಪ್ರಸಂಗವಂತೂ ನಗುವನ್ನು ಉಕ್ಕಿಸುತ್ತದೆ. ಒಂದೇ ಹೆಸರಿನ ಇಬ್ಬರು ವ್ಯಕ್ತಿಗಳಿದ್ದಾಗ ಉಂಟಾಗುವ ಸಂದರ್ಭಗಳು ಜೀವನ ಭೋಜನದ ಉಪ್ಪಿನಕಾಯಿನಂತೆ. ಇದರ ರುಚಿಯನ್ನರಿಯಲು ವಾಚಕರು ಪುಸ್ತಕವನ್ನೇ ಓದಬೇಕು.


ಆಕಾಶವಾಣಿಯ ಕಾರ್ಯಕ್ರಮಗಳ ವ್ಯಾಪ್ತಿ ಆಕಾಶದಷ್ಟು ವಿಶಾಲ, ವಿಶ್ವವ್ಯಾಪಿ. ಇದರಿಂದ ಎಂತೆಂತಹ ವ್ಯಕ್ತಿಗಳನ್ನು ಸಂದರ್ಶಿಸುವ, ಸಂಪರ್ಕಿಸುವ, ಸಂಭಾಷಿಸುವ ಅವಕಾಶಗಳು ಅಲ್ಲಿ ಕೆಲಸ ಮಾಡುವ ವ್ಯಕ್ತಿಗಳಿಗೆ ದೊರಕುತ್ತದೆ ಎಂಬುದನ್ನು ಅರಿಯಲೂ ಈ ಪುಸ್ತಕ ಅವಕಾಶವನ್ನು ನೀಡುತ್ತದೆ. ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಸಂದರ್ಶನವನ್ನು ವಿಜಯಾ ಅವರು ಮಾಡಿದ ಪ್ರಸಂಗದ ವಿವರಣೆ ಆ ಮಹಾನುಭಾವರ ಮುಗಿಲೆತ್ತರದ ವ್ಯಕ್ತಿತ್ವವನ್ನು ಬಿಂಬಿಸುತ್ತದೆ. ಅಲ್ಲದೆ ಅವರ ಅನುಗ್ರಹಕ್ಕೆ ಪಾತ್ರರಾದ ವಿಜಯಾ ಅವರ ಸುಕೃತವೂ ಎಷ್ಟು ದೊಡ್ಡದು ಎಂದು ಭಾವನೆ ಉದಯಿಸುತ್ತದೆ. ದಸರಾ ಜಂಬೂಸವಾರಿಯ ವೀಕ್ಷಕ ವಿವರಣೆಯ ರೋಮಾಂಚನಕಾರಿ ನಿಮಿಷಗಳನ್ನೂ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಅರಮನೆಯ ಖಾಸಗಿ ದರ್ಬಾರ್ ಎಂಬುದರ ವಿಶೇಷ ವರದಿಯನ್ನು ವಿಜಯಾ ಅವರು ಬರೆದಿರುವ ಭಾಗವಂತೂ ಸುವರ್ಣಾಕ್ಷರಗಳಲ್ಲಿ ಮುದ್ರಿಸ ಬೇಕಾದುದೇ ಸರಿ. ಅದರ ಕೆಲವು ವಾಕ್ಯಗಳನ್ನಾದರೂ ಇಲ್ಲಿ ಉದಾಹರಿಸದಿದ್ದರೆ ನನ್ನ ಮನಸ್ಸು ತೃಪ್ತಿಪಡದು.

ರಾಜವೈಭವ ಎಂದರೆ ಹೇಗಿರುತ್ತದೆ ಎಂಬುದನ್ನು ನಾನು ಅಂದು ಕಣ್ಣಾರೆ ಕಂಡೆ. ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಖಾಸಗಿ ದರ್ಬಾರು, ಅಲಂಕೃತ ರತ್ನಖಚಿತ ಸಿಂಹಾಸನ, ಮಹಾರಾಣಿ ಪ್ರಮೋದಾದೇವಿ ಒಡೆಯರ್ ಅವರು ಮಹಾರಾಜರಿಗೆ ಆರತಿ ಬೆಳಗುವ ಸಂದರ್ಭ ಇತ್ಯಾದಿ ಎಲ್ಲ ಕಲಾಪವನ್ನು ನೋಡಿದೆ. ಅರಿಶಿನ, ಕುಂಕುಮ, ಹೂ, ರವಿಕೆ ಖಣಗಳನ್ನು ನಮಗೂ ಅರಮನೆಯ ಮುತ್ತೈದೆಯರು ನೀಡಿದರು. ಚಿನ್ನದ ಚಿತ್ತಾರ ಹೊಂದಿದ್ದ ಬೆಳ್ಳಿಯ ದೊಡ್ಡ ತಟ್ಟೆಯಲ್ಲಿ ಮೃಷ್ಟಾನ್ನ ಭೋಜನವನ್ನು ಸವಿದು, ಪುಟ್ಟತಾಯಮ್ಮನವರೊಂದಿಗೆ ಹಿಂದಿರುಗಿದೆ. (ಪು. 249).

ನಾವೂ ಅದನ್ನೆಲ್ಲ ಸಾಕ್ಷಾತ್ ನೋಡಿದಂತೆ, ರಾಜ ಭೋಜವನ್ನು ಮಾಡಿದಂತೆ ಅನಿಸುತ್ತದೆ. ಈ ಭಾಗವನ್ನು ಓದಿದಾಗ ಇದು ಸಾಹಿತ್ಯ ಸರಸ್ವತಿಯ ಶಕ್ತಿ. ಕನ್ನಡ ಭಾಷೆಯ ಹಿರಿಮೆ. ಇದನ್ನೆಲ್ಲ ಓದಿ ಸವಿಯದೆ ಕಾಲವನ್ನು ಕಳೆದರೆ ಕನ್ನಡಿಗರಾಗಿ ಏನು ಫಲ? ಚಿನ್ನದ ಗಣಿ ಕೋಲಾರ ಜಿಲ್ಲೆಯಲ್ಲಿತ್ತು. ಅಲ್ಲಿ ಎಷ್ಟೋ ಕಷ್ಟದಿಂದ ಚಿನ್ನವನ್ನು ತೆಗೆಯಬೇಕಂತೆ. ಆದರೆ ವಿಜಯಾ ಅವರ ಸಾಹಿತ್ಯದ ರಸವತ್ತಾದ ಸಂದರ್ಭಗಳು, ಸನ್ನಿವೇಶಗಳು ಇಂಗ್ಲೀಷಿನಲ್ಲಿ ಹೇಳಬೇಕೆಂದರೆ This is an unputdownable book. ವಿಷಯವೂ ಭಾಷೆಯೂ ಮುದ್ರಣವೂ ಸುಂದರವಾಗಿರುವ ಪುಸ್ತಕ. ಕನ್ನಡದಲ್ಲಿ ಇಂತಹ ನೂರು ಪುಸ್ತಕಗಳು ಬರಲೆಂದು ಆಶಿಸೋಣ.

ಶಾರದೆಯ ಕೃಪೆಯಿಂದ ಸಾರವತ್ ಸಾಹಿತ್ಯ
ಪಾರವಿಲ್ಲದ ಶಬ್ದಜೋಡಣೆಯ ಸೊಗಸು.
ನೂರಾರು ಅನುಭವದ ಸಂಗ್ರಹದ ಸೌಂದರ್ಯ
ಮೇರುಶಿಖರವ ಹೋಲ್ವ ಚಿತ್ತಪರಿಪಾಕ.
ಆಕಾಶವಾಣಿಯಲಿ ದನಿಯ ಮಾಧುರ್ಯ
ಲೋಕ ನೀತಿಯ ಪೇಳ್ವ ಬುದ್ಧಿಚಾತುರ್ಯ
ನಾಕಗುರುವಿನ ಜಾಣ್ಮೆ ಕಷ್ಟದಲಿ ತಾಳ್ಮೆ
ಈಕೆಯಲಿ ಕಂಡೆವೈ ವಿಜಯೆಯಲ್ಲಿ ॥

ಒಬ್ಬ ಗೆಲ್ಲಲು ಮತ್ತೊಬ್ಬ ಸೋಲಬೇಕು...



ಲಕ್ಷ್ಮಣ್ ಗೋರ್ಲಕಟ್ಟೆ
ಮೈಸೂರು
ಮೊ.9886728829

ಹಿಂದೂ ಧರ್ಮದಲ್ಲಿ ಅತ್ಯಂತ ಪ್ರಾಚೀನ ಹಾಗೂ ಪ್ರಚಲಿತ ಇರುವ ಒಂದು ಸಂಸ್ಕೃತ ಶಾಂತಿಮಂತ್ರ:

ಸರ್ವೇ ಭವಂತು ಸುಖಿನಃ
ಸರ್ವೇ ಸಂತು ನಿರಾಮಯಾ
ಸರ್ವೇ ಭದ್ರಾಣಿ ಪಶ್ಯಂತು
ಮಾ ಕಶ್ಚಿದ್ ದುಃಖ ಬಾಗ್ ಭವೇತ್
ಓಂ ಶಾಂತಿ ಶಾಂತಿ ಶಾಂತಿಃ .
ಈ ಪ್ರಾರ್ಥನೆಯ ಭಾವಾರ್ಥ:
ಸರ್ವರೂ ಸುಖವಾಗಿರಲಿ
ಸರ್ವರೂ ಆರೋಗ್ಯದಿಂದಿರಲಿ
ಸರ್ವರಿಗೂ ಮಂಗಳವಾಗಲಿ
ಯಾರೂ ವೇದನೆಗೆ ಒಳಗಾಗದಿರಲಿ
ಎಲ್ಲೆಡೆ ಶಾಂತಿ ಉಂಟಾಗಲಿ.


ಈ ಪ್ರಾರ್ಥನೆ ಸಕಲರಿಗೂ ಸದಾ ಒಳಿತನ್ನು ಬಯಸುವ ಹಾಗೂ ವಿಶ್ವ ಶಾಂತಿಯನ್ನು ಬೇಡುವ ಉದಾತ್ತ ಧ್ಯೇಯವನ್ನು ಪ್ರತಿಪಾದಿಸುತ್ತದೆ.

ಸೂಕ್ಷ್ಮ ರೀತಿಯಲ್ಲಿ ಪರೀಕ್ಷಿಸಿ ನೋಡಿದರೆ ಈ ಪ್ರಾರ್ಥನೆಯು ವಾಸ್ತವವಾಗಿ ಸಾಕಾರವಾಗುವಂತಹುದೆ, ಈ ರೀತಿ ಆದರ್ಶಪ್ರಾಯ ಜಗತ್ತನ್ನು ನಿರ್ಮಿಸುವುದು ಸೃಷ್ಟಿಕರ್ತನ ಉದ್ದೇಶವಾಗಿತ್ತೇ ಎಂದು ಅನಿಸದೆ ಇರದು. ಎಲ್ಲರೂ ಯಾವಾಗಲೂ ಸುಖ ಸಂತೋಷದಿಂದ ಬಾಳಲು ಸಾಧ್ಯವೇ, ಸರ್ವರೂ ಸದಾ ಸುಖಿಗಳೂ, ಆರೋಗ್ಯವಂತರೂ, ನಿರಾಬಾಧಿತರೂ ಆಗಿರಲಿ ಎಂಬುದು ಸೃಷ್ಟಿಕರ್ತನ ಉದ್ದೇಶವಾಗಿತ್ತೇ? ಹಾಗಿದ್ದರೆ ದೈವ ನಿರ್ಮಿತ ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ ಮೊದಲಾದ ಪ್ರಕೃತಿ ವಿಕೋಪಗಳು ತರುವ ಸಾವು–ನೋವುಗಳು ಏಕೆ ಸೃಷ್ಟಿಕರ್ತನು ಸರ್ವಶಕ್ತನಾದರೂ ಈ ಪ್ರಕೃತಿ ವಿಕೋಪಗಳು ಆಗಾಗ ಸಂಭವಿಸುತ್ತಿರುವುದನ್ನು ಗಮನಿಸಿದರೆ, ಸರ್ವರಿಗೂ ಸರ್ವಕಾಲದಲ್ಲೂ ಸುಖ ಸಂತೋಷವು ಸಂಭಾವ್ಯವಲ್ಲ ಎಂದು ಅನಿಸದೇ ಇರದು. ಅನಾದಿ ಕಾಲದಿಂದಲೂ ಮಾನವರು ಸುಖ ಸಂತೋಷ ಯಶಸ್ಸುಗಳ ಜೊತೆ ಜೊತೆಗೆ ದುಃಖ, ದುಗುಡ, ನಷ್ಟ, ಸೋಲುಗಳನ್ನೂ ಅನುಭವಿಸಿದ್ದಾರೆ.

ಅಂತೆಯೇ ಸಜ್ಜನರ ಜೊತೆ ಜೊತೆ ದುರ್ಜನರೂ ಜನ್ಮ ತಾಳಿದ್ದಾರೆ. ರಾವಣ ಇಲ್ಲದೆ ರಾಮಾಯಣ ಹೇಗಾದೀತು, ಕೌರವರಿಲ್ಲದ ಮಹಾಭಾರತ ಹೇಗಾದೀತು ಒಳಿತು, ಕೆಡುಕು ; ಸಜ್ಜನರು, ದುರ್ಜನರು ಒಂದೇ ನಾಣ್ಯದ ಎರಡು ಮುಖಗಳಂತೆ ಸೃಷ್ಟಿಯಲ್ಲಿ ಹಾಸುಹೊಕ್ಕಾಗಿ ಇರುವುದನ್ನು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿರುವುದು ಗಮನಾರ್ಹ. ಆಂಗ್ಲ ಭಾಷೆಯಲ್ಲಿ God, though Omnipotent has retained Evil for moral purposes (ಗ್ರೀಕ್ ತತ್ತ್ವಜ್ಞಾನಿ ಎಪಿಕ್ಯುರುಸ್) ಎಂಬ ಮಾತು ಭಗವಂತನು ಸರ್ವಶಕ್ತನಾದರೂ ದುಷ್ಟರನ್ನು ಸಹ ನೀತಿ ಸ್ಥಾಪನೆಗೆಂದು ಸೃಷ್ಟಿ ಮಾಡಿದ್ದಾನೆ ಎಂಬ ಮಾತಿಗೆ ಪುಷ್ಟಿ ನೀಡುತ್ತದೆ. ಸಾಕ್ಷಾತ್ ವಿಷ್ಣುವಿನ ಅವತಾರವಾಗಿ ಜನಿಸಿದ ಶ್ರೀರಾಮ, ಶ್ರೀಕೃಷ್ಣರೂ ಸಾಮಾನ್ಯ ಮನುಷ್ಯರಂತೆ ಜೀವಿಸಿ ಅನೇಕ ಕಷ್ಟ ಕಾರ್ಪಣ್ಯಗಳನ್ನು ಎದುರಿಸಬೇಕಾಯಿತು. ಕೃಷ್ಣನು ಭಗವದ್ಗೀತೆಯಲ್ಲಿ ಈ ಬಗ್ಗೆ ಸಾರಿ ಹೇಳಿದ್ದಾನೆ:

ಸುಖ ದುಃಖೆ ಸಮೇಕೃತ್ವ ಲಾಭಾ ಲಾಭೌ
ಜಯಾಜಾಯೌ (ಗೀತ 2–38)

ಜಗತ್ತಿನಲ್ಲಿ ಸುಖ–ದುಃಖ, ಲಾಭ–ನಷ್ಟ ಹಾಗೂ ಜಯ–ಅಪಜಯ ಇವುಗಳನ್ನು ಸಮಾನವಾಗಿ ಸ್ವೀಕರಿಸಬೇಕೆಂಬ ಶ್ರೀ ಕೃಷ್ಣನ ಗೀತಾ ವಾಕ್ಯ ಈ ಜಗತ್ತಿನಲ್ಲಿ ಸುಖ–ಲಾಭ ಜಯಗಳ ಜೊತೆ ಜೊತೆಗೆ ದುಃಖ, ನಷ್ಟ, ಅಪಜಯಗಳೂ ಎದುರಾಗುತ್ತವೆ ಎಂಬುದನ್ನು ಸಾರುತ್ತದೆ.



> ಮಾನವನಿಂದ ಆಗುತ್ತಿರುವ ದುರಾಚಾರಗಳನ್ನು ತೊಡೆದುಹಾಕುವ ಪ್ರಯತ್ನವನ್ನು ಸತತವಾಗಿ ಮುಂದುವರೆಸುವುದೇ ಶಾಂತಿ ಮಂತ್ರದ ಉದ್ದೇಶ. ಅದೇ ಈ ಶಾಂತಿ ಮಂತ್ರದ ಪ್ರಾರ್ಥನೆ, ಗುರಿ, ನಮ್ಮೆಲ್ಲರ ಆಶಯ.

ಪೌರಾಣಿಕ ಕಾಲದಲ್ಲಿ ದುಷ್ಟ ಶಕ್ತಿಗಳು ಜನಿಸಿ ಹಿಂಸೆ ಅನಾಚಾರದಲ್ಲಿ ತೊಡಗಿ ಶಾಂತಿ ಭಂಗ ಉಂಟು ಮಾಡಿದಾಗ ಆ ದುಷ್ಟರನ್ನು ಶಿಕ್ಷಿಸಿ ಧರ್ಮ ಸಂಸ್ಥಾಪನೆ ಮಾಡಲು ವಿಷ್ಣು ಹತ್ತು ಅವತಾರ ತಳೆಯಬೇಕಾಯಿತು. ಜಗತ್ತಿನಲ್ಲಿ ಆಗಾಗ್ಗೆ ದುಷ್ಟ ಶಕ್ತಿಗಳು ತಲೆ ಎತ್ತುತ್ತವೆ. ಆಗ ನಾನು ಧರ್ಮ ಸಂಸ್ಥಾಪನೆಗಾಗಿ ಭುವಿಯಲ್ಲಿ ಅವತರಿಸುತ್ತೇನೆ ಎಂದು ಭರವಸೆಯನ್ನು ನೀಡಿದ ಶ್ರೀಕೃಷ್ಣನ ಗೀತಾ ವಾಕ್ಯವೂ ಗಮನಾರ್ಹ.

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ಅಬ್ಯುಥಾನಂ ಅಧರ್ಮಸ್ಯ ತದಾತ್ಮಾನಾಮ್ ಸೃಜಾಮ್ಯಹಾಂ (ಗೀತ 4.7) ಮತ್ತು
ಪರಿತ್ರಾಣಾಯ ಸಾಧುನಾಂ ವಿನಾಶಾಯ ಚ ದುಶ್ಕೃತಾಂ
ಧರ್ಮ ಸಂಸ್ಥಾಪನಾಯ ಸಂಭವಾಮಿ ಯುಗೇ ಯುಗೇ (ಗೀತ 4.8)

ಹೀಗೆ ವಿಷ್ಣು ಹತ್ತು ಅವತಾರ ತಳೆದು ದುಷ್ಟರನ್ನು ಸಂಹಾರ ಮಾಡಿದ ಮೇಲೂ ಮತ್ತೆ ಮತ್ತೆ ದುಷ್ಟ ಶಕ್ತಿಗಳು ಲೋಕದಲ್ಲಿ ತಲೆಯೆತ್ತಿ ಶಾಂತಿ ಭಂಗ ಉಂಟುಮಾಡುತ್ತಿರುವುದು ಮುಂದುವರೆದಿದೆ. ಯುದ್ಧಗಳು ನಡೆಯುತ್ತಲೇ ಇವೆ. ಭಯೋತ್ಪಾದನೆ, ಹಿಂಸೆ, ಕೊಲೆ, ಸುಲಿಗೆ, ಅತ್ಯಾಚಾರಗಳೂ ಮುಂದುವರೆದಿವೆ ಸರ್ವ ಹಿತ, ಸರ್ವ ಸುಖ ಉಳ್ಳ ಜಗತ್ತು ಒಂದು ಮರೀಚಿಕೆಯಾಗಿಯೇ ಉಳಿದಿದೆ. ಇದನ್ನೇ ಶಂಕರ ಭಗವತ್ಪಾದರು; **ವಿದ್ಧಿ ವ್ಯಾಧ್ಯಭಿಮಾನಗ್ರಸ್ತಮ್ ಲೋಕಮ್ ಶೋಕಹತಂ ಚ ಸಮಸ್ತಮ್, ಈ ಲೋಕವು ರೋಗ ದುರಹಂಕಾರಗಳಿಂದ ತುಂಬಿದೆ, ಸಮಸ್ತರೂ ಒಂದಲ್ಲ ಒಂದು ಶೋಕದಿಂದ ನರಳುತ್ತಿದ್ದಾರೆ.** (ಭಜಗೋವಿಂದಂ.. 4) ಎಂದು ಉದ್ಗರಿಸಿದ್ದಾರೆ.

ಡಿ.ವಿ.ಗುಂಡಪ್ಪನವರು ತಮ್ಮ ಕಗ್ಗದಲ್ಲಿ ಹೀಗೆ ಹೇಳಿದ್ದಾರೆ;

ಭ್ರಾಂತಿಯೊ ಸಂಪೂರ್ಣ ಸುಖದಾಶೆ ಬಾಹ್ಯದಲಿ
ಸಾಂತ ಲೋಕದ ಸೌಖ್ಯ ಖಂಡ ಖಂಡವದು

ನಾವಿರುವ ಈ ಬಾಹ್ಯ ಪ್ರಪಂಚದಲ್ಲಿ ಸಂಪೂರ್ಣ ಸುಖ ದೊರಕುತ್ತದೆ ಎನ್ನುವುದು ಭ್ರಮೆ ಎಂದು ಎಚ್ಚರಿಸಿದ್ದಾರೆ. ಅದಕ್ಕೆಂದೇ ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ಎಂದು ಹೇಳಿ ಕಷ್ಟಗಳು ಬರುತ್ತವೆ. ಅವನ್ನು ಧೈರ್ಯದಿಂದ ಎದುರಿಸಿ ಎಂದು ಧೈರ್ಯ ತುಂಬಿದ್ದಾರೆ.

ಬಾನಿಗೊಂದು ಎಲ್ಲೆ ಎಲ್ಲಿದೆ? ಅವನ ನಿಯಮ ಮೀರಿ ಇಲ್ಲಿ ಏನುಸಾಗದು, ನಾವು ನೆನೆಸಿದಂತೆ ಬಾಳಲೇನು ನಡೆಯದು, ವಿಷಾದವಾಗಲೀ, ವಿನೋದವಾಗಲೀ ಅದೇನೆ ಆಗಲೀ ಅವನೇ ಕಾರಣ, ಹರುಷವೊಂದೇ ಯಾರಿಗುಂಟು ಹೇಳು ಜಗದಲಿ, ಹೂವು ಮುಳ್ಳು ಎರಡು ಉಂಟು ಬಾಳ ಲತೆಯಲಿ ಎಂಬ ಗೀತೆಯೂ ಇದೇ ಸಂದೇಶವನ್ನು ಮಾರ್ಮಿಕವಾಗಿ ಸಾರುತ್ತದೆ. (ಚಿತ್ರ: ಪ್ರೇಮದ ಕಾಣಿಕೆ, ಸಾಹಿತ್ಯ ಚಿ.ಉದಯಶಂಕರ್, ಸಂಗೀತ ಉಪೇಂದ್ರ ಕುಮಾರ್, ಗಾಯನ ಡಾ.ರಾಜಕುಮಾರ್) ಹೀಗೆ ದೈವ ನಿಯಾಮಿತ ಮತ್ತು ಮಾನವ ನಿರ್ಮಿತ ಸಂಕಷ್ಟಗಳು ಅನಾದಿ ಕಾಲದಿಂದ ಎದುರಾದರೂ ಮಾನವನಿಗೆ ಅವನ್ನೆಲ್ಲಾ ಎದುರಿಸಿ ಜೀವಿಸುವ ಸಾಮರ್ಥ್ಯವನ್ನೂ ದೇವರು ದಯಪಾಲಿಸಿದ್ದಾನೆ. ಸಂಕಷ್ಟಗಳನ್ನು ಎದುರಿಸಿದಾಗಲೇ ಮಾನವನ ಪ್ರಗತಿ ಸಾಧ್ಯ ಎಂಬುದೂ ನಿಜ. ಶಾಂತಿ ಮಂತ್ರ ಈ ದಿಕ್ಕಿನಲ್ಲಿ ಸಾಗಲು ಪೂರಕ ಶಕ್ತಿ ನೀಡುತ್ತಿದೆ.

ಒಂದು ವೇಳೆ ಈ ಪ್ರಾರ್ಥನೆಯಂತೆ ಎಲ್ಲವೂ ಸಫಲ ಆದರೆ? ಎಲ್ಲರೂ ಸುಖಿಗಳು, ಆರೋಗ್ಯವಂತರು ಹಾಗೂ ಸಂತೋಷದಿಂದ ಜೀವನ ನಡೆಸುವಂತಾದರೆ? ಯಾರಿಗೂ ಯಾವ ರೋಗವೂ ಇಲ್ಲ, ವೇದನೆಯೂ ಇಲ್ಲ! ಎಲ್ಲರೂ ಆರೋಗ್ಯವಂತರೆ ಆದರೆ? ಆಗ ವೈದ್ಯರು, ಆಸ್ಪತ್ರೆಗಳು ಬೇಕಿಲ್ಲ. ಎಲ್ಲರೂ ಸುಖಿಗಳು, ಜಯಶಾಲಿಗಳು, ಯಾರಿಗೂ ಯಾರಿಂದಲೂ ತೊಂದರೆಯೂ ಇಲ್ಲ, ಯಾರಿಂದಲೂ ಕಿರುಕುಳವೂ ಇಲ್ಲ ಎಂದಾದರೆ ಪೊಲೀಸ್, ವಕೀಲರು, ಜಡ್ಜ್ ಮತ್ತು ನ್ಯಾಯಾಲಯಗಳ ಅವಶ್ಯವಿಲ್ಲ. ಇಂತಹ ಜಗತ್ತಿನಲ್ಲಿ ಕೇವಲ ಉಣ್ಣಲು, ಮಲಗಲು ಹಾಗೂ ಮೈಥುನ ಇವುಗಳಿಗಷ್ಟೇ ಮನುಷ್ಯನ ಜೀವನ ಸೀಮಿತ ಆಗಿಬಿಡಬೇಕೆ? ಇಂತಹ ಪರಿಪೂರ್ಣವಾದ ಜಗತ್ತನ್ನು ಊಹಿಸಿದರೆ ಅನೇಕ ಅಯೋಮಯ ಪರಿಸ್ಥಿತಿ ಉಂಟಾಗಿ ಈಗ ಇರುವ ಎಲ್ಲಾ ವ್ಯವಸ್ಥೆಗಳೂ ಏರುಪೇರಾಗಿ ಊಹಿಸಲು ಅಸಾಧ್ಯವಾದ ವಿಲಕ್ಷಣ ಮತ್ತು ವೈಪರೀತ್ಯ ಪರಿಸ್ಥಿತಿ ಉಂಟಾಗುವುದಲ್ಲವೇ? ಅದು ಎಂತಹ ವಿಲಕ್ಷಣ, ನೀರಸ ಹಾಗೂ ಜಢವಾದ ಸ್ಥಿತಿ ಎಂಬುದನ್ನು ಆಂಗ್ಲ ಪ್ರಸಿದ್ಧ ಚಿಂತಕ ಜಾರ್ಜ್ ಬರ್ನಾರ್ಡ್ ಷಾ ಅವರು A Lifetime of happiness! No man alive could bear it; it would be hell on Earth ಎಂದು ಉದ್ಗರಿಸಿದ್ದಾರೆ. ಅಂದರೆ ಜೀವನ ಪೂರ್ತಿ ಸಂತೋಷ! ಬದುಕಿರುವ ಯಾವನೂ ಸಹಿಸಲಾರ; ಅದು ಭೂಮಿಗಿಳಿದ ನರಕವೇ ಸರಿ!? ಎಂದು ಜರಿದಿದ್ದಾರೆ.

ದುಃಖವನ್ನು ಅನುಭವಿಸಿದವರಿಗೆ ಮಾತ್ರ ಸುಖದ ಸವಿ ಸವಿಯಲು ಸಾಧ್ಯ. ಅನಾರೋಗ್ಯದಿಂದ ಬಳಲಿದಾಗಲೇ ಆರೋಗ್ಯದ ಮಹತ್ವವನ್ನು ಅರಿಯಲು ಸಾಧ್ಯ. ಒಬ್ಬನಿಗೆ ಗೆಲುವು ದೊರಕಲು ಮತ್ತೊಬ್ಬನು ಸೋಲಬೇಕು. ಈ ಮರ್ಮವನ್ನು ಅರಿಯಬೇಕು. ಹಾಗಂತ ಕಷ್ಟ ವಿಪತ್ತುಗಳು ಬರಲಿ, ನಷ್ಟ, ಅಪಜಯಗಳು ಉಂಟಾಗಲಿ ಎಂಬ ಪ್ರತೀಗಾಮಿ ಆಲೋಚನೆಯು ಸಲ್ಲದು.

ಕಷ್ಟ, ಕಾರ್ಪಣ್ಯಗಳು, ನಷ್ಟಗಳು, ಸೋಲು, ಸವಾಲುಗಳು ಜೀವನದಲ್ಲಿ ಅನಿವಾರ್ಯ. ಅವುಗಳನ್ನು ಎದುರಿಸಿ ಸಾರ್ಥಕ ಬಾಳನ್ನು ಬಾಳುವುದು ನಮ್ಮ ಗುರಿಯಾಗಬೇಕು. ಅದಕ್ಕೆಂದೇ ಈಸಬೇಕು ಇದ್ದು ಜಯಿಸಬೇಕು? ಎಂದರು ದಾಸರು. ಇನ್ನು ಈ ಜಗತ್ತಿನ ನಿಯಮಗಳನ್ನು ರಚಿಸಿದವರು ನಾವಲ್ಲ. ಆ ಸೃಷ್ಟಿಕರ್ತನ ನಿಯಮಗಳು ನಮ್ಮ ಮಿತಿಯಾದ ವಿಚಾರ ಶಕ್ತಿಯಿಂದ ಅರಿಯಲು ಅಸಾಧ್ಯ. ಸಂಕಷ್ಟಗಳು ಹಾಗೂ ವಿಪತ್ತುಗಳನ್ನು ಕೇವಲ ವ್ಯಷ್ಟಿಯ ದೃಷ್ಟಿಕೋನದಿಂದ ನೋಡದೆ ಸಮಷ್ಟಿಯ ಮಾನದಂಡದಿಂದ ಅಳೆದು ತೂಗಿ ನೋಡಬೇಕು, ಸೃಷ್ಟಿಕರ್ತನ ನಿಯಮಾವಳಿಗೆ ತಲೆಬಾಗಲೇಬೇಕು.

ಮಾನವನಿಂದ ಆಗುತ್ತಿರುವ ದುರಾಚಾರಗಳನ್ನು ತೊಡೆದುಹಾಕುವ ಪ್ರಯತ್ನವನ್ನು ಸತತವಾಗಿ ಮುಂದುವರೆಸುವುದೇ ಶಾಂತಿ ಮಂತ್ರದ ಉದ್ದೇಶ. ಅದೇ ಶಾಂತಿ ಮಂತ್ರದ ಪ್ರಾರ್ಥನೆ, ಗುರಿ, ನಮ್ಮೆಲ್ಲರ ಆಶಯ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಡಿ.ದೇವರಾಜ ಅರಸು ನಾಡು ಕಂಡ ಅತ್ಯುತ್ತಮ ಆಡಳಿತಗಾರರು

ಕಸಾಪ ಮಾಜಿ ಜಿಲ್ಲಾಧ್ಯಕ್ಷ ಎಂ.ಚಂದ್ರಶೇಖರ್ ಅಭಿಮತ





ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಉದ್ಘಾಟಿಸಿ, ಡಿ.ದೇವರಾಜ ಅರಸ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಬಲಚಿತ್ರದಲ್ಲಿ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸುತ್ತಿರುವುದನ್ನು ಕಾಣಬಹುದು.

ಮೈಸೂರು, ಆ.20(ಎಂಟಿವೈ)– ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ರಾಜ್ಯ ಕಂಡ ಅತ್ಯುತ್ತಮ ಆಡಳಿತಗಾರರೂ ಹಾಗೂ ಉತ್ತಮ ವ್ಯಕ್ತಿತ್ವದ ಮಹಾನ್ ವ್ಯಕ್ತಿಯೂ ಆಗಿ ರಾಜ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರು ಹಾಗೂ ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾನ ಸಮಿತಿಯ ಗೌರವ ಅಧ್ಯಕ್ಷ ಎಂ.ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಜಿ.ಪಂ., ಮೈಸೂರು ಮಹಾನಗರ ಪಾಲಿಕೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಶೋಷಿತರ ಅಭಿವೃದ್ಧಿ ಹರಿಕಾರ, ನೊಂದವರ ನಂದಾದೀಪ, ಧೀಮಂತ ನಾಯಕ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಡಿ.ದೇವರಾಜ ಅರಸು ಅವರು ರಾಜ್ಯ ರಾಜಕೀಯ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿ ಅಧಿಕಾರ ಚಲಾಯಿಸಿದರು. ಎಲ್ಲರೂ ಸ್ಮರಿಸಬಹುದಾದ, ಸ್ಮರಣೀಯವಾದ ಎಲ್ಲಾ ಕಾಲಕ್ಕೂ ಶಾಶ್ವತವಾಗಿ ನಿಲ್ಲಬಹುದಾದಂತಹ ಅಧಿಕಾರವನ್ನು ಕೊಟ್ಟರು. ಅವರು ಮುಖ್ಯಮಂತ್ರಿಯಾಗಿದ್ದಾಗ ಜಾರಿಗೊಳಿಸಿದ ಅನೇಕ ಯೋಜನೆ ಮತ್ತು ಕಾನೂನುಗಳು ಇಂದಿಗೂ ಪ್ರಸ್ತುತವಾಗಿದೆ ಎಂದರು.

ಡಿ.ದೇವರಾಜ ಅರಸು ದೂರದೃಷ್ಟಿಯ ಆಡಳಿತ ಮತ್ತು ಸಾಮಾಜಿಕ ನ್ಯಾಯ ಬದ್ಧತೆಯಿಂದ ಜನಪ್ರಿಯರಾದರು. ಶೋಷಿತರ ಮತ್ತು ತುಳಿತಕ್ಕೆ ಒಳಗಾದ ಜನಾಂಗದ ಧ್ವನಿಯಾಗಿ, ಧ್ವನಿ ಇಲ್ಲದವರಿಗೆ ಧ್ವನಿಯಾಗಿ ನಿಂತಿದ್ದರು. ಕೃಷಿ, ಹೈನುಗಾರಿಕೆ, ಶಿಕ್ಷಣ, ರಾಜಕೀಯ ಕ್ಷೇತ್ರಕ್ಕೆ ಹಾಗೂ ಸಾಮಾಜಿಕ ನ್ಯಾಯ ಕ್ಷೇತ್ರಗಳಲ್ಲಿ ಹಲವು ಸುಧಾರಣೆಗಳನ್ನು ತಂದರು. ರಾಜ್ಯದ ಅಭಿವೃದ್ಧಿಗಾಗಿ ನೀಡಿದ ಕೊಡುಗೆ ಅಪಾರ. ಎಲ್ಲಾ ಸಮುದಾಯಗಳ ಅಭಿವೃದ್ಧಿಗಾಗಿ ಹಾಗೂ ಹಿಂದುಳಿದ ವರ್ಗಗಳ ಏಳಿಗೆಗಾಗಿ ಹೆಚ್ಚು ಶ್ರಮಿಸಿದರು. ಭೂ ಸುಧಾರಣೆ ಕಾಯ್ದೆ ಜಾರಿಗೆ ತಂದು ಅಪಾರ ಸಂಖ್ಯೆಯ ಬಡವರಿಗೆ ನೆರವಾದರು. ಜೀತ ಪದ್ಧತಿ ನಿಷೇಧ ಕಾಯ್ದೆ, ಋಣಭಾರ ಪರಿಹಾರ ಕಾಯ್ದೆ ಜಾರಿಗೊಳಿಸಿ, ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆ ತಂದರು. ಅಲ್ಲದೆ, ಎಲ್ಲಾ ವರ್ಗದವರಿಗೂ ರಾಜಕೀಯ ಸಮಾನತೆ ನೀಡಿದರು. ಮಲ ಹೊರುವ ಪದ್ಧತಿಯನ್ನು ನಿಷೇಧ ಮಾಡಿದರು ಎಂದು ತಿಳಿಸಿದರು.

ಮೈಸೂರು ರಾಜ್ಯಕ್ಕೆ ಕರ್ನಾಟಕ ರಾಜ್ಯ ಎಂದು ಮರುನಾಮಕರಣ ಮಾಡಿದ ವ್ಯಕ್ತಿ ಡಿ.ದೇವರಾಜ ಅರಸು. ಮುಳ್ಳಿನ ಹಾದಿಯಲ್ಲಿ ಹೂವನ್ನು ಬಿತ್ತುವಂತಹ ಕೆಲಸ ಮಾಡಿದವರು. ಕನ್ನಡ ಭಾಷೆಯ ಮೇಲೆ ಅವರಿಗಿದ್ದ ಪ್ರೀತಿ ಅಪಾರವಾದದ್ದು, ಭಾಷೆಯ ಬೆಳವಣಿಗೆಗಾಗಿ ಹೆಚ್ಚು ಕನಸು ಕಂಡಿದ್ದರು. ಎಲ್ಲವೂ ಕನ್ನಡದಲ್ಲಿಯೇ ಆಗಬೇಕು ಎಂಬ ಆಕಾಂಕ್ಷೆಯನ್ನು ಹೊಂದಿದ್ದರು. ಆಧುನಿಕ ಕರ್ನಾಟಕದ ಶಿಲ್ಪಿಗಳಲ್ಲಿ ದೇವರಾಜ ಅರಸು ಒಬ್ಬರಾಗಿದ್ದರು. ಅನೇಕ ವಿರೋಧಗಳ ನಡುವೆಯೂ ಯಶಸ್ಸನ್ನು ಕಂಡವರು. ಇವರ ಸಾಧನೆ, ಕೊಡುಗೆ ಹಾಗೂ ಅವರು ಜಾರಿ ಮಾಡಿರುವಂತಹ ಸುಧಾರಣೆಗಳು ಎಲ್ಲಾ ಕಾಲಕ್ಕೂ ಶಾಶ್ವತವಾದದ್ದು ಎಂದರು. ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ದೇವರಾಜ ಅರಸು ಅವರ ಆಡಳಿತ ವೈಖರಿ, ಅವರು ಜಾರಿಗೆ ತಂದ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು.

ಈ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕ್ರೀಡಾ ಪಟುಗಳಿಗೆ ಪುರಸ್ಕಾರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಜಿ. ಪಂ. ಸಿಇಓ ಎಸ್.ಯುಕೇಶ್ ಕುಮಾರ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಘವೇಂದ್ರ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಿವಕುಮಾರ್, ಮೈಸೂರು ಮಹಾನಗರ ಪಾಲಿಕೆಯ ಉಪ ಆಯುಕ್ತ ಸೋಮಶೇಖರ್ ಹಾಗೂ ಜಿಲ್ಲಾ ಮಟ್ಟದ ಕಲ್ಯಾಣಾಧಿಕಾರಿಗಳು, ತಾಲೂಕು ಮಟ್ಟದ ಹಿಂದುಳಿದ ವರ್ಗಗಳ ಅಧಿಕಾರಿಗಳು ಸೇರಿದಂತೆ ಮತ್ತಿತರು ಉಪಸ್ಥಿತರಿದ್ದರು.

ಸರಸ್ವತಿಪುರಂ ಜವರೇಗೌಡ ಪಾರ್ಕ್ ಸುತ್ತ ರಸ್ತೆ ಬದಿ ವ್ಯಾಪಾರಿಗಳ ಹಾವಳಿ



ಮೈಸೂರು, ಆ.20(ಎಂಕೆ)– ಮೈಸೂರಿನ ಸರಸ್ವತಿಪುರಂನಲ್ಲಿ ಜವರೇಗೌಡ ಪಾರ್ಕ್ ಸುತ್ತಲೂ ರಸ್ತೆ ಬದಿ ವ್ಯಾಪಾರಿಗಳ ಹಾವಳಿ ಹೆಚ್ಚಾಗಿದ್ದು, ಅಡ್ಡಾದಿಡ್ಡಿ ವಾಹನಗಳ ಪಾರ್ಕಿಂಗ್‌ನಿಂದಾಗಿ ಪಾದಚಾರಿಗಳಿಗೆ ತೀವ್ರ ತೊಂದರೆಯಾಗುತ್ತಿದೆ ಎಂದು ಸ್ಥಳೀಯ ನಿವಾಸಿಗಳು, ವಾಯುವಿಹಾರಿಗಳು ದೂರಿದ್ದಾರೆ.

ಸರಸ್ವತಿಪುರಂನ 5 ಮತ್ತು 6ನೇ ಕ್ರಾಸ್ ನಡುವೆ ಇರುವ ಜವರೇಗೌಡ ಪಾರ್ಕ್ ಸುತ್ತಲೂ ಸಂಜೆಯಾಗುತ್ತಿದ್ದಂತೆ ರಸ್ತೆ ಬದಿಯಲ್ಲಿ ಚಾಟ್ಸ್ ಇನ್ನಿತರೆ ತಿಂಡಿ–ತಿನಿಸುಗಳ ವ್ಯಾಪಾರ ಜೋರಾಗಲಿದ್ದು, ರಸ್ತೆಯ ಎರಡೂ ಬದಿಯಲ್ಲಿ ಅಡ್ಡಾದಿಡ್ಡಿಯಾಗಿ ಕಾರು, ಬೈಕ್ ಮತ್ತು ಸ್ಕೂಟರ್‌ಗಳನ್ನು ಪಾರ್ಕಿಂಗ್ ಮಾಡಲಾಗುತ್ತದೆ. ಅದರಲ್ಲೂ 6ನೇ ಕ್ರಾಸ್(ಪಾರ್ಕ್‌ನ ಮತ್ತೊಂದು ಬದಿ) ರಸ್ತೆ ಬದಿಯಲ್ಲಿ ತಿರುಗಾಡುವುದಕ್ಕೂ ಜಾಗ ಇರುವುದಿಲ್ಲ ಎಂದಿದ್ದಾರೆ.

ಪ್ರತೀ ನಿತ್ಯ ಸಮಸ್ಯೆ ಹೆಚ್ಚಾಗುತ್ತಿದ್ದು, ಪಾರ್ಕ್‌ಗೆ ಬರುವ ವಾಯು ವಿಹಾರಿಗಳ ಗೋಳು ಹೇಳತೀರದಾಗಿದೆ. ಪಾರ್ಕ್ ಗೇಟ್ ಮುಂದೆಯೇ ದ್ವಿಚಕ್ರ ವಾಹನಗಳನ್ನು ಸಾಲಾಗಿ ನಿಲ್ಲಿಸಿ, ತಿರುಗಾಡಲು ಸ್ಥಳವಿಲ್ಲದಂತೆ ಮಾಡಲಾಗುತ್ತಿದೆ. ಚಾಟ್ಸ್ ತಿನ್ನಲು ಬರುವವರು ಬೇಕಾಬಿಟ್ಟಿಯಾಗಿ ರಸ್ತೆಯ ಎರಡು ಬದಿಯಲ್ಲಿ ತಮ್ಮ ವಾಹನಗಳನ್ನು ನಿಲ್ಲಿಸುವುದರಿಂದ ಇಕ್ಕಟ್ಟಿನ ವಾತಾವರಣ ಸೃಷ್ಟಿಯಾಗುತ್ತಿದೆ ಎಂದು 'ಮೈಸೂರು ಮಿತ್ರ'ನಲ್ಲಿ ಅಳಲು ತೋಡಿಕೊಂಡಿದ್ದಾರೆ.

ಪಾರ್ಕ್ ಸುತ್ತಲಿನ 10–15 ಅಡಿ ರಸ್ತೆಯಲ್ಲಿ ಕಂಡಲೆಲ್ಲಾ ರಸ್ತೆ ಬದಿ ವ್ಯಾಪಾರಿಗಳಿದ್ದು, ಭಾರೀ ಸಂಖ್ಯೆಯಲ್ಲಿ ಜನ ಸೇರುತ್ತಾರೆ. ರಸ್ತೆಯ ಎರಡು ಬದಿಯಲ್ಲಿ ಅಡ್ಡಾದಿಡ್ಡಿಯಾಗಿ ಪಾರ್ಕಿಂಗ್ ಮಾಡಿ, ತಿರುಗಾಡಲು ಜಾಗವೇ ಇಲ್ಲದಂತೆ ಮಾಡಲಾಗುತ್ತದೆ. ಹಿರಿಯ ನಾಗರಿಕರು, ಮಹಿಳೆಯರು, ಮಕ್ಕಳು ವಾಯುವಿಹಾರಕ್ಕೆ ಬರದಂತಾಗಿದೆ ಎಂದು ಚಾಮರಾಜ ವಿಧಾನ ಸಭಾ ಕ್ಷೇತ್ರ ಮಾಜಿ ಶಾಸಕ ಎಲ್. ನಾಗೇಂದ್ರ ತಿಳಿಸಿದರು.

ಹಲವು ವರ್ಷಗಳಿಂದ ಈ ಪಾರ್ಕ್ ಅನ್ನು ಗಮನಿಸುತ್ತಿದ್ದೇವೆ. ಮೊದಲೆಲ್ಲಾ ಇಷ್ಟೊಂದು ರಸ್ತೆ ಬದಿ ವ್ಯಾಪಾರಿಗಳು ಇರಲಿಲ್ಲ. ದಿನೇ ದಿನೆ ಈ ಜಾಗದಲ್ಲಿ ಜನದಟ್ಟಣೆ ಹೆಚ್ಚಾಗುತ್ತಿದೆ. ಅಲ್ಲದೆ ಲವ್ವರ್‌ಗಳ ಸಂಖ್ಯೆ ಹೆಚ್ಚಾಗಿದ್ದು, ಅವರ ವರ್ತನೆ ಮಹಿಳೆಯರಿಗೆ, ಹಿರಿಯ ನಾಗರಿಕರಿಗೆ ಮುಜುಗರ ತರುತ್ತಿದೆ. ಅಲ್ಲದೆ ಸ್ವಚ್ಛ ವಾತಾವರಣ ಕಲುಷಿತವಾಗುತ್ತಿದ್ದು, ಈ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಗಮನಿಸಬೇಕು ಎಂದು ಒತ್ತಾಯಿಸಿದರು.

ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸಕ್ರಿಯವಾಗಿ ಭಾಗವಹಿಸಿ

ಆಶಾ ಕಾರ್ಯಕರ್ತೆಯರಿಗೆ ಡಿಹೆಚ್‌ಓ ಡಾ. ಕುಮಾರಸ್ವಾಮಿ ಕರೆ



ಮೈಸೂರು ಜಿಪಂ ಸಭಾಂಗಣದಲ್ಲಿ ಆಶಾ ಕಾರ್ಯಕರ್ತೆಯರ ಕುಂದು–ಕೊರತೆ ಸಭೆ ನಡೆಯಿತು.

ಮೈಸೂರು, ಆ.20(ಎಂಕೆ)– ಜಿಲ್ಲೆಯ ಆಶಾ ಕಾರ್ಯಕರ್ತೆಯರು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಕರೆ ನೀಡಿದರು.

ಜಿಪಂ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಆಶಾ ಕಾರ್ಯಕರ್ತೆಯರ ಕುಂದು–ಕೊರತೆ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ 1730 ಮಂದಿ ಆಶಾ ಕಾರ್ಯಕರ್ತೆಯರು ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರತಿ ತಿಂಗಳು ಸುಮಾರು 65 ರಿಂದ 70 ಲಕ್ಷ ರೂ.ವರೆಗೆ ಪ್ರೋತ್ಸಾಹ ಧನ ಹಾಗೂ ಸುಮಾರು 80 ರಿಂದ 85 ಲಕ್ಷ ರೂ ಮಾಸಿಕ ನಿಶ್ಚಿತ ಗೌರವ ಧನವನ್ನು ನೇರವಾಗಿ ಆಶಾ ಕಾರ್ಯಕರ್ತೆಯರ ಬ್ಯಾಂಕ್ ಖಾತೆಗೆ ಪಾವತಿಸಲಾಗುತ್ತಿದೆ ಎಂದರು.

ಆಶಾ ಕಾರ್ಯಕರ್ತೆರು ತಮ್ಮ ತಮ್ಮ ವ್ಯಾಪ್ತಿಯ ಮನೆಗಳು ಹಾಗೂ ಆರೋಗ್ಯ ಸಂಸ್ಥೆಗಳಿಗೆ ಭೇಟಿ ನೀಡುವುದು. ಕ್ಷೇತ್ರ ಮಟ್ಟದಲ್ಲಿ ಜಾಗೃತಿ ಸಭೆಗಳನ್ನು ಸಂಘಟಿಸುವುದು. ಗ್ರಾಮ ಆರೋಗ್ಯ ದಾಖಲೆಗಳನ್ನು ನಿರ್ವಹಿಸುವುದು. ಪೌಷ್ಠಿಕಾಂಶ ಮತ್ತು ಮೂಲಭೂತ ನೈರ್ಮಲ್ಯ ಮತ್ತು ಆರೋಗ್ಯಕರ ಪದ್ಧತಿಗಳ ಬಗ್ಗೆ ಅರಿವು ಮೂಡಿಸುವುದು. ಆರೋಗ್ಯಕರ ಜೀವನ ಶೈಲಿಯ ಬಗ್ಗೆ ಮಾಹಿತಿ ನೀಡುವುದು. ಪ್ರಸ್ತುತ ಲಭ್ಯವಿರುವ ಆರೋಗ್ಯ ಸೇವೆಗಳ ಮಾಹಿತಿ ಮತ್ತು ಸದುಪಯೋಗ ಪಡೆದುಕೊಳ್ಳಲು ಸಮುದಾಯದಲ್ಲಿ ಜಾಗೃತಿ ಮೂಡಿಸುವುದು. ಗರ್ಭಿಣಿಯರ ಮನೆಗಳಿಗೆ ಭೇಟಿ ಮತ್ತು ಹೆರಿಗೆ ಸಿದ್ಧತೆ ಹಾಗೂ ಸುರಕ್ಷಿತ ಮತ್ತು ಸಾಂಸ್ಥಿಕ ಹೆರಿಗೆಯ ಪ್ರಾಮುಖ್ಯತೆ ತಿಳಿಸುವುದು ಹಾಗೂ ಸ್ತನ್ಯಪಾನದ ಮಹತ್ವ ಮತ್ತು ವಿಧಾನಗಳಿಗೆ ಪ್ರಾಮುಖ್ಯತೆ ತಿಳಿಸುವ ಮೂಲಕ ಸುಸ್ಥಿರವಾದ ಆರೋಗ್ಯ ಕ್ಷೇತ್ರದ ಉನ್ನತಿ ದೃಷ್ಟಿಯಿಂದ ಗೃಹ ಆರೋಗ್ಯ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಸೂಚಿಸಿದರು.

ರಾಜ್ಯ ಮಟ್ಟಕ್ಕೆ ಪತ್ರ ವ್ಯವಹಾರ: ಆಸ್ಪತ್ರೆ ಮತ್ತು ಆರೋಗ್ಯ ಕೇಂದ್ರಗಳಲ್ಲಿ ಆಶಾ ಕಾರ್ಯಕರ್ತೆಯರಿಗಾಗಿ ಪ್ರತ್ಯೇಕ ವಿಶ್ರಾಂತಿ ಕೊಠಡಿ ಹಾಗೂ ಕಾರ್ಯಚಟುವಟಿಕೆಯ ಪ್ರೋತ್ಸಾಹ ಧನವನ್ನು ಪ್ರತಿ ತಿಂಗಳು ನೀಡುವಂತೆ ಕ್ರಮವಹಿಸಲು ಎಲ್ಲಾ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳಿಗೆ ನಿರ್ದೇಶನ ಹಾಗೂ ಇತರ ಬೇಡಿಕೆಗಳ ಬಗ್ಗೆ ರಾಜ್ಯ ಮಟ್ಟಕ್ಕೆ ಪತ್ರ ವ್ಯವಹರಿಸಲಾಗುವುದು ಎಂದು ಭರವಸೆ ನೀಡಿದರು.

ಬಳಿಕ ಗೃಹ ಆರೋಗ್ಯ ಕಾರ್ಯಕ್ರಮ ಕುರಿತು ಆಶಾ ಕಾರ್ಯಕರ್ತೆಯರಿಗೆ ತರಬೇತಿ ನೀಡಲಾಯಿತು. ಸಭೆಯಲ್ಲಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಮಹಮ್ಮದ್ ಶಿರಾಜ್ ಅಹಮ್ಮದ್, ಜಿಲ್ಲಾ ಮಟ್ಟದ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು, ತಾಲ್ಲೂಕು ಆರೋಗ್ಯಾಧಿಕಾರಿಗಳು, ಆಶಾ ಕಾರ್ಯಕರ್ತೆಯರ ಸಂಘದ ಪದಾಧಿಕಾರಿಗಳು ಮತ್ತು ಆರೋಗ್ಯ ಸಿಬ್ಬಂದಿ ಉಪಸ್ಥಿತರಿದ್ದರು.

ಪರಿಷತ್‌ನಲ್ಲಿ ಸೌಹಾರ್ದ ಸಹಕಾರಿ ಬಿಲ್‌ಗೆ ಸೋಲು

ಬೆಂಗಳೂರು, ಆ.20– ವಿಧಾನಸಭೆಯಲ್ಲಿ ಅಂಗೀಕಾರವಾಗಿದ್ದ ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ಕಾಯ್ದೆಯು ವಿಧಾನ ಪರಿಷತ್‌ನಲ್ಲಿ ತಿರಸ್ಕೃತವಾಗಿದೆ. ಈ ಮೂಲಕ ಕಾಯ್ದೆ ಅನುಮೋದನೆ ನಿರೀಕ್ಷೆಯಲ್ಲಿದ್ದ ರಾಜ್ಯ ಸರ್ಕಾರಕ್ಕೆ ಮುಖಭಂಗವಾಗಿದೆ. ಬಿಲ್ ಸೋಲಿಸಿ ಸರ್ಕಾರಕ್ಕೆ ಮುಖಭಂಗ ಮಾಡುವಲ್ಲಿ ದೋಸ್ತಿಗಳು ಯಶಸ್ವಿಯಾಗಿದ್ದಾರೆ.


ತಿದ್ದುಪಡಿ ವಿಧೇಯಕ ಕುರಿತಂತೆ ಕಲಾಪದಲ್ಲಿ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರು ಒಂದು ಗಂಟೆಗಳ ಕಾಲ ಚರ್ಚೆ ನಡೆಸಿದರು. ಕಾಯ್ದೆಯಲ್ಲಿ ಕೆಲವು ಅಂಶಗಳು ನ್ಯೂನತೆಯಿಂದ ಕೂಡಿದೆ. ಹೀಗಾಗಿ, ಇದನ್ನು ಸರಳೀಕರಣಗೊಳಿಸುವಂತೆ ವಿರೋಧ ಪಕ್ಷದ ಸದಸ್ಯರು ಒತ್ತಾಯಿಸಿದರು. ಆದರೆ, ಸರ್ಕಾರ ಒಪ್ಪದ ಕಾರಣ ಕಾಯ್ದೆಯ ಅಂಗೀಕಾರಕ್ಕೆ ಮತಕ್ಕೆ ಹಾಕುವಂತೆ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಮನವಿ ಮಾಡಿದರು. ಸಭಾಪತಿಗಳು ಮತಕ್ಕೆ ಹಾಕುವ ನಿರ್ಧಾರ ಕೈಗೊಂಡರು. ಮತದಾನ ಪ್ರಕ್ರಿಯೆಯಲ್ಲಿ ಬಿಲ್ ಪರ 23 ಮತಗಳು ಬಿದ್ದರೆ, ಬಿಲ್ ವಿರುದ್ಧ 26 ಮತಗಳು ಬಿದ್ದು ವಿಧೇಯಕಕ್ಕೆ ಸೋಲಾಯ್ತು.

ತಿಮರೋಡಿ ವಿರುದ್ಧವೇ ಅಕ್ರಮ ಶವ ಹೂತ ಆರೋಪದ ದೂರು

ಬೆಳ್ತಂಗಡಿ, ಆ.20– ನೂರಾರು ಶವ ಹೂತ ಪ್ರಕರಣ ಈಗ ಮತ್ತಷ್ಟು ಕುತೂಹಲ ಕೆರಳಿಸಿದ್ದು, ಪ್ರಕರಣದಲ್ಲಿ ಮತ್ತೊಂದು ಹೊಸ ಟ್ವಿಸ್ಟ್ ಎದುರಾಗಿದೆ. ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಅವರ ವಿರುದ್ಧವೂ ಅಕ್ರಮವಾಗಿ ಶವ ಹೂತ ಆರೋಪ ಹೊರಿಸಲಾಗಿದೆ. ಭಾಸ್ಕರ್ ನಾಯ್ಕ್ ಎಂಬುವರು ಬೆಳ್ತಂಗಡಿಯ ಎಸ್‌ಐಟಿ ಕಚೇರಿಗೆ ಬಂದು ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ ಹೊಸ ದೂರು ಸಲ್ಲಿಸಿದ್ದು, ಈ ಪ್ರಕರಣವು ಮತ್ತಷ್ಟು ತೀವ್ರತೆ ಪಡೆದುಕೊಂಡಿದೆ.

ದೂರುದಾರ ಭಾಸ್ಕರ್ ನಾಯ್ಕ್ ಎಂಬುವರ ಪ್ರಕಾರ 2018ರಲ್ಲಿ ಉಜಿರೆಯ ಬಿಲ್ಲರೋಡಿ ಎಂಬಲ್ಲಿ ಸೋಂಪ ಅಂದರೆ ಬಾಲಕೃಷ್ಣ ಗೌಡ ಎಂಬ ವ್ಯಕ್ತಿಯ ಶವವನ್ನು ಜೆಸಿಬಿ ಯಂತ್ರದ ಮೂಲಕ ಮಣ್ಣಿನಡಿ ಹೂಳಲಾಗಿದೆ. ಈ ಕುರಿತು ತನಿಖೆ ನಡೆಸುವಂತೆ ದೂರಿನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ದೂರುದಾರ ಭಾಸ್ಕರ್ ನಾಯ್ಕ್ ಅವರು, ಈ ಪ್ರಕರಣಕ್ಕೆ ಸಂಬಂಧಿಸಿದ ಸೂಕ್ತ ಸಾಕ್ಷ್ಯಗಳನ್ನು ನಾನು ತನಿಖಾ ಸಮಯದಲ್ಲಿ ಎಸ್‌ಐಟಿಗೆ ಒದಗಿಸುತ್ತೇನೆ. ಘಟನೆಯ ಸಮಯದಲ್ಲಿ ನಡೆದಿದ್ದ ಅಕ್ರಮ ಚಟುವಟಿಕೆಗಳ ಬಗ್ಗೆ ಸಾಕ್ಷ್ಯಾಧಾರಗಳಿವೆ ಎಂದು ತಿಳಿಸಿದ್ದಾರೆ.

79ನೇ ಸ್ವಾತಂತ್ರ್ಯ ದಿನಾಚರಣೆ



ಮೈಸೂರು ಜನತಾ ನಗರದ ಒಕ್ಕಲಿಗರ ಸಂಘದ ಕಟ್ಟಡದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಮಹಾನಗರ ಪಾಲಿಕೆ ನಿಕಟ ಪೂರ್ವ ಸದಸ್ಯರಾದ ಸವಿತಾ ಸುರೇಶ್, ಸಂಘದ ಅಧ್ಯಕ್ಷ ಸುರೇಶ್, ಗೌರವಾಧ್ಯಕ್ಷ ಶೇಖರ್, ಚಿಕ್ಕಣ್ಣ, ಕಾರ್ಯದರ್ಶಿ ಲಕ್ಕೇಗೌಡ, ಖಜಾಂಚಿ ಮಂಜು, ನಿರ್ದೇಶಕರುಗಳಾದ ಗವಿಸಿದ್ದು, ಟೆಂಟ್ ಕುಮಾರ್, ಸೊಸೈಟಿ ಕುಮಾರ್, ಮಹೇಶ್, ವೆಂಕಟೇಶ್, ಶಿವು, ಕಲಾ, ನಾರಾಯಣ್, ಮರಿಗೌಡ, ಮಂಜು ಇತರರು ಉಪಸ್ಥಿತರಿದ್ದರು.

ಬಲಗೈ ಸಮಾಜಕ್ಕೆ ಸಂಪೂರ್ಣ ಜಯ ಸಿಕ್ಕಿಲ್ಲ



ಮೈಸೂರು,ಆ.20(ಪಿಎಂ)– ಒಳ ಮೀಸಲಾತಿ ಹಂಚಿಕೆಯನ್ನು ಅವೈಜ್ಞಾನಿಕವಾಗಿ ಮಾಡಿದ್ದರಿಂದ ಅಸ್ಪೃಶ್ಯ ಜಾತಿಗಳಾದ ಬಲಗೈ ಮತ್ತು ಎಡಗೈ ಸಮುದಾಯಗಳು ಭಿನ್ನಾಭಿಪ್ರಾಯದೊಂದಿಗೆ ಬೀದಿಗೆ ಬರುವಂತಾಯಿತು. ಬಲಗೈ ಸಮಾಜಕ್ಕೆ ಶೇ.6ರಷ್ಟು ಮೀಸಲು ದೊರೆತಿದ್ದರೂ ಜಯ ಸಿಕ್ಕಿಲ್ಲ. ಜನಸಂಖ್ಯೆ ಕಡಿಮೆ ಮಾಡಲಾಗಿದೆ ಎಂಬ ನೋವು ಕಾಡುತ್ತಿದೆ ಎಂದು ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಬೇಸರ ವ್ಯಕ್ತಪಡಿಸಿದ್ದಾರೆ.

ರಾಜ್ಯಾದ್ಯಂತ ಹೋರಾಟ ಮಾಡಿದ ಬಲಗೈ ಸಮಾಜದ ಎಲ್ಲಾ ಮುಖಂಡರಿಗೂ ಧನ್ಯವಾದಗಳು. ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಲೋಕಸೇವಾ ಆಯೋಗದ ಮಾಜಿ ಸದಸ್ಯ ದಾಸಯ್ಯ, ಎಸ್‌ಸಿ–ಎಸ್‌ಟಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರ ಶೇಖರಯ್ಯ ಸೇರಿದಂತೆ ಬಲಗೈ ಸಮುದಾಯದ ಎಲ್ಲಾ ಮುಖಂಡರನ್ನು ಅಭಿನಂದಿಸುತ್ತೇನೆ. ಎಡ–ಬಲದ ಕಿತ್ತಾಟವನ್ನು ಕೊನೆಗಾಣಿಸಿ ಸರ್ಕಾರದ ಮಟ್ಟದಲ್ಲಿ ಹೋರಾಡಿ ಎರಡು ಸಮುದಾಯಕ್ಕೂ ಸಮಪಾಲು ಕೊಡಿಸಿದ ಎಡ–ಬಲ ಸಮುದಾಯದ ಸಚಿವರು, ಶಾಸಕರಿಗೂ ಅಭಿನಂದಿಸುವುದಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಅಭಿನಂದನೆ



ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಅಭಿನಂದಿಸಿದ ಸಂದರ್ಭ.

ಮೈಸೂರು,ಆ.20(ಪಿಎಂ)– ಒಳಮೀಸಲಾತಿಗಾಗಿ ಸುಮಾರು 35 ವರ್ಷಗಳಿಂದ ಹಳ್ಳಿಯ ಸಾಮಾನ್ಯ ವ್ಯಕ್ತಿಯಿಂದ ಹಿಡಿದು ದಿಲ್ಲಿಯ ನಾಯಕರವರೆಗೂ ಹೋರಾಟ ಮಾಡಿಕೊಂಡು ಬಂದ ಮಾದಿಗ ಸಮಾಜದ ಬಂಧುಗಳು, ಸಂಘಟನೆಗಳ ಪರಿಶ್ರಮದ ಫಲವಾಗಿ ಪರಿಶಿಷ್ಟ ಜಾತಿಯ ಯಾವುದಕ್ಕೂ ಅನ್ಯಾಯವಾಗದಂತೆ ಐತಿಹಾಸಿಕ ನಿರ್ಣಯ ಕೈಗೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಸಚಿವ ಸಂಪುಟದ ಎಲ್ಲಾ ಸದಸ್ಯರಿಗೂ ಅಭಿನಂದನೆ ಸಲ್ಲಿಸುವುದಾಗಿ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ತಿಳಿಸಿದ್ದಾರೆ. ರಾಜ್ಯ ಸರ್ಕಾರದಲ್ಲಿ ಒಳಮೀಸಲಾತಿ ಜಾರಿಗೆ ಹಗಲಿರುಳು ಶ್ರಮಿಸಿದ ಸಚಿವರಾದ ಕೆ.ಎಚ್.ಮುನಿಯಪ್ಪ, ಆರ್.ಬಿ.ತಿಮ್ಮಾಪುರ, ಮಾಜಿ ಸಚಿವರಾದ ಆಂಜನೇಯ, ಶಾಸಕರು ಮತ್ತು ಮಾಜಿ ಶಾಸಕರು ಸೇರಿದಂತೆ ಎಲ್ಲರನ್ನು ಅಭಿನಂದಿಸುವುದಾಗಿ ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

ಮಂತ್ರಾಲಯದ ಹುಂಡಿಯಲ್ಲಿ 3.35 ಕೋಟಿ ಸಂಗ್ರಹ



ರಾಯಚೂರು: ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಕಳೆದ 22 ದಿನಗಳ ಹುಂಡಿ ಎಣಿಕೆ ಮುಕ್ತಾಯವಾಗಿದ್ದು, ಭಕ್ತರಿಂದ 3.35 ಕೋಟಿ ರೂ. ಕಾಣಿಕೆ ಸಂಗ್ರಹವಾಗಿದೆ ಆಗಸ್ಟ್ ತಿಂಗಳಲ್ಲಿ ಮಂತ್ರಾಲಯ ಮಠಕ್ಕೆ ಕೋಟ್ಯಂತರ ರೂಪಾಯಿ ಕಾಣಿಕೆ ಹರಿದು ಬಂದಿದ್ದು, ಸಂಗ್ರಹವಾದ ಕಾಣಿಕೆಯಲ್ಲಿ 3,24,52,256 ರೂ. ನೋಟುಗಳು, 10,79,500 ರೂ. ನಾಣ್ಯಗಳು ಸಂಗ್ರಹವಾಗಿವೆ. ಒಟ್ಟು ಕಳೆದ 22 ದಿನಗಳಲ್ಲೇ 3,35,31,756 ರೂ. ಕಾಣಿಕೆ ಸಂಗ್ರಹವಾಗಿದೆ. ಇನ್ನೂ 74 ಗ್ರಾಂ ಚಿನ್ನ, 1,440 ಗ್ರಾಂ ಬೆಳ್ಳಿ ಕಾಣಿಕೆ ರೂಪದಲ್ಲಿ ಬಂದಿದೆ.

ನಿರೀಕ್ಷಿತ ವೇಗದಲ್ಲಿ ಕನ್ನಡದ ಪ್ರಗತಿಯಾಗುತ್ತಿಲ್ಲ: ಆತಂಕ



'ಅನ್ಯ ಭಾಷೆಯ ರೈಲ್ವೆ ನೌಕರರಿಗೆ ಕನ್ನಡ ಕಲಿಕಾ ಅಭಿಯಾನ' ಕಾರ್ಯಕ್ರಮವನ್ನು ಪುರುಷೋತ್ತಮ್ ಬಿಳಿಮಲೆ ಉದ್ಘಾಟಿಸಿದರು.

ಮೈಸೂರು, ಆ.20(ವಿವಿಹೆಚ್)– ಇವತ್ತು ರಾಜ್ಯದಲ್ಲಿ ಕನ್ನಡ ನಿರೀಕ್ಷಿತ ವೇಗದಲ್ಲಿ ಬೆಳೆಯುತ್ತಿಲ್ಲ. ಇದನ್ನು ಸರಿದೂಗಿಸುವ ಸಂಬಂಧ ಕಾರಣಗಳನ್ನು ನಾವೇ ಹುಡುಕಿಕೊಳ್ಳಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಆತಂಕ ವ್ಯಕ್ತಪಡಿಸಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ನೈಋತ್ಯ ರೈಲ್ವೆ ನೌಕರರ ಕನ್ನಡ ಸಂಘ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ ಮೈಸೂರಿನ ಅಶೋಕಪುರಂನ ಕೇಂದ್ರೀಯ ರೈಲ್ವೆ ಕಾರ್ಯಾಗಾರದ ಕನ್ನಡ ಸಂಘದ ಕಚೇರಿ ಆವರಣದಲ್ಲಿ ಬುಧವಾರ ಆಯೋಜಿಸಿದ್ದ 'ಅನ್ಯ ಭಾಷೆಯ ರೈಲ್ವೆ ನೌಕರರಿಗೆ ಕನ್ನಡ ಕಲಿಕಾ ಅಭಿಯಾನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಾಗತೀಕರಣದ ನಂತರ ರಾಜ್ಯದಲ್ಲಿ ಆಂತರಿಕ ವಲಸೆ ಹೆಚ್ಚಾಯಿತು. ನೀರು, ಗಾಳಿ, ಆಹಾರ, ಗುಣಮಟ್ಟದ ಪರಿಸರದಿಂದ ಕರ್ನಾಟಕಕ್ಕೆ ವಲಸಿಗರ ಸಂಖ್ಯೆ ಹೆಚ್ಚಾಯಿತು. ಕರ್ನಾಟಕ ಸಂಸ್ಕೃತಿ ಅನೇಕ ಸಂಸ್ಕೃತಿಗಳ ಮಿಶ್ರಣವಾಗಿದ್ದು, ಕರ್ನಾಟಕ ಒಂದು ರಾಜ್ಯವಾಗಿ ಈ ಎಲ್ಲವನ್ನು ಒಳಗೊಂಡೆ ಬೆಳೆಯಿತು. ಇಂತಹ ಸಂದರ್ಭದಲ್ಲಿ ನಮ್ಮ ಭಾಷೆಯನ್ನು ಉಳಿಸಿಕೊಳ್ಳುವ ಸಂಬಂಧ ನಾವೆಲ್ಲರೂ ಒಗ್ಗಟ್ಟಾಗಿ ನಿಲ್ಲಬೇಕಿದೆ. ವಲಸೆ ಚಾರಿತ್ರಿಕವಾದದ್ದು, ವಲಸಿಗರಿಗೆ ಕನ್ನಡವನ್ನು ಕಲಿಸಬೇಕು. ಇದು ಭಾಷಾಂಧತೆಯ ಪ್ರಶ್ನೆಯಲ್ಲ. ನಮ್ಮ ಭಾಷೆ ಅಸ್ತಿತ್ವದ ಉಳಿವಿಗಾಗಿ ನಾವು ಮಾಡಬೇಕಾದ ಕೆಲಸವಾಗಿದೆ. ನಮ್ಮ ಭಾಷೆಯ ಬೆಳವಣಿಗೆಗೆ ಶ್ರಮಿಸುವುದು ಮತ್ತು ಇತರೆ ಭಾಷೆಗಳನ್ನು ಗೌರವಿಸುವುದು ಪ್ರತಿಯೊಬ್ಬರ ಕೆಲಸವಾಗಿದೆ ಎಂದರು.

ಕನ್ನಡದ ಬೆಳವಣಿಗೆ ಕುಂಠಿತವಾಗಿ ಹೀಗೆ ಮುಂದುವರೆದರೆ 2000 ವರ್ಷಗಳ ಇತಿಹಾಸವಿರುವ ಕನ್ನಡ ನಿಧಾನವಾಗಿ ಕರಗಿಹೋಗುತ್ತದೆ. ಮುಂದಿನ 100 ವರ್ಷದಲ್ಲಿ ಕನ್ನಡ ಕೇವಲ ಮಾತಾಡುವ ಭಾಷೆಯಾಗಿ ಮಾತ್ರ ಉಳಿಯುತ್ತದೆ. ಬರವಣಿಗೆ ಭಾಷೆಯಾಗಿ ಉಳಿಯುವ ಸಾಧ್ಯತೆ ತೀರಾ ಕಡಿಮೆ ಎಂದು ಆತಂಕ ವ್ಯಕ್ತಪಡಿಸಿದರು.

6 ತಿಂಗಳಿಗಿಂತ ಹೆಚ್ಚಿನ ಅವಧಿಯಿಂದ ಕರ್ನಾಟಕದಲ್ಲಿ ನೆಲೆಸಿರುವ ಪ್ರತಿಯೊಬ್ಬ ವಲಸಿಗನು ಕಡ್ಡಾಯವಾಗಿ ಕನ್ನಡವನ್ನು ಕಲಿಯಬೇಕು. ಸ್ಥಳೀಯ ಭಾಷೆಯನ್ನು ಕಲಿಯುವ ಮೂಲಕ ಅಲ್ಲಿನ ಸಂಸ್ಕೃತಿ, ಪರಿಸರದ ಮೇಲೆ ಪ್ರೀತಿ ಬೆಳೆಯುತ್ತದೆ. ನಮ್ಮ ಭಾಷೆ ಉಳಿಯುತ್ತದೆ ಎಂದರು.

2011ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ 6.42 ಕೋಟಿ ಜನಸಂಖ್ಯೆಯಿದ್ದು, ಅದರಲ್ಲಿ, ಕನ್ನಡ ಮಾತೃಭಾಷೆ ಎಂದು ಅಂಗೀಕರಿಸಿದವರ ಸಂಖ್ಯೆ 4.37 ಕೋಟಿ. ಅಂದರೆ 2 ಕೋಟಿ ಜನ ಕನ್ನಡಿಗರಲ್ಲದವರಿದ್ದಾರೆ. ಹೀಗಾಗಿ ನಾವು ಕನ್ನಡ ಕಲಿಸುವ ವೇಳೆ ಕನ್ನಡವನ್ನು ದುರಭಿಮಾನದ ಸಂಕೇತವಾಗಿ ಬಳಸದೆ, ಸ್ವಾಭಿಮಾನದ ಸಂಕೇತವಾಗಿ ಗ್ರಹಿಸಿ, ಕನ್ನಡವನ್ನು ಹೇಳಿಕೊಡುವ ಕೆಲಸ ಆಗಬೇಕು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕನ್ನಡ ಪ್ರೀತಿ ಬಗ್ಗೆ ಯಾರೂ ಸಂಶಯ ಪಡಬೇಕಿಲ್ಲ. ಅವರು ಕನ್ನಡ ಪರ ನಿಲುವನ್ನು ಹೊಂದಿದ್ದಾರೆ. ಅವರ ಆಶಯದಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಾಜ್ಯಾದ್ಯಂತ ಸುಮಾರು 100 ಕ್ಕೂ ಹೆಚ್ಚು ಕನ್ನಡ ಕಲಿಕಾ ಕೇಂದ್ರಗಳನ್ನು ಸ್ಥಾಪಿಸಲು ಮುಂದಾಗಿದ್ದು, ಈವರೆಗೆ 26 ಕೇಂದ್ರಗಳಲ್ಲಿ ಕಲಿಕಾ ತರಬೇತಿ ಆರಂಭಿಸಲಾಗಿದೆ. ಜೊತೆಗೆ ಈಗಾಗಲೇ 160 ಮದರಸಾಗಳಲ್ಲಿ ಕನ್ನಡ ಕಲಿಸಲು ಕಾರ್ಯಾರಂಭ ಮಾಡಲಾಗಿದೆ. ಮುಂದಿನ 6 ತಿಂಗಳಲ್ಲಿ ವಕ್ಫ್ ಬೋರ್ಡ್ ಅಡಿಯಲ್ಲಿ ಬರುವ 2000 ಮದರಸಾಗಳಲ್ಲಿ ಕನ್ನಡ ಕಲಿಕಾ ಕೇಂದ್ರ ಆರಂಭವಾಗುತ್ತದೆ ಎಂದು ತಿಳಿಸಿದರು.

ಇಂದಿನ ದಿನಗಳಲ್ಲಿ ಕನ್ನಡ ಕಲಿಯುವಿಕೆ ವಿರಳವಾಗುತ್ತಿದ್ದು, ಸರ್ಕಾರಿ ಶಾಲೆಗಳು ಸೇರಿದಂತೆ ಕನ್ನಡ ಹೇಳಿಕೊಡುವ ವಿಧಾನ ಸರಳಗೊಳಿಸಬೇಕು. ಇಲ್ಲವಾದಲ್ಲಿ ಕನ್ನಡ ಕಲಿಯಲು ಮಕ್ಕಳು ಬರುವುದಿಲ್ಲ. ಇಂದಿನ ದಿನಗಳಲ್ಲಿ ಪೋಷಕರು ಪುಸ್ತಕಗಳ ತೂಕ ನೋಡಿ, ಭಾಷೆ ಆಯ್ದುಕೊಂಡು ಶಿಕ್ಷಣ ಕೊಡಿಸುವ ಮಟ್ಟಕ್ಕೆ ಬಂದಿದ್ದಾರೆ. ಕನ್ನಡ ಪಠ್ಯಗಳಲ್ಲಿ ಸಂಧಿ, ಸಮಾಸ ಸೇರಿದಂತೆ ಭಾಷೆ ಹೆಸರಿನಲ್ಲಿ ಸಾಹಿತ್ಯ ಬೋಧಿಸುತ್ತಿದೆ. ಸಾಹಿತ್ಯಕ್ಕೂ ಭಾಷಾ ಕಲಿಕೆಗೂ ತುಂಬಾ ಅಂತರವಿದೆ. ಕನ್ನಡ ವರ್ಣಮಾಲೆಯಲ್ಲಿನ ಮಹಾಪ್ರಾಣಗಳನ್ನು ನಾವೇ ಬಳಸದೆ ಇರುವಾಗ ಅದರ ಬಗ್ಗೆ ಒಂದನೇ, ಎರಡನೇ ತರಗತಿ ಮಕ್ಕಳ ಪಠ್ಯದಲ್ಲಿ ಹೇರಿಕೆ ಮಾಡುವುದು ಎಷ್ಟು ಸರಿ. ಇದನ್ನು ಪರಿಷ್ಕರಿಸಿ ಸರಳೀಕೃತಗೊಳಿಸುವ ಅವಶ್ಯಕತೆ ಇದೆ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ್ ಹಾನಗಲ್ಲ ಮಾತನಾಡಿ, ವಲಸಿಗರಿಗೆ ಕನ್ನಡ ಕಲಿಯುವ ಆಸಕ್ತಿಯನ್ನು ತುಂಬುವ ಕೆಲಸ ಕನ್ನಡಿಗರೇ ಮಾಡಬೇಕು. ಆದರೆ ನಾವು ಕನ್ನಡ ಕಲಿಸುವ ಕೆಲಸ ಮಾಡುತ್ತಿಲ್ಲ. ಇಂದಿನ ದಿನಗಳಲ್ಲಿ ಕನ್ನಡದ ಕಗ್ಗೊಲೆ ತೀರಾ ಕೆಳ ಹಂತದಲ್ಲಿಯೇ ನಡೆಯುತ್ತಿದೆ. ಅದನ್ನು ಪ್ರತಿಯೊಬ್ಬರು ಅರಿತು, ದೂರುವ ಬದಲು, ಅಲ್ಲೇ ತಿದ್ದುವ ಕೆಲಸ ಮಾಡಬೇಕು. ಕನ್ನಡದ ಉಳಿವಿಗೆ ಪ್ರತಿಯೊಬ್ಬರು ಕನ್ನಡದ ಬಳಕೆ ಮಾಡಬೇಕು ಎಂದು ಸಲಹೆ ನೀಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ನೈಋತ್ಯ ರೈಲ್ವೆ ನೌಕರರ ಕನ್ನಡ ಸಂಘದ ಅಧ್ಯಕ್ಷ ಬಸವಲಿಂಗಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್, ರೈಲ್ವೆ ಕಾರ್ಯಾಗಾರದ ಮುಖ್ಯ ವ್ಯವಸ್ಥಾಪಕ ವಿ.ಕೆ.ಚಡ್ಡಾ, ರೈಲ್ವೆ ಕಾರ್ಯಾಗಾರದ ಉಪಮುಖ್ಯ ಕಾರ್ಮಿಕ ಅಧಿಕಾರಿ ಎಂ.ಜಿ.ಮಾಯಾಗಣ್ಣ, ವಿದ್ಯುತ್ ಅಭಿಯಂತರ ಆರ್.ನಾಗರಾಜು, ಎಡಬ್ಲ್ಯೂಎಂ ಕೃಪೇಶ್, ಕನ್ನಡ ಹೋರಾಟಗಾರ ಅರವಿಂದ್ ಶರ್ಮಾ, ಶಿಕ್ಷಕ ಪುರುಷೋತ್ತಮ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಗುರುವಾರ 21 ಆಗಸ್ಟ್ 2025

ದೇವರಾಜ ಅರಸು ಸಮಾಜದ ದೀಪ



ಡಿ.ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪುಷ್ಪವೃಷ್ಟಿ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು

ಮಂಡ್ಯ, ಆ.20–ಅಲ್ಪಸಂಖ್ಯಾತರು, ಸಾಮಾಜಿಕವಾಗಿ ಹಿಂದುಳಿದ ಸಮುದಾಯದ ಜನರಿಗೆ ಬದುಕು ಕಟ್ಟಿ ಕೊಡಲು ಶ್ರಮಿಸಿದ ಮಹಾನ್ ನಾಯಕ ಡಿ.ದೇವರಾಜ ಅರಸು ಅವರು ಸಮಾಜದ ದೀಪ ಎಂದು ಜಿಲ್ಲಾಧಿಕಾರಿ ಡಾ ಕುಮಾರ ಹೇಳಿದ್ದಾರೆ.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಬುಧವಾರ ನಡೆದ ಡಿ.ದೇವರಾಜ ಅರಸು 110ನೇ ಜನ್ಮದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ನಾನು ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸಲು ಅವರು ನೀಡಿದ ಬಿಸಿಎಂ ಹಾಸ್ಟೆಲ್ ಕೊಡುಗೆ ಕಾರಣ. ವಿದ್ಯಾರ್ಥಿ ನಿಲಯ ಕೇವಲ ಕಲ್ಲಿನ ಗೋಡೆಯಲ್ಲ, ಜ್ಞಾನದ ದೇಗುಲ. ಎಷ್ಟೋ ಬಡ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಬಿ.ಸಿ.ಎಂ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪನೆ ಮಾಡಿದರು ಎಂದು ಸ್ಮರಿಸಿದರು

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್.ನಂದಿನಿ ಮಾತನಾಡಿ, ಬಡವರ ಪರವಾಗಿ ಧ್ವನಿ ಎತ್ತಿದ ವ್ಯಕ್ತಿಗಳನ್ನು ನಾವು ನೆನೆಯಬೇಕು, ಜನ್ಮದಿನಾಚರಣೆಗಳನ್ನು ಹೆಸರಿಗೆ ಮಾತ್ರ ಮಾಡುವಂತದ್ದಲ್ಲ. ಆ ವ್ಯಕ್ತಿಯ ಸಾಧನೆ, ವಿಚಾರ, ಚಿಂತನೆಯನ್ನು ಮುಂದಿನ ಪೀಳಿಗೆಗೆ ತಿಳಿಸುವ ದೃಷ್ಟಿಯಿಂದ ಮಾಡುವುದು. ವಿದ್ಯಾರ್ಥಿಗಳು ಸಾಧಕರ ಜೀವನ ಚರಿತ್ರೆಯನ್ನು ಕೇವಲ ಅಂಕ ಗಳಿಸಲು ತಿಳಿದುಕೊಳ್ಳಬೇಡಿ, ಅವರ ಸಾಧನೆಗಳನ್ನು ಸದಾ ಕಾಲ ನೆನಪಿಸಿಕೊಂಡು ಮುಂದಿನ ಪೀಳಿಗೆಗೆ ಅದನ್ನು ಪರಿಣಾಮಕಾರಿಯಾಗಿ ಪರಿಚಯಿಸಿ ಎಂದು ಸಲಹೆ ನೀಡಿದರು

ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಎಂಜಿಆರ್ ಅರಸು ಮಾತನಾಡಿ, ಜನಸಂಖ್ಯೆ ಹೆಚ್ಚಾದಾಗ ಬಹುಮಹಡಿ ಪರಿಕಲ್ಪನೆಯನ್ನು ತಂದವರು ಡಿ.ದೇವರಾಜ ಅರಸು ಅವರು ಎಂದು ಹೇಳಿದರು. ಬಿಸಿಎಂ ವಿದ್ಯಾರ್ಥಿ ನಿಲಯದಲ್ಲಿ ವ್ಯಾಸಂಗ ಮಾಡಿದ ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಜಿಲ್ಲೆಯಲ್ಲಿ ಶೇ 100 ರಷ್ಟು ಫಲಿತಾಂಶ ನೀಡಿದ ಬಿ.ಸಿ.ಎಂ ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರನ್ನು ಸನ್ಮಾನಿಸಿ ಗೌರವಿಸಲಾಯಿತು. ವಿದೇಶಿ ವಿದ್ಯ ವಿಕಾಸ್ ಯೋಜನೆಯಡಿ ಜಿಲ್ಲೆಯ ಧನರಾಜ್ ಬಿ.ಎಂ ಎಂಬ ವಿದ್ಯಾರ್ಥಿಗೆ ರೂ 10 ಲಕ್ಷದ ಚೆಕ್ ನೀಡಲಾಯಿತು.

ಆಹಾರ ಆಯೋಗದ ಅಧ್ಯಕ್ಷ ಡಾ.ಕೃಷ್ಣ, ನಗರಸಭೆ ಅಧ್ಯಕ್ಷ ನಾಗೇಶ್, ಅಪರ ಪೊಲೀಸ್ ವರಿಷ್ಠಾಧಿಕಾರಿ ಗಂಗಾಧರ್ ಸ್ವಾಮಿ, ನಗರಸಭೆ ಅಧ್ಯಕ್ಷ ಎಂವಿ ಪ್ರಕಾಶ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಮಂಜುಳ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಸಂದೇಶ್, ಅಪ್ಸುದ್ ಪಾಷಾ ಮತ್ತು ವಿವಿಧ ಸಮುದಾಯದ ಮುಖಂಡರು ಭಾಗವಹಿಸಿದ್ದರು.

ಮೆರವಣಿಗೆ: ಅರಸುರವರ ಭಾವಚಿತ್ರ ಇರಿಸಲಾಗಿದ್ದ ಬೆಳ್ಳಿ ರಥಕ್ಕೆ ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್ ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ನಗಾರಿ ಬಾರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಪೂರ್ಣಕುಂಭ ಹೊತ್ತ ಮಹಿಳೆಯರು, ಬೊಂಬೆ ಕುಣಿತ, ರಂಗ ಕುಣಿತ, ಡೊಳ್ಳು ಕುಣಿತ ಸೇರಿದಂತೆ ಇನ್ನಿತರ ಕಲಾ ತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ಕರಡಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ನಾಗಮಂಗಲ, ಆ.20– ನಾಗಮಂಗಲ 11 ಕೆ.ವಿ ಮಾರ್ಗದಿಂದ ಸರಬರಾಜಾಗುವ ಕರಡಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಾದ ಬಳಪದಮಂಟಿಕೊಪ್ಪಲು, ಬೀರೇಶ್ವರಪುರ, ಮುದ್ದೇಗೌಡನಕೊಪ್ಪಲು, ಹುಲ್ಲೇಕೆರೆ, ಹೊಸಕೊಪ್ಪಲು, ಗದ್ದೇಭೂವನಹಳ್ಳಿ, ಗುಂಡು ಕಲ್ಲುಹೊಸೂರು, ತಟ್ಟಹಳ್ಳಿ, ದಂಜಕ್ಕನಹಳ್ಳಿ, ಹರಳಕೆರೆ, ಕಲ್ಲಿನಾಥಪುರ ಮತ್ತು ದಂಡಿಗನಹಳ್ಳಿ ಗ್ರಾಮಗಳಿಗೆ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆ ವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲವೆಂದು ನಿಗಮದ ಪ್ರಕಟಣೆ ತಿಳಿಸಿದೆ.

ಆ.23, ವಿಕಲಚೇತನರ ಉದ್ಯೋಗ ಮೇಳ

ಮಂಡ್ಯಆ.20– ಬೆಂಗಳೂರು ಸಮರ್ಥನಂ ಅಂಗವಿಕಲರ ಸಂಸ್ಥೆ ವತಿಯಿಂದ ಆ.23ರ ಬೆಳಗ್ಗೆ 9.30 ಗಂಟೆಗೆ ಬೆಂಗಳೂರು ಜಯನಗರ್ 4ನೇ ಬ್ಲಾಕ್‌ನಲ್ಲಿರುವ ಬಿಇಎಸ್ ಪದವಿ ಕಾಲೇಜಿನಲ್ಲಿ ವಿಕಲಚೇತನರಿಗೆ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ 08232–239234/ 231090 ಅನ್ನು ಸಂಪರ್ಕಿಸಲು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಧರ್ಮಸ್ಥಳ ಬಗ್ಗೆ ಅವಹೇಳನ: ಕ್ರಮಕ್ಕೆ ಆಗ್ರಹಿಸಿ ಬಿಜೆಪಿ ಮನವಿ



ಬಿಜೆಪಿ ಕಾರ್ಯಕರ್ತರು ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎ.ಈ.ಗಂಗಾಧರಸ್ವಾಮಿಯವರಿಗೆ ಮನವಿ ಸಲ್ಲಿಸಿದರು.

ಮಂಡ್ಯ, ಆ.20–ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಗಿರೀಶ್ ಮಟ್ಟಣ್ಣನವರ್, ಮಹೇಶ್ ಶೆಟ್ಟಿ ತಿಮ್ಮರೂಡಿ, ಸಮೀರ್ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿ ಭಾರತೀಯ ಜನತಾ ಪಾರ್ಟಿ ಕಾರ್ಯಕರ್ತರು ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎ.ಈ.ಗಂಗಾಧರಸ್ವಾಮಿ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಧರ್ಮಸ್ಥಳದಲ್ಲಿ ನೂರಾರು ಮೃತದೇಹಗಳನ್ನು ಹೂಳಿದ್ದೇನೆ, ತನಿಖೆ ನಡೆಸಿ ಎನ್ನುವ ಅನಾಮಿಕ ವ್ಯಕ್ತಿ ಯಾವ ಆಧಾರದಲ್ಲಿ ಆರೋಪ ಮಾಡುತ್ತಿದ್ದಾನೆ ಎಂಬುದು ಸ್ಪಷ್ಟವಾಗಬೇಕು. ಆತನ ಹಿಂದಿರುವ ಕಾಣದ ಕೈಗಳ ಬಗ್ಗೆ ಕೂಲಂಕುಷ ತನಿಖೆಯಾಗಬೇಕು. ಜೊತೆಗೆ ಗಿರೀಶ್ ಮಟ್ಟಣ್ಣನವರ್, ಮಹೇಶ್ ತಿಮ್ಮರೂಡಿಯನ್ನು ಕೂಲಂಕುಷವಾಗಿ ತನಿಖೆ ನಡೆಸಬೇಕು. ಧರ್ಮಸ್ಥಳ ಕ್ಷೇತ್ರದ ಬಗ್ಗೆ ಎಡಪಂಥೀಯರ ಸಹಿತ ಸಾಮಾಜಿಕ ಜಾಲತಾಣಗಳಲ್ಲಿ ತೇಜೋವಧೆ ನಡೆಯುತ್ತಿದೆ. ಈ ರೀತಿ ಸುಳ್ಳು ವದಂತಿಗಳನ್ನು ಹಬ್ಬಿಸುತ್ತಿರುವ ಸಾಮಾಜಿಕ ಜಾಲತಾಣಗಳಿಗೆ ಕೂಡಲೇ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಬಿಜೆಪಿ ಜಿಲ್ಲಾ ವಕ್ತಾರ ಸಿ.ಟಿ.ಮಂಜುನಾಥ್, ಮುಖಂಡರಾದ ಹೊಸಹಳ್ಳಿ ಶಿವು, ಮಾದರಾಜ ಅರಸ್, ಆನಂದ್, ಚಂದ್ರು, ಗೊರವಾಲೆ ಶಿವಣ್ಣ, ನಾಗಣ್ಣ ಮಲ್ಲಪ್ಪ, ಆನಂದ್ ಭಾಗವಹಿಸಿದ್ದರು.

ಖಾಸಗಿ ಬಸ್ಸು ಎತ್ತಿನ ಗಾಡಿಗೆ ಡಿಕ್ಕಿ : ಎತ್ತು ಸಾವು



ಭಾರತೀನಗರ ಸಮೀಪದ ದೊಡ್ಡರಸಿನಕೆರೆ ಗೇಟ್ ಬಳಿ ಖಾಸಗಿ ಬಸ್ಸು ಎತ್ತಿನ ಗಾಡಿಗೆ ಡಿಕ್ಕಿ ಹೊಡೆದ ಪರಿಣಾಮ ಎತ್ತು ಸಾವನ್ನಪ್ಪಿದೆ.

ಭಾರತಿನಗರ, ಆ.20– ಚಾಲಕನ ನಿಯಂತ್ರಣ ತಪ್ಪಿದ ಖಾಸಗಿ ಬಸ್ಸು ಎತ್ತಿನ ಗಾಡಿಗೆ ಡಿಕ್ಕಿ ಹೊಡೆದ ಪರಿಣಾಮ ಎತ್ತು ಸಾವನ್ನಪ್ಪಿ, ಮತ್ತೊಂದು ಎತ್ತಿಗೆ ತೀವ್ರ ಗಾಯಗಳಾಗಿರುವ ಘಟನೆ ಸಮೀಪದ ದೊಡ್ಡರಸಿನಕೆರೆ ಗೇಟ್ ಬಳಿ ನಡೆದಿದೆ.

ದೊಡ್ಡರಸಿನಕೆರೆ ಗ್ರಾಮದ ಮಹದೇವು ಎಂಬವರಿಗೆ ಸೇರಿದ ಎತ್ತು ಸಾವನ್ನಪ್ಪಿದ್ದು, ಮತ್ತೊಂದು ಎತ್ತಿಗೆ ಗಾಯಗಳಾಗಿವೆ.

ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಗೆ ಕಬ್ಬು ಸಾಗಿಸಿ ಮದ್ದೂರು–ಮಳವಳ್ಳಿ ಹೆದ್ದಾರಿ ಮಾರ್ಗವಾಗಿ ತಮ್ಮ ಗ್ರಾಮಕ್ಕೆ ಹಿಂತಿರುಗುತ್ತಿದ್ದಾಗ ಮಳವಳ್ಳಿ ಕಡೆಯಿಂದ ಬಂದ ಖಾಸಗಿ ಬಸ್ಸು ಎತ್ತಿನ ಗಾಡಿಗೆ ಡಿಕ್ಕಿ ಹೊಡೆದಿದೆ.

ಡಿಕ್ಕಿ ಹೊಡೆದ ರಭಸಕ್ಕೆ ಎತ್ತು ಸಾವನ್ನಪ್ಪಿದ್ದು, ಎತ್ತಿನ ಗಾಡಿ ರಸ್ತೆ ಪಕ್ಕದ ಜಮೀನಿಗೆ ಉರುಳಿಬಿದ್ದಿದೆ. ಬಸ್ಸು ಬರುತ್ತಿದ್ದುದನ್ನು ಕಂಡ ಎತ್ತಿನ ಗಾಡಿ ಸವಾರ ಪಕ್ಕದ ಜಮೀನಿಗೆ ಜಿಗಿದು ಪ್ರಾಣ ಉಳಿಸಿಕೊಂಡಿದ್ದಾನೆ.

ಈ ಸಂಬಂಧ ಕೆ.ಎಂ. ದೊಡ್ಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಧರ್ಮಸ್ಥಳ ವಿರುದ್ಧ ಅಪಪ್ರಚಾರ ವಿರೋಧಿಸಿ

ಕೆ.ಆರ್.ಪೇಟೆಯಲ್ಲಿ ಕ್ಷೇತ್ರಾಭಿಮಾನಿಗಳ ವೇದಿಕೆ ಬೃಹತ್ ಪ್ರತಿಭಟನೆ



ತಾಲೂಕು ಶ್ರೀ ಧರ್ಮಸ್ಥಳ ಕ್ಷೇತ್ರಾಭಿಮಾನಿಗಳ ವೇದಿಕೆ ಪಟ್ಟಣದ ಪ್ರವಾಸಿ ಮಂದಿರ ವೃತ್ತದಿಂದ ತಾಲೂಕು ಕಚೇರಿಯವರೆಗೆ ಬೃಹತ್ ಪ್ರತಿಭಟನೆ ನಡೆಸಿತು.

ಕೆ.ಆರ್.ಪೇಟೆ, ಆ.20– ಧರ್ಮಸ್ಥಳ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಕಿಡಿಗೇಡಿಗಳನ್ನು ಬಂಧಿಸುವಂತೆ ಒತ್ತಾಯಿಸಿ ತಾಲೂಕು ಶ್ರೀ ಧರ್ಮಸ್ಥಳ ಕ್ಷೇತ್ರಾಭಿಮಾನಿಗಳ ವೇದಿಕೆ ಪಟ್ಟಣದಲ್ಲಿ ಬುಧವಾರ ಬೃಹತ್ ಪ್ರತಿಭಟನೆ ನಡೆಸಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಧರ್ಮಸ್ಥಳ ಶ್ರೀ ಮಂಜುನಾಥಸ್ವಾಮಿ ಫೋಟೋಗೆ ಪೂಜೆ ಸಲ್ಲಿಸಿ ತೆಂಡೇಕೆರೆ ಬಾಳೆಹೊನ್ನೂರು ಶಾಖಾ ಮಠದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಕಾಪನಹಳ್ಳಿ ಗವಿಮಠದ ಶ್ರೀ ಸ್ವತಂತ್ರ ಚೆನ್ನವೀರ ಸ್ವಾಮೀಜಿ, ಬೇಬಿ ಮಠದ ಶ್ರೀ ಶಿವಬಸವ ಸ್ವಾಮೀಜಿ ನೇತೃತ್ವದಲ್ಲಿ ಸಾವಿರಾರು ಮಂದಿ ಭಕ್ತಾದಿಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಶಾಸಕ ಹೆಚ್.ಟಿ.ಮಂಜು ಮಾತನಾಡಿ, ಶ್ರೀ ಧರ್ಮಸ್ಥಳ ಕ್ಷೇತ್ರಕ್ಕೆ ಕೆಟ್ಟ ಹೆಸರು ತರಲು ಹಿಂದೂ ವಿರೋಧಿ ಕಾಣದ ಕೈಗಳು ಪಿತೂರಿ ನಡೆಸುತ್ತಿವೆ. ಸರ್ಕಾರ ಕೂಡಲೇ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಎಂದು ಆಗ್ರಹಿಸಿದರು

ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿ, ಧರ್ಮಸ್ಥಳ ಶ್ರೀ ಕ್ಷೇತ್ರದಲ್ಲಿ ಅಂತಹ ಯಾವುದೇ ಕೆಟ್ಟ ಕೆಲಸಗಳು ನಡೆದಿಲ್ಲವಾಗಿಯೂ ಅಪ ಪ್ರಚಾರ ನಿಲ್ಲಿಸದಿದ್ದರೆ ಜನರೇ ದಂಗೆ ಏಳುವ ಕಾಲ ದೂರವಿಲ್ಲ ಎಂದು ಹೇಳಿದರು.

ತೆಂಡೇಕೆರೆ ಬಾಳೆಹೊನ್ನೂರು ಶಾಖಾ ಮಠದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಕ್ಷೇತ್ರದ ವಿರುದ್ಧ ಸುಳ್ಳು ಸುದ್ದಿ ಪ್ರಚಾರ ಮಾಡುತ್ತಿರುವ ಕಿಡಿಗೇ ಡಿಗಳು ಹಾಗೂ ಯೂಟ್ಯೂಬರ್‌ಗಳ ವಿರುದ್ಧ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಸರ್ಕಾರವನ್ನು ಆಗ್ರಹಿಸಿದರು. ಪ್ರತಿಭಟನೆಯ ನಂತರ ತಹಸೀಲ್ದಾರ್ ಎಸ್.ಯು. ಅಶೋಕ್ ಅವರಿಗೆ ಮನವಿ ಸಲ್ಲಿಸಲಾಯಿತು.

ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಆರ್‌ಟಿಓ ಮಲ್ಲಿಕಾರ್ಜುನ್, ಕೆ.ಶ್ರೀನಿವಾಸ್, ಅಕ್ಕಿಹೆಬ್ಬಾಳು ರಘು, ಜ್ಯೋತಿ ದೇವರಾಜು, ಮೊಟ್ಟೆ ಮಂಜು, ಕೆ.ಎಸ್. ರಾಜೇಶ್, ಕೆ. ಕಾಳೇಗೌಡ, ಕೆ.ಜಿ.ತಮ್ಮಣ್ಣ, ತೋಟಪ್ಪ ಶೆಟ್ಟಿ, ಸುಜೇಂದ್ರಕುಮಾರ್, ಎಸ್.ಎಲ್. ಮೋಹನ್, ಶಿವಪ್ಪ, ನಳಿನಿ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನಾಳೆ ಮದ್ದೂರು ಬಂದ್‌ಗೆ ಕರೆ

ಮದ್ದೂರು: ಶ್ರೀ ಕ್ಷೇತ್ರ ಧರ್ಮಸ್ಥಳದ ಪಾವಿತ್ರ್ಯತೆಯನ್ನು ಹಾಳು ಮಾಡುವ ದೃಷ್ಟಿಯಿಂದ ಪಟ್ಟಭದ್ರ ಹಿತಾಸಕ್ತಿಗಳಿಂದ ನಿರಂತರ ಅಪಪ್ರಚಾರ ನಡೆಯುತ್ತಿದ್ದು ಇದನ್ನು ವಿರೋಧಿಸಿ ಮದ್ದೂರಿನ ವಿವಿಧ ಸಂಘಟನೆಗಳು, ಧಾರ್ಮಿಕ ಚಿಂತಕರು ಆ. 21 ರ ಮಧ್ಯಾಹ್ನ 3 ಗಂಟೆಗೆ ಶಿವಪುರದ ಸತ್ಯಾಗ್ರಹ ಸೌಧದಿಂದ ಹೊರಟು ಟಿ.ಬಿ. ಸರ್ಕಲ್‌ವರೆಗೂ ಬೈಕ್ ರ್‍ಯಾಲಿ ಹಾಗೂ ಆಗಸ್ಟ್ 22 ರಂದು ಮದ್ದೂರು ಬಂದ್ ಕರೆಯಲಾಗಿದೆ.

ಆ.22 ರಂದು ಬೆಳಿಗ್ಗೆ 9 ಗಂಟೆಗೆ ಶ್ರೀ ನರಸಿಂಹಸ್ವಾಮಿ ದೇವಸ್ಥಾನದ ಆವರಣದಿಂದ ಪೇಟೆಬೀದಿ ಮೂಲಕ ತಾಲೂಕು ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಂಡಿದ್ದು ಸ್ವಯಂಪ್ರೇರಿತ ಬಂದ್‌ನ್ನು ಯಶಸ್ವಿಗೊಳಿಸಲು ಮದ್ದೂರಿನ ವರ್ತಕರು ಹಾಗೂ ಹೋಟೆಲ್ ಮಾಲೀಕರು, ನಾಗರಿಕರು, ಧರ್ಮಾಭಿಮಾನಿಗಳು ಧರ್ಮಸ್ಥಳ ಕ್ಷೇತ್ರದ ಪಾವಿತ್ರ್ಯತೆಯನ್ನು ಉಳಿಸಲು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಪುಣ್ಯ ಕ್ಷೇತ್ರ ಸಂರಕ್ಷಣಾ ಸಮಿತಿ ಮತ್ತು ಹಿಂದೂ ರಕ್ಷಣಾ ಸಮಿತಿ ಪದಾಧಿಕಾರಿಗಳು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಒಂದನೇ ಪುಟದಿಂದ

ದಲಿತರಿಗೆ ದಕ್ಕಬೇಕು...

ಎಂಟು ದಶಕಗಳು ಪೂರ್ಣಗೊಳ್ಳುತ್ತಿದ್ದು, ಇದುವರೆಗೆ ಒಬ್ಬ ದಲಿತ ನಾಯಕ ರಾಜ್ಯದ ಮುಖ್ಯಮಂತ್ರಿಯಾಗಿಲ್ಲ ಎಂಬುದು ಪ್ರತಿಪಾದನೆ ಯಾಗಿದೆ. 2023ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಸಿದ್ದರಾಮಯ್ಯ ಮುಖ್ಯಮಂತ್ರಿ ಯಾಗಿದ್ದು, ಅಧಿಕಾರ ಹಂಚಿಕೆ ಒಪ್ಪಂದದ ಪ್ರಕಾರ ಕೆಳಗಿಳಿಯಲಿದ್ದಾರೆ ಎಂಬ ಮಾತು ರಾಜ್ಯ ರಾಜಕೀಯ ವಲಯದಲ್ಲಿ ಇನ್ನೂ ಜೀವಂತವಾಗಿರುವುದೇ ದಲಿತ ಸಮಾವೇಶದ ಮೂಲ ಪ್ರೇರಣೆಯಾಗಿದೆ. ಕಳೆದ 2 ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ಕೇಳಿ ಬರುತ್ತಿರುವ ಅಧಿಕಾರ ಹಂಚಿಕೆ ಒಪ್ಪಂದ ಕುರಿತು ಸ್ವತಃ ಮುಖ್ಯಮಂತ್ರಿ ಸಿದ್ದ ರಾಮಯ್ಯ ಇತ್ತೀಚೆಗೆ ಬ್ರೇಕ್ ಹಾಕಿದ್ದರಾದರೂ, ಅಧಿಕಾರ ಹಂಚಿಕೆ ಮಾತು ಬೂದಿ ಮುಚ್ಚಿದ ಕೆಂಡದಂತೆ ಇದ್ದೇ ಇದೆ. ಸಮಾವೇಶದ ನಿರ್ಣಯಕ್ಕೆ ಸೋನಿಯಾಗಾಂಧಿ ಮತ್ತು ರಾಹುಲ್ ಗಾಂಧಿ ಒಪ್ಪಿಕೊಂಡರೆ, ಕಾಂಗ್ರೆಸ್ ಶಾಸಕಾಂಗ ಪಕ್ಷದಲ್ಲಿ ನಡೆಯುವ ನಾಯಕತ್ವ ಚುನಾವಣೆಯಲ್ಲಿ ದಲಿತ ನಾಯಕರೊಬ್ಬರು ಕಣಕ್ಕಿಳಿಯಲಿದ್ದಾರೆ. ಈ ಹಿಂದೆ ಬಿ.ರಾಚಯ್ಯ, ಮಲ್ಲಿಕಾರ್ಜುನ ಖರ್ಗೆ ಮತ್ತು ಡಾ.ಜಿ.ಪರಮೇಶ್ವರ್ ಮುಖ್ಯಮಂತ್ರಿ ಹುದ್ದೆಯ ಸನಿಹ ಬಂದಿದ್ದರೂ ಕೊನೇ ಕ್ಷಣದಲ್ಲಿ ವಂಚಿತರಾಗಿದ್ದರು.

ಆದರೆ, ಈ ಬಾರಿ ಸಿದ್ದರಾಮಯ್ಯ ಕೆಳಗಿಳಿಯುವುದು ನಿಶ್ಚಿತವಾದರೆ, ಅವರ ಜಾಗಕ್ಕೆ ದಲಿತ ನಾಯಕರೊಬ್ಬರು ಬರಬೇಕು. ಯಾವ ಕಾರಣಕ್ಕೂ ಅವಕಾಶ ತಪ್ಪಬಾರದು ಎಂಬ ಹಕ್ಕೊತ್ತಾಯದ ಐತಿಹಾಸಿಕ ದಲಿತ ಸಮಾವೇಶ ಇದಾಗಲಿದ್ದು, ರಾಜ್ಯ ರಾಜಕಾರಣದಲ್ಲಿ ಕುತೂಹಲಕಾರಿ ತಿರುವು ಪಡೆಯುವ ನಿರೀಕ್ಷೆಯಿದೆ.

ಪ್ರಕಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಮಾಡಿರುವುದನ್ನು ಸದನದ ಗಮನಕ್ಕೆ ತಂದರು. ಶಿಫಾರಸಿನಂತೆ ಎಡಗೈ ಸಂಬಂಧಿತ ಜಾತಿಗಳನ್ನು 'ಎ' ಪ್ರವರ್ಗಕ್ಕೆ ಶೇಕಡ 6, ಬಲಗೈ ಸಂಬಂಧಿತ ಜಾತಿಗಳ 'ಬಿ' ಪ್ರವರ್ಗಕ್ಕೆ ಶೇಕಡ 6 ಹಾಗೂ 'ಸಿ' ಪ್ರವರ್ಗಗಳಿಗೆ ಶೇಕಡ 5ರಷ್ಟು ಒಳ ಮೀಸಲಾತಿ ಕಲ್ಪಿಸಲು ತೀರ್ಮಾನಿಸಿದ್ದೇವೆ. ಪರಿಶಿಷ್ಟ ಜಾತಿಗಳಲ್ಲಿರುವ ಎಲ್ಲಾ 101 ಜಾತಿಗಳಿಗೆ ಶಿಕ್ಷಣ, ಉದ್ಯೋಗಾವಕಾಶ ಹಾಗೂ ಇನ್ನಿತರ ವಿಷಯಗಳಲ್ಲಿ ಅವಕಾಶಗಳನ್ನು ಒದಗಿಸುವಲ್ಲಿ, ಸಮಾನತೆ ಮತ್ತು ನ್ಯಾಯಸಮ್ಮತೆ ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಈ ಮಾರ್ಪಾಡುಗಳನ್ನು ಮಾಡಲಾಗಿದೆ. ಕಳೆದ 19ರಂದು ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಕುರಿತ ದಶಕಗಳ ಹೋರಾಟಕ್ಕೆ ನ್ಯಾಯ ಕಲ್ಪಿಸುವಲ್ಲಿ ಯಶಸ್ವಿಯಾಗಿದ್ದೇವೆ. ಅಭಿವೃದ್ಧಿಶೀಲ ರಾಜ್ಯ ಕರ್ನಾಟಕ ಸಾಮಾಜಿಕ ನ್ಯಾಯದ ವಿಚಾರದಲ್ಲೂ ಮುಂಚೂಣಿಯಲ್ಲಿದೆ ಎಂಬುದನ್ನು ನಮ್ಮ ಸರ್ಕಾರ ಸಾಬೀತು ಮಾಡಿದೆ ಎಂದರು.

ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸುವ ಕುರಿತಂತೆ ಸರ್ವೋಚ್ಚ ನ್ಯಾಯಾಲಯ ರಾಜ್ಯಗಳಿಗೆ ಅಧಿಕಾರ ನೀಡಿತ್ತು. ಪರಿಶಿಷ್ಟ ಜಾತಿಗಳ ಉಪವರ್ಗೀಕರಣ ಅಧಿಕಾರ ರಾಜ್ಯ ಸರ್ಕಾರಗಳಿಗೆ ಸಂವಿಧಾನ ದತ್ತವಾಗಿದೆ ಎಂದು ಸ್ಪಷ್ಟವಾಗಿ ಹೇಳಿದೆ, ಸಂವಿಧಾನ ಅನುಚ್ಛೇದ 14, 15 ಮತ್ತು 16ರಲ್ಲಿ ತಿಳಿಯಪಡಿಸಿರುವ ಸಮಾನತೆಯ ತತ್ವಕ್ಕೆ ಯಾವುದೇ ಚ್ಯುತಿ ಬಾರದಂತೆ, ಅದರ ಮೂಲ ಆಶಯ ಸದೃಢಗೊಳಿಸುವ ದೃಷ್ಟಿಯಿಂದ ಒಳ ಮೀಸಲಾತಿ ವ್ಯವಸ್ಥೆ ಕಲ್ಪಿಸಬಹುದು ಎಂದು ಅಭಿಪ್ರಾಯಪಟ್ಟಿದೆ. ನಮ್ಮ ಸರ್ಕಾರ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಏಕ ಸದಸ್ಯ ಆಯೋಗ ರಚಿಸಿತು. ಆಯೋಗ ರಾಜ್ಯದ 101 ಪರಿಶಿಷ್ಟ ಜಾತಿಗಳ ಸಮಗ್ರ ಅಧ್ಯಯನ ನಡೆಸಿ 01.08.2025ರಂದು ವರದಿ ಸಲ್ಲಿಸಿತು. ಆಯೋಗ ಪರಿಶಿಷ್ಟ ಜಾತಿಗಳಿಗೆ ಸೇರಿದ 1,05,09,871 ಜನರ ದತ್ತಾಂಶ ಸಂಗ್ರಹಿಸಿದೆ, ಶೇ.93ರಷ್ಟು ಪರಿಶಿಷ್ಟ ಜಾತಿಗಳ ಜನಸಂಖ್ಯೆ ಈ ಸಮೀಕ್ಷೆಗೆ ಲಭ್ಯವಾಗಿದೆ, ಸಚಿವ ಸಂಪುಟ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದೆ ಎಂದರು.

ಮಳೆಯಿಂದ ಬೆಳೆ ಹಾನಿಗೆ ಪರಿಹಾರ

ನಿಯಾಮಾವಳಿಗಳಂತೆ ಪರಿಹಾರ ನೀಡಲಾಗುವುದು. ಜೊತೆಗೆ ಬೆಳೆ ನಷ್ಟದಿಂದ ಕಷ್ಟದಲ್ಲಿರುವ ರೈತರಿಗೆ ವಿಮಾ ಹಣವನ್ನು ಸಕಾಲದಲ್ಲಿ ತಲುಪಿಸಲು ಸರ್ಕಾರ ಕ್ರಮ ಕೈಗೊಂಡಿದೆ. ಹೆಚ್ಚು ಹೆಚ್ಚು ರೈತರನ್ನು ವಿಮಾ ವ್ಯಾಪ್ತಿಗೆ ಒಳಪಡಿಸಲು ಕ್ರಮ ಕೈಗೊಂಡಿದ್ದೇವೆ. ಈ ಹಿಂದೆ ಬೆಳೆ ವಿಮೆಗೆ 16 ಲಕ್ಷ ರೈತರು ಮಾತ್ರ ನೋಂದಣಿ ಮಾಡಿಕೊಂಡಿದ್ದರು. ನಮ್ಮ ಸರ್ಕಾರ ಬಂದ ಮೇಲೆ ಬೆಳೆ ವಿಮೆಗೆ ನೋಂದಾಯಿಸಿರುವ ರೈತರ ಸಂಖ್ಯೆ 27 ಲಕ್ಷಕ್ಕೆ ಏರಿಕೆಯಾಗಿದೆ. ಬೆಳಗಾವಿ, ವಿಜಯಪುರ ಜಿಲ್ಲೆಯ ಕೆಲವೆಡೆ ಅತೀ ನೀರಾವರಿಯಿಂದ ಸವಳು–ಜವಳು ಇದ್ದು, ಇದನ್ನು ಸರಿಪಡಿಸಲು ಅಗತ್ಯ ಹಣ ಒದಗಿಸಲಾಗುವುದು. ಕಲಬುರಗಿ ಜಿಲ್ಲೆಯಲ್ಲಿ ಕಳೆದ ವರ್ಷ 660 ಕೋಟಿ ಬೆಳೆ ವಿಮೆ ರೈತರಿಗೆ ಸಿಕ್ಕಿದೆ. ಇದರಲ್ಲಿ ಅರ್ಧದಷ್ಟು ಹಣವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಉಳಿದ ಹಣವನ್ನು ಕ್ರಮ ವಹಿಸಲಾಗುವುದು ಎಂದರು.

ವಿರಾಜಪೇಟೆ ಕೆದಮಳ್ಳೂರು ಮಾಳೇಟಿರ ವಸಂತಿ...!!

ಮಾಳೇಟಿರ ವಿಜಯ್ ಸ್ಪಷ್ಟಪಡಿಸಿದ್ದಾರೆ. ಸುಜಾತ ಭಟ್ ಅವರು ಅನನ್ಯ ಭಟ್ ಅವರ ಫೋಟೋ ಎಂದು ಬಿಡುಗಡೆ ಮಾಡಿರುವ ಫೋಟೋದ ಸುತ್ತ ಈಗ ಅನುಮಾನಗಳ ಹುತ್ತ ಬೆಳೆಯುತ್ತಿದೆ.

ವಿರಾಜಪೇಟೆ ತಾಲೂಕಿನ ಕೆದಮಳ್ಳೂರು ಗ್ರಾಮದ ನಿವಾಸಿಯಾಗಿದ್ದ ಮಾಳೇಟಿರ ವಸಂತಿ, ಬೆಂಗಳೂರು ವಿದ್ಯಾರಣ್ಯಪುರಂ ನಿವಾಸಿ ಶ್ರೀವತ್ಸ ಪ್ರಸಾದ್ ಎಂಬುವರನ್ನು 2007ರ ಮೇ 27ರಂದು ಶೇಷಾದ್ರಿಪುರಂನ ಹಾಲ್ ಒಂದರಲ್ಲಿ ವಿವಾಹವಾಗಿದ್ದರು. ಸಹೋದರಿ ಸ್ವತಃ ಪ್ರೀತಿಸಿ ಮದುವೆಯಾಗಿದ್ದ ಹಿನ್ನೆಲೆಯಲ್ಲಿ ನಮ್ಮ ಕುಟುಂಬ ವಿರೋಧವನ್ನು ಮಾಡಿರಲಿಲ್ಲ. ಆದರೆ 2007ರಲ್ಲಿ ವಸಂತಿ ಕಾಣೆಯಾಗಿರುವ ಬಗ್ಗೆ ಬೆಂಗಳೂರಿನಲ್ಲಿ ದೂರು ನೀಡಲಾಗಿತ್ತು ಎಂದು ಮಾಳೇಟಿರ ವಿಜಯ್ ಹೇಳಿದ್ದಾರೆ.

ಆಕೆಯ ವಿವಾಹವಾದ ಕೆಲವು ದಿನಗಳ ಬಳಿಕ ಆಕೆಯ ಮೃತದೇಹ ಕೊಳೆತ ಸ್ಥಿತಿಯಲ್ಲಿ ಕೆದಮಳ್ಳೂರು ಗ್ರಾಮ ಕೊಟ್ಟೋಳಿ ನದಿಯಲ್ಲಿ ಪತ್ತೆಯಾಗಿತ್ತು. ವಿರಾಜಪೇಟೆ ಗ್ರಾಮಾಂತರ ಠಾಣೆಯಲ್ಲೂ ಈ ಕುರಿತು ಪ್ರಕರಣ ದಾಖಲಾಗಿತ್ತು ಎಂದು ಮಾಹಿತಿ ನೀಡಿದ್ದಾರೆ.

ಅನಾಥ ಶವದ ಗುರುತು ಪತ್ತೆ: 2007ರ ಆಗಸ್ಟ್ 24ರಂದು ಕೊಟ್ಟೋಳಿ ನದಿಯಲ್ಲಿ 30ರಿಂದ 35 ವರ್ಷದ ಮಹಿಳೆಯ ಮೃತದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಮೃತದೇಹದ ಮೇಲೆ ಬಿಳಿ ಮಿಶ್ರಿತ ಹಸಿರು ಬಣ್ಣದ ಚೂಡಿದಾರ್ ಮತ್ತು ನೀಲಿ ಬಣ್ಣದ ಪ್ಯಾಂಟ್, ಕುತ್ತಿಗೆಯಲ್ಲಿ ತಾಳಿ ಮಾದರಿಯ ಚಿನ್ನದ ಸರ, ಓಲೆ, ಕಾಲುಂಗುರ ಇದ್ದವು. ಇದು ಪೊಲೀಸ್ ಮಹಜರಿನಲ್ಲೂ ದಾಖಲಾಗಿದೆ. ಆ ದಿನ ತನ್ನ ಸಹೋದರಿ ಘಟನಾ ಸ್ಥಳಕ್ಕೆ ತೆರಳಿ ನೋಡಿದಾಗ ಚೂಡಿದಾರದಲ್ಲಿ ವಜ್ರ ಎಂಬ ಟೈಲರ್ ಅಂಗಡಿಯ ಹೆಸರು ಮತ್ತು ಮೃತದೇಹದ ಕೈಯಲ್ಲಿದ್ದ ಸುಟ್ಟ ಗಾಯದ ಗುರುತಿನ ಆಧಾರದಲ್ಲಿ ಮಹಿಳೆಯ ಮೃತದೇಹ ವಸಂತಿ ಎಂಬುವರದ್ದೇ ಎಂಬುದು ಖಾತರಿಯಾಗಿತ್ತು. ಸ್ಥಳೀಯ ಪಂಚಾಯಿತಿ ಕೂಡ ಮರಣ ಪ್ರಮಾಣ ಪತ್ರದಲ್ಲಿ ಎಂ.ಪಿ. ವಸಂತಿ ಎಂದು ನಮೂದಿಸಿ ಪ್ರಮಾಣ ಪತ್ರವನ್ನೂ ನೀಡಿತ್ತು ಎಂದು ದಾಖಲಾತಿಗಳ ಸಹಿತ ಮಾಳೇಟಿರ ವಿಜಯ್ ಮಾಹಿತಿ ನೀಡಿದ್ದಾರೆ.

ಫೋಟೊ ಕಂಡು ಕುಟುಂಬ ಕಣ್ಣೀರು: ಈಗ ಸುಜಾತಾ ಭಟ್ ಎಂಬುವರು ವಸಂತಿಯನ್ನೇ ತನ್ನ ಮಗಳು ಅನನ್ಯ ಭಟ್ ಎಂದು ಹೇಳುತ್ತಾ ಫೋಟೋ ಬಿಡುಗಡೆ ಮಾಡಿರುವುದು ನಮ್ಮ ಕುಟುಂಬಕ್ಕೆ ನೋವು ತರಿಸಿದೆ. ಸುಜಾತಾ ಭಟ್‌ಗೂ ವಸಂತಿಯ ಪತಿ ಶ್ರೀವತ್ಸ ಅವರಿಗೂ ಏನಾದರು ಸಂಬಂಧ ಇತ್ತೇ ಎನ್ನುವ ಬಗ್ಗೆ ತಮಗೆ ಮಾಹಿತಿ ಇಲ್ಲ ಎಂದು ಸ್ಪಷ್ಟಪಡಿಸಿದರು. ಆದರೆ 18 ವರ್ಷಗಳ ಹಿಂದೆ ಮೃತಪಟ್ಟ ವಸಂತಿಯ ಫೋಟೋವನ್ನು ಸುಜಾತಾ ಭಟ್ ದುರ್ಬಳಕೆ ಮಾಡಿಕೊಳ್ಳುತ್ತಿರಬಹುದೇ? ಯಾರದ್ದೋ ಫೋಟೋವನ್ನು ಇನ್ಯಾರೋ ದುರ್ಬಳಕೆ ಮಾಡಬಾರದು. ಈ ಬಗ್ಗೆ ತನಿಖೆಯಾಗಲಿ ಎಂದು ವಿಜಯ್ ಆಗ್ರಹಿಸಿದ್ದಾರೆ. ಸದ್ಯಕ್ಕೆ ಸುಜಾತ ಭಟ್, ಅನನ್ಯ ಭಟ್, ವಸಂತಿ ಶ್ರೀವತ್ಸ ಅವರ ಸುತ್ತ ಸಾರ್ವಜನಿಕ ವಲಯದಲ್ಲಿ ಅನುಮಾನಗಳು ಕಾಡುತ್ತಿದೆ. ಸಾರ್ವಜನಿಕ ವಲಯದಲ್ಲಿ ಮೂಡಿರುವ ಸಂಶಯಗಳಿಗೆ ತನಿಖಾ ಸಂಸ್ಥೆಗಳೇ ಇತಿಶ್ರೀ ಹಾಡಬೇಕಿದೆ.

ಅನಾಮಿಕನ ಹೇಳಿಕೆ ಬರೀ ಬುರುಡೆ...!

ನೂರಾರು ಶವಗಳನ್ನು ಹೂತಿದ್ದೇನೆ ಎನ್ನುವುದು ಸುಳ್ಳು. ಅಷ್ಟೊಂದು ಶವ ಹೂತಿದ್ದರೆ ಮೂಳೆಗಳಾದರೂ ಸಿಗಬೇಕಿತ್ತು. ಜೆಸಿಬಿ ತಂದರೂ ಮೂಳೆ ಸಿಕ್ಕಿಲ್ಲ. ಕೆಲಸ ಕೊಟ್ಟ ಯಜಮಾನರ ಮೇಲೆ ಸುಳ್ಳು ಆರೋಪ ಮಾಡುವುದು ಸರಿಯಲ್ಲ. ಇದು ಬಹಳ ತಪ್ಪು ಎಂದು ಹೇಳಿದರು.

ದೇವಸ್ಥಾನ, ನೇತ್ರಾವತಿ ಸ್ನಾನಘಟ್ಟ, ಬಾಹುಬಲಿ ಬೆಟ್ಟದಲ್ಲಿ ಕೆಲಸ ಮಾಡಿದ್ದೇನೆ. ಮೂರು ತಿಂಗಳಿಗೊಮ್ಮೆ ಕೆಲಸದ ಸ್ಥಳ ಬದಲಾವಣೆ ಆಗುತ್ತಿತ್ತು. ಮಾಹಿತಿ ಕಚೇರಿಯಿಂದ ಬರುತ್ತಿದ್ದ ಸೂಚನೆಯ ಮೇರೆಗೆ ಕೆಲಸ ಮಾಡುತ್ತಿದ್ದೆವು. ಮಕ್ಕಳು ನಾಪತ್ತೆಯಾಗಿದ್ದರೆ ಮೈಕ್‌ಮೂಲಕ ಮಾಹಿತಿ ಕಚೇರಿ ಮತ್ತು ನೇತ್ರಾವತಿ ಬಳಿ ಪ್ರಕಟಣೆಯಾಗುತ್ತಿತ್ತು. ಮಕ್ಕಳು ಸಿಕ್ಕಿದರೆ ಮಾಹಿತಿ ಕಚೇರಿಗೆ ಬಿಡುತ್ತಿದ್ದರು. ನಂತರ ಪೋಷಕರ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ಅವರಿಗೆ ಮಕ್ಕಳನ್ನು ಅವರಿಗೆ ಹಸ್ತಾಂತರ ಮಾಡಲಾಗುತ್ತಿತ್ತು ಎಂದು ಅವರು ಹೇಳಿದ್ದಾರೆ. ನಾನು ಕೆಲಸ ಮಾಡಿದ್ದ 4 ವರ್ಷಗಳ ಅವಧಿಯಲ್ಲಿ ನೇತ್ರಾವತಿ ಪುರುಷ ಮತ್ತು ಮಹಿಳೆಯ ಎರಡು ಶವ ಸಿಕ್ಕಿತ್ತು. ಸಿಕ್ಕಿದ ಶವಗಳನ್ನು ಹೂಳುತ್ತಿರಲಿಲ್ಲ. ಅಂಬುಲೆನ್ಸ್ ಬರುತ್ತಿತ್ತು. ವೈದ್ಯರು, ಪೊಲೀಸರು ಬರುತ್ತಿದ್ದರು. ನಂತರ ಆ ಮೃತದೇಹವನ್ನು ಬೆಳ್ತಂಗಡಿಗೆ ಕಳುಹಿಸಲಾಗುತ್ತಿತ್ತು.

ಒಟ್ಟು ನಾಲ್ಕು ಕುಟುಂಬಗಳು ಸ್ವಚ್ಛತಾ ಕೆಲಸ ಮಾಡುತ್ತಿದ್ದವು. ಮಾಹಿತಿ ಕಚೇರಿ ಬಿಟ್ಟರೆ ಬೇರೆ ಯಾರೂ ನಮಗೆ ಆ ಕೆಲಸ ಮಾಡು, ಈ ಕೆಲಸ ಮಾಡು ಎಂದು ಹೇಳುತ್ತಿರಲಿಲ್ಲ. ನಮ್ಮ ಜೊತೆ ಕೆಲಸ ಮಾಡುವಾಗ ಅನಾಮಿಕ ಚೆನ್ನಾಗಿಯೇ ಇದ್ದ. ನಾವು ಬರುವ ಮೊದಲೇ ಅವರ ಕುಟುಂಬ ಅಲ್ಲಿ ನೆಲೆಸಿತ್ತು. ನಾನು ಕೆಲಸ ಬಿಟ್ಟು ಬಂದ ನಂತರವೂ ಆತ ಅಲ್ಲಿ ಕೆಲಸ ಮಾಡುತ್ತಿದ್ದ. ಆತ ಶವದಿಂದ ಚಿನ್ನ ಕದಿಯುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ. ನಾನು ಕೆಲಸ ಬಿಟ್ಟು ಬಂದ ನಂತರ ಆತ ಯಾಕೆ ಕೆಲಸ ಬಿಟ್ಟ ಎಂಬುದು ಗೊತ್ತಿಲ್ಲ. ನನ್ನನ್ನು ಎಸ್‌ಐಟಿಯವರು ವಿಚಾರಿಸಿದರೆ, ಮುಂದೆ ಕೋರ್ಟ್‌ನಲ್ಲಿ ಕೇಳಿದರೂ ಇದನ್ನೇ ಹೇಳುತ್ತೇನೆ ಎಂದರು.

ಮತದಾರರಿಗೆ ಹಣ ಹಂಚಿಕೆ ಆರೋಪ: ಕಾಂಗ್ರೆಸ್ ನಾಯಕರ ವಿರುದ್ಧ ಆಯೋಗಕ್ಕೆ ದೇವರಾಜೇಗೌಡ ದೂರು

ನವದೆಹಲಿ: ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಹಾಸನದಲ್ಲಿ ಮತದಾರರಿಗೆ ಹಣ ಹಂಚಿಕೆ ಮಾಡಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ವಕೀಲ ದೇವರಾಜೇಗೌಡ ಅವರು ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್ ವಿರುದ್ಧ ಆಡಿಯೋ ಕ್ಲಿಪ್, ದಾಖಲೆಗಳ ಸಮೇತ ದೂರು ನೀಡಲಾಗಿದೆ. ಅಲ್ಲದೇ ಹಾಸನ ಸಂಸದ ಶ್ರೇಯಸ್ ಪಟೇಲ್ ವಿರುದ್ಧವೂ ಆಯೋಗಕ್ಕೆ ದೂರು ನೀಡಿದ್ದಾರೆ.

ದೂರು ನೀಡಿದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ದೇವರಾಜೇಗೌಡ, ಆಡಿಯೋ ಬೆನ್ನಲ್ಲೇ ನಾನು ಸಿಬಿಐಗೆ ದೂರು ನೀಡಿದ್ದೆ. ಚುನಾವಣಾ ಆಯೋಗಕ್ಕೆ ಸಿಬಿಐ ದೂರು ವರ್ಗಾಯಿಸಿದೆ. ಆಯೋಗಕ್ಕೆ ಮಾಹಿತಿ ನೀಡುವಂತೆ ನನಗೆ ಇ–ಮೇಲ್ ಬಂದಿತ್ತು. ಈ ಹಿನ್ನೆಲೆಯಲ್ಲಿ ನಾನು ಇಂದು ಖುದ್ದು ದೆಹಲಿಗೆ ಆಗಮಿಸಿ ದಾಖಲೆಗಳನ್ನು ನೀಡಿದ್ದೇನೆ. ಇದರಲ್ಲಿ ಸಿಎಂ, ಡಿಸಿಎಂ ಹೆಸರು ಉಲ್ಲೇಖವಾಗಿವೆ ಎಂದರು.

2024ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಹಾಸನ ಲೋಕಸಭಾ ಕ್ಷೇತ್ರದ ಕಾಂಗ್ರೆಸ್‌ನ ಅಭ್ಯರ್ಥಿಯಾಗಿದ್ದ ಸಂಸದ ಶ್ರೇಯಸ್ ಎಂ ಪಟೇಲ್ ಪರವಾಗಿ ಜಿಲ್ಲೆಯಲ್ಲಿ ಹಣ ಹಂಚಿಕೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ರಾಜ್ಯಸಭಾ ಸದಸ್ಯ ಎನ್.ಚಂದ್ರಶೇಖರ್ ಸಮ್ಮುಖದಲ್ಲಿ ತೀರ್ಮಾನಿಸಲಾಗಿದೆ ಎಂದು ಶಾಸಕ ಶಿವಲಿಂಗೇಗೌಡ ಅವರು ಫೋನಿನಲ್ಲಿ ಮಾತನಾಡಿದ್ದಾರೆ ಎನ್ನಲಾದ ಆಡಿಯೋ ವೈರಲ್ ಆಗಿತ್ತು.

ಪ್ರಧಾನಿ, ಸಿಎಂ, ಸಚಿವರ ವಜಾ

ರಾಜೀನಾಮೆ ನೀಡಿದ್ದೆ. ನಾನು ಎಲ್ಲಾ ಆರೋಪಗಳಿಂದ ಮುಕ್ತನಾಗುವವರೆಗೂ ಯಾವುದೇ ಸಾಂವಿಧಾನಿಕ ಹುದ್ದೆಯನ್ನು ಸ್ವೀಕರಿಸಲಿಲ್ಲ. ಇದು ನಮ್ಮ ಇತಿಹಾಸ ಎಂದು ಅಮಿತ್ ಶಾ ಅವರು ಕೆಸಿ ವೇಣುಗೋಪಾಲ್ ಅವರಿಗೆ ತಿರುಗೇಟು ನೀಡಿದರು.

ಪ್ರತಿಪಕ್ಷ ಸದಸ್ಯರು ನಮಗೆ ನೈತಿಕತೆಯ ಪಾಠ ಹೇಳಲು ಪ್ರಯತ್ನಿಸುತ್ತಿದ್ದಾರೆಯೇ? ಆರೋಪ ಹೊತ್ತರೂ ನಾಚಿಕೆಯಿಲ್ಲದೆ ಸಾಂವಿಧಾನಿಕ ಹುದ್ದೆಯಲ್ಲಿ ಮುಂದುವರಿಯುವ ಜಾಯಮಾನ ನಮ್ಮದಲ್ಲ. ನಾನು ಬಂಧನಕ್ಕೊಳಗಾಗುವ ಮುನ್ನವೇ ರಾಜೀನಾಮೆ ನೀಡಿದ್ದೆ ಎಂದು ಅಮಿತ್ ಶಾ ಇತಿಹಾಸವನ್ನು ನೆನಪಿಸಿದರು.

ತರಾತುರಿಯಲ್ಲಿ ಮಸೂದೆ ಮಂಡಿಸಲಾಗುತ್ತಿದೆ ಎಂಬ ಟೀಕೆಗಳನ್ನು ತಳ್ಳಿ ಹಾಕಿದ ಅಮಿತ್ ಶಾ, ಅವುಗಳನ್ನು ಸಂಸತ್ತಿನ ಜಂಟಿ ಸಮಿತಿಗೆ ಕಳುಹಿಸಲಾಗುವುದು. ಅಲ್ಲಿ ಪ್ರತಿಪಕ್ಷಗಳು ಸೇರಿದಂತೆ ಉಭಯ ಸದನಗಳ ಸದಸ್ಯರು ತಮ್ಮ ಸಲಹೆಗಳನ್ನು ನೀಡಲು ಅವಕಾಶವಿದೆ ಎಂದರು.

ಏನಿದು ಮಸೂದೆ?: ಗಂಭೀರ ಕ್ರಿಮಿನಲ್ ಆರೋಪಗಳ ಮೇಲೆ ಅಂದರೆ ಕನಿಷ್ಠ ಐದು ವರ್ಷಗಳ ಜೈಲು ಶಿಕ್ಷೆಗೆ ಅರ್ಹವಾದ ಅಪರಾಧಗಳಲ್ಲಿ ಬಂಧನಕ್ಕೊಳಗಾಗಿ ಸತತ 30 ದಿನಗಳ ಕಾಲ ನ್ಯಾಯಾಂಗ ಬಂಧನದಲ್ಲಿರುವ ಪ್ರಧಾನ ಮಂತ್ರಿ, ಮುಖ್ಯಮಂತ್ರಿಗಳು ಮತ್ತು ಸಚಿವರನ್ನು ಅವರ ಹುದ್ದೆಯಿಂದ ತೆಗೆದು ಹಾಕಲು ಕಾನೂನಾತ್ಮಕ ಚೌಕಟ್ಟನ್ನು ಈ ಮಸೂದೆ ಒದಗಿಸಲಿದೆ. ಸದ್ಯ ಇರುವ ಕಾನೂನು ಪ್ರಕಾರ ಓರ್ವ ಜನಪ್ರತಿನಿಧಿಯು ನ್ಯಾಯಾಲಯದಿಂದ ದೋಷಿ ಎಂದು ಸಾಬೀತಾದ ನಂತರವೇ ಅವರ ಹುದ್ದೆ ಹೋಗುತ್ತದೆ. ಆದರೆ, ಹೊಸ ಮಸೂದೆ ವಿಚಾರಣೆಯ ಹಂತದಲ್ಲೇ, ಕೇವಲ ಬಂಧನದ ಆಧಾರದ ಮೇಲೆ ಪದಚ್ಯುತಿಗೊಳಿಸಲು ಅವಕಾಶ ನೀಡುತ್ತದೆ. ಆದರೆ ಸುಮ್ಮನೇ ಬಂಧಿಸಿದರೆ ಸಾಕಾಗಲ್ಲ. ಅದು ಗಂಭೀರ ಅಪರಾಧ ಆಗಿರಬೇಕು. 30 ದಿನ ಜೈಲಲ್ಲಿರಬೇಕು. ಆಗ ಮಾತ್ರ ಅವರನ್ನು ಹುದ್ದೆಯಿಂದ ವಜಾಮಾಡಬಹುದಾಗಿದೆ. ಲೋಕಸಭೆಯಲ್ಲಿ ಮಂಡನೆಯಾಗುವ ಬಿಲ್‌ಗಳನ್ನು ಜಂಟಿ ಸಂಸದೀಯ ಸಮಿತಿಯ ಪರಿಶೀಲನೆಗೆ ಕಳುಹಿಸಲಾಗುತ್ತದೆ. ಅಲ್ಲಿ ಚರ್ಚೆಯಾದ ಬಳಿಕ ಮತ್ತೊಂದು ಬಾರಿ ಸಂಸತ್‌ನಲ್ಲಿ ಮಂಡನೆಯಾಗಿ, ಎರಡು ಸದನಗಳಲ್ಲಿ ಅಂಗೀಕಾರ ಸಿಕ್ಕು, ರಾಷ್ಟ್ರಪತಿಗಳ ಒಪ್ಪಿಗೆ ಬಳಿಕ ಇದು ಕಾನೂನಾಗಿ ಜಾರಿಗೆ ಬರಲಿದೆ ಈ ಹಿಂದೆ ವಕ್ಫ್ ತಿದ್ದುಪಡಿ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ ನೀಡಲಾಗಿತ್ತು. ಜೊತೆಗೆ ಒಂದು ರಾಷ್ಟ್ರ ಒಂದು ಚುನಾವಣೆ ಮಸೂದೆಯನ್ನು ಕೂಡ ಜಂಟಿ ಸಂಸದೀಯ ಸಮಿತಿಗೆ ನೀಡಲಾಗಿದೆ.

ಸಚಿವರ ವಿಷಯದಲ್ಲಿ ಕೇಂದ್ರ ಸಚಿವರಾಗಿದ್ದರೆ, ಪ್ರಧಾನ ಮಂತ್ರಿಯವರ ಸಲಹೆ ಮೇರೆಗೆ ರಾಷ್ಟ್ರಪತಿಗಳು ಅವರನ್ನು ಪದಚ್ಯುತಿಗೊಳಿಸುತ್ತಾರೆ. ಒಂದು ವೇಳೆ 30 ದಿನ ಕಳೆದರೂ ಪ್ರಧಾನ ಮಂತ್ರಿಯವರು ಸಲಹೆ ನೀಡದಿದ್ದರೆ, 31ನೇ ದಿನದಂದು ಆ ಸಚಿವರ ಹುದ್ದೆಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ.

ರಾಜ್ಯದಲ್ಲಿ ಸಿಎಂ ಸಲಹೆ ಮೇರೆಗೆ ರಾಜ್ಯಪಾಲರು ಅವರನ್ನು ಪದಚ್ಯುತಗೊಳಿಸುತ್ತಾರೆ. ಸಿಎಂ ಸಲಹೆ ನೀಡದಿದ್ದರೆ, 31ನೇ ದಿನ ಆಟೋಮ್ಯಾಟಿಕ್ ಆಗಿ ಅವರ ಪದವಿ ರದ್ದಾಗುತ್ತದೆ. ಪ್ರಧಾನ ಮಂತ್ರಿ ಅಥವಾ ಮುಖ್ಯಮಂತ್ರಿಗಳ ವಿಷಯದಲ್ಲಿ ಏನಾಗುತ್ತದೆ ಎಂಬುದನ್ನು ನೋಡಿದರೆ, ಪ್ರಧಾನ ಮಂತ್ರಿಯವರೇ ಸತತ 30 ದಿನಗಳ ಕಾಲ ಬಂಧನದಲ್ಲಿದ್ದರೆ, ಅವರು 31ನೇ ದಿನದೊಳಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಒಂದು ವೇಳೆ ರಾಜೀನಾಮೆ ನೀಡದಿದ್ದರೆ, 31ನೇ ದಿನದ ನಂತರ ಅವರ ಹುದ್ದೆಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ.

ಅದೇ ರೀತಿ, ರಾಜ್ಯದ ಮುಖ್ಯಮಂತ್ರಿಯೊಬ್ಬರು ಸತತ 30 ದಿನ ಜೈಲಿನಲ್ಲಿದ್ದರೆ, 31ನೇ ದಿನದೊಳಗೆ ರಾಜೀನಾಮೆ ನೀಡಲೇಬೇಕು. ಇಲ್ಲದಿದ್ದರೆ, ಅವರ ಪದವಿಯೂ ಸ್ವಯಂಚಾಲಿತವಾಗಿ ಕೊನೆಗೊಳ್ಳುತ್ತದೆ. ಆದರೆ, ಈ ಕಾಯ್ದೆಯ ಅಡಿಯಲ್ಲಿ ಪದಚ್ಯುತಗೊಂಡ ನಾಯಕರು, ನ್ಯಾಯಾಂಗ ಬಂಧನದಿಂದ ಬಿಡುಗಡೆಯಾದ ಬಳಿಕ ಮತ್ತೆ ಅದೇ ಸ್ಥಾನಕ್ಕೆ ಮರುನೇಮಕಗೊಳ್ಳಲು ಅವಕಾಶವಿದೆ. ಇದು ಸಾಂವಿಧಾನಿಕ ನಿಯಮಗಳಿಗೆ ಒಳಪಟ್ಟಿರುತ್ತದೆ.

ದರಿಯಾಗಂಜ್‌ನಲ್ಲಿ ಕಟ್ಟಡ ಕುಸಿದು ಮೂವರು ಸಾವು

ನವದೆಹಲಿ: ಕೇಂದ್ರ ದೆಹಲಿಯ ದರಿಯಾಗಂಜ್‌ನ ಸದ್ಭಾವನಾ ಪಾರ್ಕ್ ಬಳಿ ಬುಧವಾರ ಕಟ್ಟಡವೊಂದು ಕುಸಿದು ಬಿದ್ದಿದ್ದು, ಮೂವರು ಸಾವನ್ನಪ್ಪಿದ್ದಾರೆ. ಘಟನೆ ಬಗ್ಗೆ ಇಂದು ಮಧ್ಯಾಹ್ನ ಸಂಭವಿಸಿದ್ದು, ಮೂರು ಮಹಡಿಗಳ ಕಟ್ಟಡ ಕುಸಿದು ಬಿದ್ದಿದ್ದು, ಸ್ಥಳಕ್ಕೆ ನಾಲ್ಕು ಅಗ್ನಿಶಾಮಕ ದಳದ ವಾಹನಗಳನ್ನು ರವಾನಿಸಲಾಗಿದೆ ಎಂದು ದೆಹಲಿ ಅಗ್ನಿಶಾಮಕ ಸೇವೆಗಳ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅವಶೇಷಗಳಿಂದ ಮೂವರನ್ನು ರಕ್ಷಿಸಿದ್ದು, ಅವರನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ಅವರು ಹೇಳಿದ್ದಾರೆ. ಪ್ರಸ್ತುತ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ.

ಮೈಸೂರು ಮಿತ್ರ

ಅಕ್ರಮವಾಗಿ ಬಸ್‌ಗಳಿಗೆ ಸ್ಟಿಕ್ಕರ್ ಅಂಟಿಸಿದ ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಕ್ರಮಕ್ಕೆ ಆಗ್ರಹ

ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರಿಂದ ಸಾರಿಗೆ ಅಧಿಕಾರಿಗಳಿಗೆ ದೂರು



ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರಿಂದ ಸಾರಿಗೆ ಅಧಿಕಾರಿಗಳಿಗೆ ಬುಧವಾರ ದೂರು ಸಲ್ಲಿಸಲಾಯಿತು.

ಮೈಸೂರು,ಆ.20(ಎಂಕೆ)– ಮೈಸೂರು ಯುವ ಕಾಂಗ್ರೆಸ್ ಕಾರ್ಯಕರ್ತರು 'ಸ್ಟಾಪ್ ವೋಟ್ ಚೋರಿ' ಅಭಿಯಾನದ ಸ್ಟಿಕ್ಕರ್‌ಗಳನ್ನು ಅನುಮತಿ ಪಡೆಯದೆ ಸರ್ಕಾರಿ ಸಾರಿಗೆ ಬಸ್‌ಗಳಿಗೆ ಅಂಟಿಸುವ ಮೂಲಕ ಅಪಪ್ರಚಾರದ ಜೊತೆಗೆ ಸಂವಿಧಾನಕ್ಕೆ ಧಕ್ಕೆ ತಂದಿದ್ದಾರೆ. ಅವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಬಿಜೆಪಿ ನಗರ ಯುವ ಮೋರ್ಚಾ ಕಾರ್ಯಕರ್ತರು, ಕೆಎಸ್‌ಆರ್‌ಟಿಸಿ ಮೈಸೂರು ನಗರ ವಿಭಾಗೀಯ ನಿಯಂತ್ರಾಧಿಕಾರಿ ವೀರೇಶ್ ತ್ಯಾಪಿ ಅವರಿಗೆ ದೂರು ಸಲ್ಲಿಸಿದರು.

ರಾಜಕೀಯ ಪಕ್ಷವೊಂದು ಮತ್ತೊಂದು ರಾಜಕೀಯ ಪಕ್ಷದ ವಿರುದ್ಧ ಅಪಪ್ರಚಾರ ಮಾಡಲು ಸಾರಿಗೆ ಬಸ್‌ಗಳನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಅನುಮತಿ ಕೊಟ್ಟವರು ಯಾರು ಎಂದು ಪ್ರಶ್ನಿಸಿದ ಬಿಜೆಪಿ ನಗರ ಯುವ ಮೋರ್ಚಾ ಪದಾಧಿಕಾರಿಗಳು, ಸಾರಿಗೆ ಬಸ್‌ಗಳನ್ನು ದುರ್ಬಳಕೆ ಮಾಡಿಕೊಂಡವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಈ ವೇಳೆ ಬಿಜೆಪಿ ನಗರ ಯುವ ಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ ಮಾತನಾಡಿ, ಸರ್ಕಾರಿ ಬಸ್‌ಗಳು ಇರುವುದು ಸಾರ್ವಜನಿಕರ ಸೇವೆಗಾಗಿ ಮಾತ್ರ ಇಲಾಖೆ ಅಧಿಕಾರಿಗಳ ಅನುಮತಿ ಪಡೆಯದೆ ಜಾಹೀರಾತು ಪೋಸ್ಟರ್‌ಗಳನ್ನು ಅಂಟಿಸಿರುತ್ತಾರೆ. ಅದರ ಯಾವುದೇ ಅನುಮತಿಯನ್ನು ಪಡೆಯದೆ ಯುವ ಕಾಂಗ್ರೆಸ್ ಕಾರ್ಯಕರ್ತರು ಅಪಪ್ರಚಾರ ಮಾಡಿಕೊಂಡು ತಮ್ಮ ಪ್ರಚಾರದ ತೆವಲಿಗಾಗಿ ಸಾರಿಗೆ ಬಸ್‌ಗಳನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಇದಕ್ಕೆಲ್ಲಾ ಅನುಮತಿ ನೀಡಿದವರು ಯಾರು ಎಂದು ಪ್ರಶ್ನಿಸಿದರಲ್ಲದೆ ಪೋಸ್ಟರ್ ಅಂಟಿಸಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ತಮ್ಮ ಸರ್ಕಾರದ ಸಾಧನೆ ಶೂನ್ಯವಾಗಿದ್ದರೂ ಅಭಿವೃದ್ಧಿ ಪರವಾಗಿರುವ ಬಿಜೆಪಿ ವಿರುದ್ಧ ಅಪಪ್ರಚಾರ ಮಾಡುತ್ತಿರುವುದು ಖಂಡನೀಯ. ಹೀಗೇ ಅವರ ವರ್ತನೆ ಮುಂದುವರೆದರೆ ಉಗ್ರ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಉಪಾಧ್ಯಕ್ಷರಾದ ರುದ್ರಮೂರ್ತಿ, ಟಿ.ರಮೇಶ್, ಬಿಜೆಪಿ ನಗರ ಯುವ ಮೋರ್ಚಾ ನಿಕಟಪೂರ್ವ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಪ್ರಧಾನ ಕಾರ್ಯದರ್ಶಿಗಳಾದ ಡಿ.ಲೋಹಿತ್, ಆರ್.ಸಚಿನ್, ಚಾಮರಾಜ ಅಧ್ಯಕ್ಷ ದಿನೇಶ್‌ಗೌಡ, ಚಾಮುಂಡೇಶ್ವರಿ ನಗರ ಮಂಡಲ ಅಧ್ಯಕ್ಷ ರಾಕೇಶ್ ಭಟ್, ಕಾರ್ಯಕರ್ತರಾದ ನಿಶಾಂತ್, ನವೀನ್, ಉಮೇಶ್, ರವಿ, ಕೀರ್ತಿ, ಕಿರಣ್ ಮತ್ತಿತರರಿದ್ದರು.

ಮೈಸೂರು ವಿವಿಯಲ್ಲಿ ಡಿ.ದೇವರಾಜ ಅರಸು ಅಧ್ಯಯನ ಪೀಠ ಕಡೆಗಣನೆ ವಿರುದ್ಧ ಪ್ರತಿಭಟನೆ



ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಿ.ದೇವರಾಜ ಅರಸು ಅವರ ಅಧ್ಯಯನ ಪೀಠವನ್ನು ಕಡೆಗಣಿಸುತ್ತಿರುವುದನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಹಳೇ ಡಿಸಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಆ.20(ಜಿಎ)–ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಿ.ದೇವರಾಜ ಅರಸು ಅವರ ಅಧ್ಯಯನ ಪೀಠವನ್ನು ಕಡೆಗಣಿಸುತ್ತಿರುವುದನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಹಳೇ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಸರ್ಕಾರದಿಂದ ಹತ್ತು ವರ್ಷಗಳ ಹಿಂದೆ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅಧ್ಯಯನ ಪೀಠ ಸ್ಥಾಪಿಸಲಾಯಿತು. ಇದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಅವರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಈ ಪೀಠ ನೀಡುತ್ತದೆ. ವಿಪರ್ಯಾಸವೆಂದರೆ ಈಗಿನ ಕುಲಪತಿಗಳಿಗೆ ಅರಸು ಅವರ ಪೀಠದ ಬಗ್ಗೆ ಅರಿವಿಲ್ಲ. ಹಿಂದುಳಿದ ವರ್ಗದವರು ಮತ್ತು ದೀನ ದಲಿತರ ಆಶ್ರಯದಾತ ಎಂದೇ ಪ್ರಖ್ಯಾತರಾಗಿದ್ದ ಅರಸು ಅವರನ್ನು ಮೈಸೂರು ವಿಶ್ವವಿದ್ಯಾನಿಲಯ ಮರೆತಿದೆ ಎಂದರೆ ಅರಸು ಅವರ 110ನೇ ಜಯಂತಿಯಲ್ಲಿ ಅವರ ಬಗ್ಗೆ ಯಾವ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನೀಡುತ್ತಾರೆ ಎಂಬುದೇ ಸಂಶಯವಾಗಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ನಾಡಿನ ಸಾಧಕರಿಗೆ ಅವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಮಾಡುತ್ತಾರೆ. ಆ ಗಣ್ಯ ವ್ಯಕ್ತಿಗಳ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಅವರ ಸಾಧನೆಯನ್ನು ಈ ಪೀಠದಲ್ಲಿ ಒದಗಿಸಲಾಗುತ್ತದೆ. ಅವರ ಜಯಂತಿ ಸಂದರ್ಭದಲ್ಲಿ ಅವರು ಮಾಡಿದಂತ ಕಾರ್ಯಗಳ ಜನಸೇವೆಯ ಮಾಹಿತಿ ಇರುತ್ತದೆ. ಅದರಂತೆ ಡಿ.ದೇವರಾಜು ಅರಸು ಅವರು ನಡೆದು ಬಂದಂತಹ ಹಾದಿ ಮತ್ತು 10 ವರ್ಷಗಳ ಕಾಲ ಮುಖ್ಯಮಂತ್ರಿ ಆಗಿದ್ದಾಗ ಅವರು ಉಳುವವನಿಗೆ ಭೂಮಿ, ದಲಿತರು ಮತ್ತು ಹಿಂದುಳಿದ ವರ್ಗದವರಿಗೆ ವಿದ್ಯಾಭ್ಯಾಸ ಮತ್ತು ಸರ್ಕಾರದ ಕೆಲಸಗಳಲ್ಲಿ ಮೀಸಲಾತಿಯನ್ನು ನೀಡಿದ್ದರು. ಜೀತ ಪದ್ಧತಿಯನ್ನು ತೆಗೆದು ಹಾಕಿದರು. ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ನಾಮಕರಣ ಸೇರಿದಂತೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ.

ಕೂಡಲೇ ಕುಲಪತಿಗಳು 110ನೇ ವರ್ಷದ ದೇವರಾಜ ಅರಸು ಅವರ ಜಯಂತಿ ಆಚರಿಸಿ, ಪೀಠಕ್ಕೆ ಪ್ರತ್ಯೇಕವಾಗಿ ಯೋಜನಾಧಿಕಾರಿ ನೇಮಕ ಮಾಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಗೋಪಿ, ಪ್ಯಾಲೇಸ್ ಬಾಬು, ಸಿದ್ದಪ್ಪ ಎಲ್‌ಐಸಿ, ಸ್ವಾಮಿ, ಗೋವಿಂದ ರಾಜು, ಮಾದಪ್ಪ, ಬೀಡಬಾಬು, ಪ್ರೇಮ, ಹರೀಶ್, ಚಿನ್ನಪ್ಪ, ಶಿವಗೌಡ, ರಮೇಶ್ ಮತ್ತಿತರರಿದ್ದರು.

ಸೌಜನ್ಯ ಅತ್ಯಾಚಾರ, ಹತ್ಯೆ ಪ್ರಕರಣ

ನ್ಯಾಯಕ್ಕೆ ಆಗ್ರಹಿಸಿ ನಾಳೆ ಭಾರತ ಭೀಮ್ ಸೇನೆಯಿಂದ ಮೈಸೂರಲ್ಲಿ ಪಾದಯಾತ್ರೆ



ಪುರುಷೋತ್ತಮ್

ಮೈಸೂರು, ಆ.20(ಜಿಎ)–ಸೌಜನ್ಯ ಮೇಲಿನ ಅತ್ಯಾಚಾರ ಹಾಗೂ ಹತ್ಯೆ ಪ್ರಕರಣಕ್ಕೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ಆ.22ರಂದು ಭಾರತ ಭೀಮ್ ಸೇನೆ ವತಿಯಿಂದ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಟೌನ್ ಹಾಲ್‌ನಿಂದ ಡಿಸಿ ಕಚೇರಿವರೆಗೆ ಪಾದಯಾತ್ರೆ ನಡೆಯಲಿದ್ದು, ಪಾದಯಾತ್ರೆಯಲ್ಲಿ ಉರಿಲಿಂಗಿ ಪೆದ್ದಿ ಮಠದ ಪೀಠಾಧಿಪತಿ ಜ್ಞಾನಪ್ರಕಾಶ್ ಸ್ವಾಮೀಜಿ, ನಟ ಅಹಿಂಸಾ ಚೇತನ್ ಪಾಲ್ಗೊಳ್ಳಲಿದ್ದಾರೆ.

ಹತ್ಯೆ ನಡೆದು 13 ವರ್ಷವಾಗಿದ್ದು, ತನಿಖೆಗಳು ನಡೆದರೂ ಸತ್ಯಾಂಶ ಹೊರಬಂದಿಲ್ಲ. ಹೀಗಾಗಿ ರಾಜ್ಯದಲ್ಲಿ ಮಾತ್ರವಲ್ಲ ದೇಶದಾದ್ಯಂತ ಸೌಜನ್ಯ ಕುಟುಂಬದ ಪರ ಧ್ವನಿ ಕೇಳಿ ಬಂದಿತ್ತು. ಆದರೂ ತಪ್ಪಿತಸ್ಥರಿಗೆ ಶಿಕ್ಷೆ ಆಗಿಲ್ಲ. ಹೀಗಾಗಿ ನ್ಯಾಯಕ್ಕೆ ಆಗ್ರಹಿಸಿ ಈ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಇದೇ ರೀತಿ ರಾಜ್ಯದ ಇತರೆಡೆಯೂ ಪ್ರತಿಭಟನೆ ಹಮ್ಮಿಕೊಳ್ಳುತ್ತಿದ್ದು, ಅಂತಿಮವಾಗಿ ಎಲ್ಲಾ ಜಿಲ್ಲೆಯವರೂ ಸೇರಿ ಧರ್ಮಸ್ಥಳಕ್ಕೆ ನ್ಯಾಯಕ್ಕಾಗಿ ಆಗ್ರಹಿಸಿ ಪ್ರತಿಭಟನಾ ಮೆರವಣಿಗೆ ಹೊರಡಲಾಗುವುದು ಎಂದು ತಿಳಿಸಿದರು.

ವ್ಯಕ್ತಿಯೊಬ್ಬ ತಾನು ಬಹಳಷ್ಟು ಶವ ಹೂತಿರುವುದಾಗಿ ತಿಳಿಸಿದ ಕಾರಣ ಎಸ್‌ಐಟಿ ತನಿಖೆ ನಡೆಯುತ್ತಿದೆ. ಆದರೆ ಎಸ್‌ಐಟಿಯನ್ನೇ ದುರ್ಬಲಗೊಳಿಸುತ್ತಿದ್ದಾರೇನೋ ಎಂಬ ಶಂಕೆ ಕಾಡಿದೆ. ಧರ್ಮಸ್ಥಳದ ಬಗ್ಗೆ ತಮಗೆಲ್ಲ ಗೌರವವಿದೆ. ಆದರೆ ಆರೋಪಗಳಿಂದ ಅದು ಹೊರಬರಬೇಕಾದ ಅಗತ್ಯವಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯಾಧ್ಯಕ್ಷ ದಿನೇಶ್, ಮಹದೇವಮ್ಮ, ಯಶ್ವಂತ್, ನಾಗೇಶ್, ಬಸವಣ್ಣ, ರವಿಕುಮಾರ್, ಮಹೇಶ್ ಉಪಸ್ಥಿತರಿದ್ದರು.

ಡಿ.ದೇವರಾಜ ಅರಸು ಜಯಂತಿ ಆಚರಣೆ



ಕರ್ನಾಟಕ ಹಿತರಕ್ಷಣಾ ವೇದಿಕೆ ಕಾರ್ಯಕರ್ತರು ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ ಜಯಂತಿ ಅಂಗವಾಗಿ ಸಿಹಿ ಹಂಚಿ, ಸಂಭ್ರಮಿಸಿದರು. ಈ ವೇಳೆ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಇಂದಿರಾ ಗಾಂಧಿ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್, ರಾಘವೇಂದ್ರ, ರವಿಚಂದ್ರ, ಎಸ್.ಎನ್.ರಾಜೇಶ, ನಜರ್‌ಬಾದ್ ಲೋಕೇಶ್, ದಿನೇಶ್, ಹರೀಶ್‌ಗೌಡ, ನಿತಿನ,ಮೋಹನ್, ಕೃಷ್ಣಪ್ಪ ಗಂಟಯ್ಯ, ಈಶ್ವರ್, ಕಣ್ಣಣ್ಣ, ಮಹಾನ್ ಶ್ರೇಯಸ್ ಇನ್ನಿತರರು ಉಪಸ್ಥಿತರಿದ್ದರು.

ಆ.23, ಯೋಗಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಶ್ರಾವಣ ಶನಿವಾರ, ಅಮಾವಾಸ್ಯೆ ವಿಶೇಷ ಪೂಜೆ

ಮೈಸೂರು,ಆ.20–ಮೈಸೂರಿನ ವಿಜಯನಗರದಲ್ಲಿರುವ ಶ್ರೀಯೋಗಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಆ.23ರಂದು 5ನೇ ಶ್ರಾವಣ ಶನಿವಾರ ಮತ್ತು ಅಮಾವಾಸ್ಯೆ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸ್ ತಿಳಿಸಿದ್ದಾರೆ. ಅಂದು ಬೆಳಗ್ಗೆ 10 ಗಂಟೆಗೆ ಪ್ರಸಾದ ವಿನಿಯೋಗ ಮಾಡಲಾಗುವುದು ಎಂದು ತಿಳಿಸಿರುವ ಅವರು ಹೆಚ್ಚಿನ ಮಾಹಿತಿಗಾಗಿ ಮೊ: 9900400000 ಮೂಲಕ ಸಂಪರ್ಕಿಸಲು ಕೋರಿದ್ದಾರೆ.

ಆ.31, ಮೈಸೂರಲ್ಲಿ ಗರ್ಭಾವಸ್ಥೆ ಯೋಗ, ಪ್ರಸವ ತಂತ್ರಗಳ ಕುರಿತು ಉಚಿತ ಕಾರ್ಯಾಗಾರ

ಮೈಸೂರು, ಆ.20(ಜಿಎ)–ಮೈಸೂರಿನ ರಾಮಕೃಷ್ಣನಗರದ ಇ ಅಂಡ್ ಎಫ್ ಬ್ಲಾಕ್‌ನಲ್ಲಿರುವ ಪರಮಹಂಸ ಯೋಗ ಮಹಾವಿದ್ಯಾಲಯ ಇಂಟರ್‌ನ್ಯಾಷನಲ್ ಯೋಗ ಶಾಲೆಯಲ್ಲಿ ಶ್ರೀಗರ್ಭ ಸಂಸ್ಥೆ ಸಹಕಾರದಲ್ಲಿ ಆ.31ರಂದು ಸಂಜೆ 4 ಗಂಟೆಗೆ ಸನಾತನ ವಿದ್ಯಾಗರ್ಭ ಸಂಸ್ಕಾರ, ಗರ್ಭಾವಸ್ಥೆಯ ಯೋಗ ಮತ್ತು ಪ್ರಸವ ತಂತ್ರಗಳ ಕುರಿತ ಉಚಿತ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಕಾರ್ಯಕ್ರಮ ನಿರ್ದೇಶಕಿ ಎಸ್.ಕಾವ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗರ್ಭದಲ್ಲಿಯೇ ಶಿಶುವಿನ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ವೇದಾಧಾರಿತ ಪುರಾತನ ಕ್ರಮಗಳನ್ನು ತಿಳಿಸಲಾಗುವುದು. ಪೋಷಕರಾಗಲು ಬಯಸುವವರು, ಗರ್ಭಿಣಿಯರು, ಆಸಕ್ತರು ಭಾಗವಹಿಸಬಹುದು. ದೀರ್ಘ ಅವಧಿಯ ಕೋರ್ಸ್ ಕೂಡ ಲಭ್ಯವಿದೆ. ಆ.28ರೊಳಗೆ ನೋಂದಣಿ ಮಾಡಿಕೊಳ್ಳಬೇಕು. ಮಾಹಿತಿಗೆ 83106 34618 ಸಂಪರ್ಕಿಸಬಹುದು ಎಂದರು. ಗೋಷ್ಠಿಯಲ್ಲಿ ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಕೆ.ಜಿ.ದೇವರಾಜು, ಮಹಾ ವಿದ್ಯಾಲಯದ ಭಾವನ, ಬಿ.ಜಿ.ವಿಜಯಕುಮಾರ್, ಮನು, ಮೈಸೂರು ಯೋಗೀಸ್ ಸಂಸ್ಥೆಯ ಸಮಾ ಭಟ್ ಉಪಸ್ಥಿತರಿದ್ದರು.

ಇಂದು ಎಸ್‌ಪಿಬಿ ಗಾನ ರಸಾಯನ–4 ಕಾರ್ಯಕ್ರಮ

ಮೈಸೂರು,ಆ.20(ಜಿಎ)–ಗಾನ ಚಂದನ ಕಲಾಬಳಗದಿಂದ ನಾದಬ್ರಹ್ಮ ಸಂಗೀತ ಸಭಾದಲ್ಲಿ ಆ.21ರಂದು ಸಂಜೆ 5ಗಂಟೆಗೆ ಎಸ್‌ಪಿಬಿ ಗಾನ ರಸಾಯನ–4 ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಯೋಜಕ ಆರ್.ಸುಧೀಂದ್ರ ಈ ವಿಷಯ ತಿಳಿಸಿ, ಬಳಗದ 10 ಗಾಯಕರು ಎಸ್.ಪಿ.ಬಾಲಸುಬ್ರಮಣ್ಯಂ ಅವರು ಹಾಡಿರುವ ಕನ್ನಡ, ತಮಿಳು, ತೆಲುಗು, ಹಿಂದಿ ಭಾಷೆಗಳ ಸುಮಾರು 40 ಗೀತೆಗಳನ್ನು ಪ್ರಸ್ತುತಪಡಿಸುವರು. ಪ್ರವೇಶ ಉಚಿತವಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು. ಗೋಷ್ಠಿಯಲ್ಲಿ ಆಯೋಜಕರಾದ ವಿಶ್ವನಾಥಶಾಸ್ತ್ರಿ, ಶಶಿಕಲಾ, ಗೋಪಾಲಕೃಷ್ಣ, ಅಶ್ವಿನಿ ಪ್ರಶಾಂತ್ ಇದ್ದರು.

ವಿಕಲಚೇತನ ಸರ್ಕಾರಿ ನೌಕರರ ಕನಿಷ್ಠ ವೇತನ ವ್ಯಾಪ್ತಿಗೆ ತರಲು ಸರ್ಕಾರದ ಗಮನ ಸೆಳೆದ ಶಾಸಕ ಟಿ.ಎಸ್.ಶ್ರೀವತ್ಸ



ಮೈಸೂರು, ಆ.20(ಜಿಎ)–ವಿಕಲಚೇತನ ಸರ್ಕಾರಿ ನೌಕರರಿಗೆ ಕನಿಷ್ಠ ವೇತನ ವ್ಯಾಪ್ತಿಗೆ ಒಳಪಡಿಸುವಂತೆ ಶಾಸಕ ಟಿ.ಎಸ್.ಶ್ರೀವತ್ಸ ಮನವಿ ಮಾಡುವ ಮೂಲಕ ಸರ್ಕಾರದ ಗಮನ ಸೆಳೆದರು.

ರಾಜ್ಯ ವಿಕಲಚೇತನ ಸರ್ಕಾರಿ ನೌಕರರು ಇತ್ತೀಚೆಗೆ ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿರುವ ವಿಚಾರವನ್ನು ಅಧಿವೇಶನದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಉಲ್ಲೇಖಿಸಿದರು. ಇದಕ್ಕೆ ಉತ್ತರ ನೀಡಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, 2025ರ ಜೂನ್ 3ರ ಸರ್ಕಾರದ ಆದೇಶದನ್ವಯ ಗ್ರಾಮೀಣ ಹಾಗೂ ನಗರ ಪುನರ್ವಸತಿ ಕಾರ್ಯಕರ್ತರ ಮಾಸಿಕ ಗೌರವಧನವನ್ನು 9 ಸಾವಿರದಿಂದ 10 ಸಾವಿರಕ್ಕೆ ಹಾಗೂ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರ ಮಾಸಿಕ ಗೌರವಧನವನ್ನು 15 ಸಾವಿರದಿಂದ 16 ಸಾವಿರ ರೂ.ಗೆ ಹೆಚ್ಚಿಸಿ ಆದೇಶವನ್ನು ಹೊರಡಿಸಲಾಗಿದೆ ಎಂದು ತಿಳಿಸಿದರು.

ಈ ವೇಳೆ ಶ್ರೀವತ್ಸ ಅವರು, ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಪಡೆಯುತ್ತಿರುವ ಇವರನ್ನು ಗೌರವಧನ ವೇತನದಿಂದ ಕನಿಷ್ಠ ವೇತನಕ್ಕೆ ವಿಶೇಷಚೇತನರಾಗಿರುವ ಕಾರಣಕ್ಕೆ ಪರಿಗಣಿಸಬೇಕೆಂದು ಒತ್ತಾಯಿಸಿದರು. ಆಗ ಸಚಿವರು ಇನ್ನಿತರರಿಗೂ ಅಂದರೆ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಅಡುಗೆ ಸಹಾಯಕರು ಎಲ್ಲರೂ ಮನವಿ ಮಾಡುತ್ತಾರೆಂದು ಸದನಕ್ಕೆ ತಿಳಿಸಿದರು. ಈ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷರು ಎಲ್ಲರೂ ಮನವಿ ಸಲ್ಲಿಸುತ್ತಾರೆಂಬ ನೆಪ ಬೇಡ, ವಿಶೇಷವಾಗಿ ವಿಕಲಚೇತರಿಗೆ ಈ ಸೌಲಭ್ಯದ ಅವಶ್ಯಕತೆಯಿರುವುದರಿಂದ, ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ಈ ಬಗ್ಗೆ ಸೂಕ್ತ ತೀರ್ಮಾನಕ್ಕೆ ಬರಬೇಕೆಂದು ಸಚಿವರಿಗೆ ಸೂಚಿಸಿದರು.

ಅಭಿನಂದನೆ...



ಕೊಡಗು ಜಿಲ್ಲೆ ಪದವಿಪೂರ್ವ ಕಾಲೇಜುಗಳ ಉಪ ನಿರ್ದೇಶಕರಾಗಿ ಬಡ್ತಿ ಪಡೆದಿರುವ ಮೈಸೂರಿನ ಕುವೆಂಪುನಗರ ಸರ್ಕಾರಿ ಜೂನಿಯರ್ ಕಾಲೇಜಿನ ಪ್ರಾಂಶುಪಾಲ ಎಂ.ಎಲ್.ಚಿದಾನಂದಕುಮಾರ್ ಅವರನ್ನು ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್ ಅಭಿನಂದಿಸಿದರು. ಸಾಹಿತಿ ಡಾ.ಬೇಸೂರು ಪಾಳೇಗಾರ್, ಕಾಂಗ್ರೆಸ್ ಮುಖಂಡ ನಾಗರಾಜ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಾಳೆ ಸರ್ವ ಸದಸ್ಯರ ಸಭೆ

ಮೈಸೂರು,ಆ.20(ಜಿಎ)–ಕರ್ನಾಟಕ ರಾಜ್ಯ ಸರಕಾರಿ ವಿಶ್ರಾಂತಿ ಉದ್ಯೋಗಿಗಳ, ರಾಜ್ಯ ಸರಕಾರಿ ನಿವೃತ್ತ ನೌಕರರ ಸಂಘದ ಮೈಸೂರು ಶಾಲೆ ವತಿಯಿಂದ ಆ.22ರಂದು ಸಂಘದ 2024–25ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಬಿ.ಆರ್.ಉಮಾಕಾಂತ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಸಾ.ರಾ.ಕನ್ವೆನ್ಷನ್ ಹಾಲ್‌ನಲ್ಲಿ ಅಂದು ಬೆಳಗ್ಗೆ 10 ಗಂಟೆಗೆ ಸಭೆ ನಡೆಯಲಿದ್ದು, ಮಾಜಿ ಸಚಿವ ಸಾ.ರಾ.ಮಹೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ವಿಶೇಷ ಅತಿಥಿಗಳಾಗಿ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಅರುಣ್ ಕುಮಾರ್ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕುಗಳ ಅಧ್ಯಕ್ಷರು ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ ಎಂದರು. ಕೇಂದ್ರ ಸರ್ಕಾರದಿಂದ ಮಂಡಿಸಲಾದ 8ನೇ ವೇತನ ಆಯೋಗದ ವೇತನದ ಪಿಂಚಣಿಯನ್ನು ತಮಗೂ ಪರಿಷ್ಕರಿಸುವುದೂ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಲಾಗುವುದು ಎಂದರು. ಗೋಷ್ಠಿಯಲ್ಲಿ ಸಿ.ಚಿಕ್ಕಲಿಂಗಸ್ವಾಮಿ, ಚಂದ್ರಶೇಖರ್, ಆರ್.ನಾಗೇಶ್, ಸದಸ್ಯ ಕೃಷ್ಣಶೆಟ್ಟಿ ಉಪಸ್ಥಿತರಿದ್ದರು.

ಮಾಜಿ ಶಾಸಕ ಮಂಜುನಾಥ್ ಮೇಲಿನ ಆರೋಪ ಸತ್ಯಕ್ಕೆ ದೂರವಾದುದು

ಹುಣಸೂರು ಕುರುಬ ಸಮುದಾಯದ ಮುಖಂಡರ ಸ್ಪಷ್ಟನೆ

ಮೈಸೂರು,ಆ.20(ಜಿಎ)–ಹುಣಸೂರಿನ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರು ಕುರುಬ ಸಮುದಾಯಕ್ಕೆ ಸೇರಿದವರಿಗೆ ಕಿರುಕುಳ ನೀಡುತ್ತಿದ್ದಾರೆ. ಅಲ್ಲಿನ ಕಾವೇರಿ ಆಸ್ಪತ್ರೆಯ ಕಾರ್ಯನಿರ್ವಹಣೆಗೆ ಅಡ್ಡಿಯುಂಟು ಮಾಡುತ್ತಿದ್ದಾರೆ ಎಂದು ಜೆಡಿಎಸ್ ಮುಖಂಡರಾದ ಕೆ.ಗಣಪತಿ ಹಾಗೂ ವಾಸೇಗೌಡ ಮಾಡಿರುವ ಆರೋಪ ಸತ್ಯಕ್ಕೆ ದೂರವಾದುದಾಗಿದೆ ಎಂದು ಸ್ಥಳೀಯ ಕುರುಬ ಸಮುದಾಯದ ಮುಖಂಡರು ಸ್ಪಷ್ಟಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಗರಸಭೆ ಸದಸ್ಯ ಸ್ವಾಮಿಗೌಡ ಮಾತನಾಡಿ, ಆಸ್ಪತ್ರೆ ಕಟ್ಟಡ ನಿರ್ಮಾಣ ವೇಳೆ ಅಕ್ರಮವಾಗಿದೆ ಎಂಬುದು ಹುಣಸೂರಿನ ಮಾಹಿತಿ ಹಕ್ಕು ಕಾರ್ಯಕರ್ತರೊಬ್ಬರಿಗೆ ಪತ್ತೆಯಾಯಿತು. ಹೀಗಾಗಿ ನಗರಸಭೆ ಸದಸ್ಯರು ನಗರಸಭೆಗೆ ಸೇರಿದ ಆಸ್ತಿ ಉಳಿಸಿಕೊಳ್ಳಲು ಹೋರಾಟ ನಡೆಸುತ್ತಿದ್ದಾರೆ. ಇದು ಈಗ ಸುಪ್ರೀಂಕೋರ್ಟ್‌ಗೂ ಹೋಗಿದೆ. ಆದರೆ ಎಚ್.ಪಿ.ಮಂಜುನಾಥ್ ಹೆಸರನ್ನು ಈ ಪ್ರಕರಣಕ್ಕೆ ಸೇರಿಸುವುದು ಸರಿಯಲ್ಲ ಎಂದರು.

ಕಾವೇರಿ ಆಸ್ಪತ್ರೆಯ ವೈದ್ಯ ಡಾ. ಲೋಹಿತ್ ಓರ್ವ ಸರ್ಕಾರಿ ಆಸ್ಪತ್ರೆ ವೈದ್ಯರಾಗಿದ್ದು, ಹುಣಸೂರಿನಲ್ಲಿ ಕಾವೇರಿ ಆಸ್ಪತ್ರೆ ಮುಖ್ಯಸ್ಥರಾಗಿದ್ದಾರೆ. ಇವರು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಹೆಚ್.ಪಿ.ಮಂಜುನಾಥ್ ಅವರಿಗೆ ಕೆಟ್ಟ ಹೆಸರು ತರಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು. ಗೋಷ್ಠಿಯಲ್ಲಿ ಮುಖಂಡರಾದ ರವಿ ಪ್ರಸನ್ನ, ರಘು, ರಾಮೇಗೌಡ, ಚಂದ್ರಶೇಖರ್ ಇದ್ದರು.

ಸಹಕಾರಿ ಮೀಸಲಾತಿ ಸಂಬಂಧ ಜಿಟಿಡಿ ಹೇಳಿಕೆ ಖಂಡಿಸಿ ಪ್ರತಿಭಟನೆ



ಕರ್ನಾಟಕ ಭೀಮ್ ಸೇನೆ ವತಿಯಿಂದ ಶಾಸಕ ಜಿ.ಟಿ.ದೇವೇಗೌಡರ ಹೇಳಿಕೆ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಆ.20(ಜಿಎ)– ಸಹಕಾರ ಸಂಘಗಳಲ್ಲಿ ದಲಿತರಿಗೆ ಮತ್ತು ಮಹಿಳೆಯರಿಗೆ ಅವಕಾಶ ನೀಡಿದರೆ ಸಹಕಾರ ಸಂಘಗಳ ಬಾಗಿಲು ಮುಚ್ಚಬೇಕಾಗುತ್ತದೆ ಎಂದು ಹೇಳಿರುವ ಶಾಸಕ ಜಿ.ಟಿ.ದೇವೇಗೌಡರ ಹೇಳಿಕೆ ಖಂಡಿಸಿ ಕರ್ನಾಟಕ ಭೀಮ್ ಸೇನೆ ನೇತೃತ್ವದಲ್ಲಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಜವಾಯಿಸಿದ ಪ್ರತಿಭಟನಾಕಾರರು ಶಾಸಕ ಜಿ.ಟಿ.ದೇವೇಗೌಡರ ವಿರುದ್ಧ ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸದನದಲ್ಲಿ ನಡೆದ ಅಧಿವೇಶನದಲ್ಲಿ ಸಹಕಾರ ಸಂಘಗಳಲ್ಲಿ ದಲಿತರು ಮತ್ತು ಮಹಿಳೆಯರನ್ನು ನಾಮನಿರ್ದೇಶಿತ ಸದಸ್ಯರ ನೇಮಕ ಮತ್ತು ರೋಸ್ಟರ್ ಪದ್ಧತಿಯಲ್ಲಿ ಅಧಿಕಾರ ಹಂಚಿಕೆ ಕಾಯ್ದೆ ತಿದ್ದುಪಡಿ ವಿಧೇಯಕವನ್ನು ಸಚಿವ ಹೆಚ್.ಕೆ.ಪಾಟೀಲ್ ಮಂಡಿಸಿದಾಗ ಜಿ.ಟಿ.ದೇವೇಗೌಡ ಅವರು ವಿರೋಧ ವ್ಯಕ್ತಪಡಿಸಿ ದಲಿತರನ್ನು ಅವಮಾನಿಸಿದ್ದಾರೆ. ಇವರ ಈ ನಡವಳಿಕೆಯನ್ನು ಇಡೀ ದಲಿತ ಸಮೂಹ ಖಂಡಿಸುತ್ತದೆ.

ದಲಿತರ ಬಗ್ಗೆ ಇಷ್ಟೊಂದು ಹಗುರವಾಗಿ ಮಾತಾಡಿರುವುದರ ಬಗ್ಗೆ ಜಾತಿ ನಿಂದನೆ ಪ್ರಕರಣ ದಾಖಲಾಗಬೇಕು. ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆದು ಕೊಂಡಿರುವುದರಿಂದ ಇವರ ಸದಸ್ಯತ್ವವನ್ನು ವಜಾಗೊಳಿಸಬೇಕೆಂದು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸೇನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ.ಮಂಜುನಾಥ್, ಗಾಂಧಿನಗರದ ಮುಖಂಡರಾದ ನಾಗಣ್ಣ ಶರತ್, ಮೋಹನ್, ಜ್ಯೋತಿ, ವಿಜಯ್, ಕಿರಣ್, ಭೀಮಣ್ಣ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ದೇಶ - ವಿದೇಶ

ರಷ್ಯಾ–ಉಕ್ರೇನ್ ಯುದ್ಧ ಕೊನೆಗಾಣಿಸಲು ಭಾರತದ ಮೇಲೆ ನಿರ್ಬಂಧ: ಶ್ವೇತಭವನ



ವಾಷಿಂಗ್ಟನ್: ರಷ್ಯಾ ಹಾಗೂ ಉಕ್ರೇನ್ ನಡುವಣ ಯುದ್ಧವನ್ನು ಕೊನೆಗಾಣಿಸಲು ಭಾರತದ ಮೇಲೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿರ್ಬಂಧ ವಿಧಿಸಿದ್ದಾರೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ಹೇಳಿಕೆ ನೀಡಿದ್ದಾರೆ. ಶ್ವೇತಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಕ್ಯಾರೋಲಿನ್, ಈ ಯುದ್ಧವನ್ನು ಕೊನೆಗಾಣಿಸಲು ಸಾರ್ವಜನಿಕರಿಂದ ಭಾರಿ ಒತ್ತಡವಿತ್ತು. ನೀವು ನೋಡಿರುವಂತೆಯೇ ಭಾರತದ ಮೇಲಿನ ನಿರ್ಬಂಧ ಹಾಗೂ ಇತರೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಈ ಯುದ್ಧವನ್ನು ಕೊನೆಗಾಣಿಸಲು ಬಯಸುತ್ತೇವೆ ಎಂದು ಸ್ವತಃ ಟ್ರಂಪ್ ಅವರೇ ನುಡಿದಿದ್ದಾರೆ ಎಂದು ಹೇಳಿದ್ದಾರೆ. ಯಾವುದೇ ಸಭೆ ನಡೆಯುವುದಕ್ಕೂ ಮುನ್ನ ಇನ್ನೊಂದು ತಿಂಗಳು ಕಾಯಬೇಕು ಎಂಬ ಇತರರ ಸಲಹೆಗಳನ್ನು ಅಧ್ಯಕ್ಷರು ತಿರಸ್ಕರಿಸಿದ್ದಾರೆ. ಆದಷ್ಟು ಬೇಗ ಈ ಯುದ್ಧವನ್ನು ಕೊನೆಗಾಣಿಸಲು ಬಯಸಿದ್ದಾರೆ ಎಂದು ತಿಳಿಸಿದ್ದಾರೆ. ಭಾರತ ಹಾಗೂ ಪಾಕಿಸ್ತಾನ ನಡುವಣ ಯುದ್ಧವನ್ನು ಕೊನೆಗೊಳಿಸಲು ಟ್ರಂಪ್ ಮಧ್ಯಸ್ಥಿಕೆ ವಹಿಸಿದ್ದಾರೆ ಎಂದೂ ಕ್ಯಾರೋಲಿನ್ ಮಗದೊಮ್ಮೆ ಪುನರುಚ್ಚರಿಸಿದ್ದಾರೆ.

ಮೊಸಳೆ ದಾಳಿಯಿಂದ ಪತಿ, ಮಗನ ರಕ್ಷಿಸಿದ ವೀರ ಮಹಿಳೆಯರು



ಬಹ್ರೈಚ್: ಉತ್ತರ ಪ್ರದೇಶದ ಖೈರಿಘಾಟ್ ಧಾಕಿಯಾ ಹಾಗೂ ಮೋತಿ ಪುರದ ಮಾಧವಪುರದಲ್ಲಿ ಮಹಿಳೆಯರು ಮೊಸಳೆಯೊಂದಿಗೆ ಹೋರಾಡಿದ್ದಾರೆ. ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಒಬ್ಬರು 5 ವರ್ಷದ ಮಗನನ್ನು ರಕ್ಷಿಸಿದರೆ, ಇನ್ನೊಬ್ಬರು ತಮ್ಮ ಗಂಡನನ್ನು ರಕ್ಷಿಸಿದ್ದಾರೆ.

ಧಾಕಿಯಾ ಗ್ರಾಮದಲ್ಲಿ ಮೊದಲ ಘಟನೆ ಸಂಭವಿಸಿದೆ. ಘಾಗ್ರಾ ನದಿ ಸಮೀಪ 7 ಅಡಿ ಉದ್ದದ ಮೊಸಳೆ ವೀರು ಎಂಬ ಬಾಲಕನನ್ನು ಎಳೆದೊಯ್ಯುತ್ತಿತ್ತು. ಬಾಲಕ ವೀರು ಕೂಗುವುದನ್ನು ಕೇಳಿ ಅವನ ತಾಯಿ ಮಾಯಾ ಕಬ್ಬಿಣದ ಸರಳುಗಳಿಂದ ಮೊಸಳೆಗೆ ಹೊಡೆದು ಮಗನನ್ನು ರಕ್ಷಿಸಿದ್ದಾಳೆ. ಮಗುವಿಗೆ ಗಾಯಗಳಾಗಿದ್ದು ಚಿಕಿತ್ಸೆ ಪಡೆಯುತ್ತಿದೆ ಎಂದು ಬಹ್ರೈಚ್‌ನ ವಿಭಾಗೀಯ ಅರಣ್ಯ ಅಧಿಕಾರಿ ರಾಮ್ ಸಿಂಗ್ ಯಾದವ್ ಹೇಳಿದ್ದಾರೆ. ಇನ್ನೊಂದು ಪ್ರಕರಣದಲ್ಲಿ 45 ವರ್ಷದ ಸೈಫು ತನ್ನ ಪತ್ನಿ ಸುರ್ಜನಾ ಹಾಗೂ ಅತ್ತಿಗೆಯೊಂದಿಗೆ ರಾಮತಾಲಿಯಾ ಕಾಲುವೆಯನ್ನು ದಾಟುತ್ತಿದ್ದಾಗ ಮೊಸಳೆ ದಾಳಿ ನಡೆಸಿದೆ. ಕಾಲುವೆ ದಾಟುವಾಗ ಸೈಫು ಕಾಲಿಗೆ ಮೊಸಳೆ ಬಾಯಿ ಹಾಕಿ ಕಚ್ಚಿ ಹಿಡಿದಿದೆ. ತನ್ನ ಪತಿ ದಡ ಸೇರಲು ಸುರ್ಜನಾ ತನ್ನ ಸೀರೆಯನ್ನೇ ನೀರಿಗೆ ಹಾಕಿದ್ದಾಳೆ. ಅವನ ಕಿರುಚಾಟಕ್ಕೆ ಓಡಿ ಬಂದ ಗ್ರಾಮಸ್ಥರು ಮೊಸಳೆಯನ್ನು ಕೋಲುಗಳಿಂದ ಹೊಡೆದು ಸೈಫುನ್ನು ಕಾಪಾಡಿದ್ದಾರೆ.

ಗಾಜಾ ನಗರ ವಶಕ್ಕೆ ಇಸ್ರೇಲ್ ಅನುಮೋದನೆ: ಸೈನಿಕರಿಗೆ ಕರೆ

ಗಾಜಾ: ಗಾಜಾ ನಗರವನ್ನು ವಶಪಡಿಸಿಕೊಳ್ಳುವ ಯೋಜನೆಗೆ ಇಸ್ರೇಲ್ ರಕ್ಷಣ ಸಚಿವರು ಅನುಮೋದನೆ ನೀಡಿದ್ದು, ಸುಮಾರು 60,000 ಮೀಸಲು ಸೈನಿಕರನ್ನು ಕರೆಸಲು ಅಧಿಕಾರ ನೀಡಿದ್ದಾರೆ ಎಂದು ಅವರ ಸಚಿವಾಲಯ ಬುಧವಾರ ದೃಢಪಡಿಸಿರುವುದಾಗಿ ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ. ಸುಮಾರು ಎರಡು ವರ್ಷಗಳಿಂದ ಗಾಜಾದಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಕದನ ವಿರಾಮಕ್ಕಾಗಿ ಒತ್ತಾಯಿಸುತ್ತಿರುವವರು ಇತ್ತೀಚಿನ ಪ್ರಸ್ತಾಪದ ಕುರಿತು ಅಧಿಕೃತ ಇಸ್ರೇಲಿ ಪ್ರತಿಕ್ರಿಯೆಗಾಗಿ ಕಾಯುತ್ತಿರುವ ವೇಳೆಯಲ್ಲೇ, ರಕ್ಷಣ ಸಚಿವ ಇಸ್ರೇಲ್ ಕಾಟ್ಜ್ ಅವರ ಈ ನಡೆ ಹಮಾಸ್ ಮೇಲೆ ಒತ್ತಡ ಹೇರಿದೆ ಎಂದು AFP ಗೆ ದೃಢಪಡಿಸಲಾಗಿದೆ. ಮಧ್ಯವರ್ತಿ ಕತಾರ್ ಎಚ್ಚರಿಕೆಯ ಆಶಾವಾದ ವ್ಯಕ್ತಪಡಿಸಿದ್ದರೂ, ಹಿರಿಯ ಇಸ್ರೇಲಿ ಅಧಿಕಾರಿಯೊಬ್ಬರು, ಯಾವುದೇ ಒಪ್ಪಂದದಲ್ಲಿರುವ ಎಲ್ಲಾ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವ ತನ್ನ ಕರೆಗೆ ಸರಕಾರ ದೃಢವಾಗಿ ನಿಲ್ಲಲಿದೆ ಎಂದಿದ್ದಾರೆ. ಹಮಾಸ್ ಅನುಮೋದಿಸಿರುವ 60 ದಿನಗಳ ಕದನ ವಿರಾಮ, ಒತ್ತೆಯಾಳುಗಳ ಬಿಡುಗಡೆ, ಕೆಲವು ಪ್ಯಾಲೆಸ್ತೀನಿಯನ್ ಕೈದಿಗಳ ಬಿಡುಗಡೆ ಮತ್ತು ಗಾಜಾಗೆ ನೆರವಾಗಲು ಅವಕಾಶ ನೀಡುವ ನಿಬಂಧನೆಗಳನ್ನು ಪ್ರಸ್ತಾಪಿಸಿದೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಈ ಬಗ್ಗೆ ಇನ್ನೂ ಸಾರ್ವಜನಿಕವಾಗಿ ಪ್ರತಿಕ್ರಿಯಿಸಿಲ್ಲ.

ಅಡುಗೆಗೆ ನೆರವಾಗದ ಪತಿ: ಚಾಕುವಿನಿಂದ ಇರಿದ ಪತ್ನಿ



ಬಲ್ಲಿಯಾ: ಉತ್ತರ ಪ್ರದೇಶದ ಬಲ್ಲಿಯಾ ಜಿಲ್ಲೆಯಲ್ಲಿ ಅಡುಗೆ ಮಾಡುವ ವಿಚಾರಕ್ಕೆ ಗಂಡ ಹೆಂಡತಿ ನಡುವೆ ಜಗಳವಾಗಿ ಹೆಂಡತಿಯು ಚಾಕುವಿನಿಂದ ಹಲ್ಲೆ ನಡೆಸಿರುವ ಘಟನೆ ನಡೆದಿದೆ.

ಮಂಗಳವಾರ ರಾತ್ರಿ ಮಹಾವೀರ ನಗರದಲ್ಲಿ ಅಡುಗೆ ವಿಚಾರವಾಗಿ ಇಬ್ಬರ ನಡುವೆ ಜಗಳ ನಡೆದಿದೆ. ಜಗಳ ವಿಕೋಪಕ್ಕೆ ತಿರುಗಿದ ಪರಿಣಾಮ ಪತಿ ಸಂಜಯ್ ಕುಮಾರ್ ಮೇಲೆ ಪತ್ನಿ ಚಾಕುವಿನಿಂದ ಹಲ್ಲೆ ನಡೆಸಿದ್ದಾಳೆ. ಲಾಲ್ಬುಚಿ ದೇವಿಯು ಮನೆಯಲ್ಲಿ ಅಡುಗೆಗೆ ಹಿಟ್ಟು ಇಲ್ಲದ ಕಾರಣ ರಾತ್ರಿ ಊಟಕ್ಕಾಗಿ ಗಂಡ ಹಾಗೂ ಮೂವರು ಮಕ್ಕಳಿಗೆಂದು ಕಿಚಡಿಯನ್ನು ತಯಾರಿಸಿದ್ದಾಳೆ. ಸಂಜಯ್‌ಕುಮಾರ್ ಕೆಲಸ ಮುಗಿಸಿಕೊಂಡು ಮನೆಗೆ ಬಂದಾಗ ರೊಟ್ಟಿ ಮಾಡುವಂತೆ ಹೇಳಿದ್ದಾನೆ. ಆಗ ಇಬ್ಬರ ಮಧ್ಯೆ ಜಗಳ ಉಂಟಾಗಿ ಕೋಪದಲ್ಲಿ ಅಡುಗೆ ಮನೆಯಲ್ಲಿದ್ದ ಚಾಕುವಿನಿಂದ ಗಂಡನ ಎದೆಗೆ ಇರಿದಿದ್ದಾಳೆ ಎಂದು ಪೊಲೀಸರು ಹೇಳಿದ್ದಾರೆ. ಗ್ರಾಮಸ್ಥರು ಸಂಜಯ್‌ನನ್ನು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಿಸಿದ್ದಾರೆ. ನಂತರ ವೈದ್ಯರ ಸಲಹೆಯಂತೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಕುಟುಂಬದವರು ನೀಡಿರುವ ದೂರನ್ನು ಆಧರಿಸಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಅಫ್ಘಾನಿಸ್ತಾನ ಬಸ್ ದುರಂತ: 76 ಮಂದಿ ಧಾರುಣ ಸಾವು



ಗುಜ್ರಾ: ಪಶ್ಚಿಮ ಅಫ್ಘಾನಿಸ್ತಾನದಲ್ಲಿ ನಿರಾಶ್ರಿತರಿದ್ದ ಬಸ್ ಹಾಗೂ ಎರಡು ವಾಹನಗಳ ಮಧ್ಯೆ ಅಪಘಾತ ಸಂಭವಿಸಿದ್ದು, ಘಟನೆಯಲ್ಲಿ ಮೃತಪಟ್ಟವರ ಸಂಖ್ಯೆ 76 ದಾಟಿದೆ.

ಇರಾನ್‌ನಿಂದ ಆಗಮಿಸಿದ್ದ ಅಫ್ಘಾನ್ ನಿರಾಶ್ರಿತರನ್ನು ಬಸ್ ಮೂಲಕ ರಾಜಧಾನಿ ಕಾಬೂಲ್‌ಗೆ ಕರೆದುಕೊಂಡು ಬರಲಾಗುತಿತ್ತು. ಘಟನೆಯಲ್ಲಿ ಇನ್ನೂ ಮೂರು ಜನ ಗಂಭೀರ ಗಾಯಗೊಂಡಿದ್ದಾರೆ. ಮೃತ ದೇಹಗಳನ್ನು ಸೇನಾ ಆಸ್ಪತ್ರೆಗೆ ಸ್ಥಳಾಂತರಿಸಿದ್ದು, ಇದರಲ್ಲಿ ಹೆಚ್ಚಿನ ಸಂಖ್ಯೆಯ ಮಕ್ಕಳು ಕೂಡ ಇದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಮಂಗಳವಾರ ರಾತ್ರಿ ಗುಜ್ರಾ ಪ್ರಾಂತ್ಯದಲ್ಲಿ ನಿರಾಶ್ರಿತರಿದ್ದ ಬಸ್, ಇಂಧನ ತುಂಬಿದ ಟ್ರಕ್ ಹಾಗೂ ಬೈಕ್ ನಡುವೆ ಅಪಘಾತವಾಗಿದೆ. ಇದರಿಂದ ಬೆಂಕಿ ಹೊತ್ತಿಕೊಂಡಿದ್ದು, ಮೃತಪಟ್ಟವರ ದೇಹಗಳು ಗುರುತಿಸಲಾಗದ ಸ್ಥಿತಿಯಲ್ಲಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಕಳಪೆ ರಸ್ತೆ ಕಾಮಗಾರಿ ಹಾಗೂ ರಸ್ತೆ ಸುರಕ್ಷತಾ ನಿಯಮಗಳನ್ನು ಸರಿಯಾಗಿ ಪಾಲನೆ ಮಾಡದೇ ಇರುವುದರಿಂದ ಅಫ್ಘಾನಿಸ್ತಾನದಲ್ಲಿ ನಿರಂತರವಾಗಿ ರಸ್ತೆ ಅಪಘಾತ ಪ್ರಕರಣಗಳು ವರದಿಯಾಗುತ್ತಿವೆ. ಇರಾನ್ ಹಾಗೂ ಪಾಕಿಸ್ತಾನ ಮೂಲದಿಂದ ಈ ವರ್ಷದಲ್ಲಿ ಸುಮಾರು 1.5 ಮಿಲಿಯನ್ ಜನರು ಅಫ್ಘಾನಿಸ್ತಾನಕ್ಕೆ ಮರಳಿ ಬಂದಿದ್ದಾರೆ.

ಮೈಸೂರು ಮಿತ್ರ ಗುರುವಾರ 21 ಆಗಸ್ಟ್ 2025

ಕೊಡಗಿನಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಜನ್ಮದಿನ ಆಚರಣೆ

ದೂರದೃಷ್ಟಿಯ ನಾಯಕ ಡಿ.ದೇವರಾಜ ಅರಸು

ಮಡಿಕೇರಿ,ಆ.20– ಡಿ.ದೇವರಾಜ ಅರಸು ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಉಳುವವನೇ ಭೂಮಿಯ ಒಡೆಯ, ಜೀತ ಪದ್ಧತಿ ನಿರ್ಮೂಲನೆ, ವಿದ್ಯಾರ್ಥಿ ನಿಲಯ ಸ್ಥಾಪನೆ, ಹಿಂದುಳಿದ ವರ್ಗಗಳಿಗೆ ನ್ಯಾಯ, ಎಲೆಕ್ಟ್ರಾನಿಕ್ ಸಿಟಿ ಆರಂಭ ಹೀಗೆ ಮಹತ್ವದ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ತುಂಬಾ ದೂರದೃಷ್ಟಿಯಿಂದ ಆಡಳಿತವನ್ನು ನಡೆಸಿ, ಇಂದಿಗೂ ಸಹ ಜನಮನ್ನಣೆ ಉಳಿಸಿ ಕೊಂಡಿದ್ದಾರೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ತಿಳಿಸಿದ್ದಾರೆ.

ಕೊಡಗು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಗಾಂಧಿ ಭವನದಲ್ಲಿ ಸಾಮಾಜಿಕ ಕ್ರಾಂತಿಯ ಹರಿಕಾರ ಹಾಗೂ ಮಾಜಿ ಮುಖ್ಯಮಂತ್ರಿ ದಿ.ಡಿ.ದೇವರಾಜ ಅರಸು ಅವರ 110 ನೇ ಜನ್ಮ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ರಾಜ್ಯದಲ್ಲಿ ಪ್ರತಿಯೊಂದು ಸಮಾಜಕ್ಕೂ ಸಾಮಾಜಿಕ ನ್ಯಾಯ ಕಲ್ಪಿಸಲು ಸಾಕಷ್ಟು ಶ್ರಮಿಸಿದ್ದಾರೆ. ಇಂತಹ ಮಹನೀಯರ ಆದರ್ಶ ಮತ್ತು ಸಾಧನೆಯನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳುವಂತಾಗಬೇಕು. ಸಮ ಸಮಾಜ ನಿರ್ಮಾಣ ಹಾಗೂ ಸುಧಾರಣೆಗೆ ಶ್ರಮಿಸಿದ್ದಾರೆ. ಆ ನಿಟ್ಟಿನಲ್ಲಿ ಡಿ.ದೇವರಾಜ ಅರಸು ಅವರ ಮೌಲ್ಯ ಮತ್ತು ದಾರ್ಶನಿಕತೆಯನ್ನು ಅಧ್ಯಯನ ಮಾಡುವಂತಾಗಬೇಕು ಎಂದು ಜಿಲ್ಲಾಧಿಕಾರಿ ಅವರು ವಿವರಿಸಿದರು.

ಸಾಮಾಜಿಕ ನ್ಯಾಯಕ್ಕಾಗಿ ಕಾನೂನನ್ನು ತಿದ್ದುಪಡಿ ಮಾಡಿ ಪ್ರತಿಯೊಬ್ಬರಿಗೂ ನ್ಯಾಯ ಒದಗಿಸಲು ಶ್ರಮಿಸಿದ್ದಾರೆ. ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಇರುವ ಅವಕಾಶವನ್ನು ಸರಿಯಾಗಿ ಬಳಸಿಕೊಂಡು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮಹಾನ್ ವ್ಯಕ್ತಿಯಾಗಿ ರೂಪುಗೊಂಡರು ಎಂದು ತಿಳಿಸಿದರು.


ಜಿಲ್ಲಾಧಿಕಾರಿ ವೆಂಕಟ್ ರಾಜಾ, ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುತ್ತಿರುವುದು.

ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಕೆ.ಸಿ.ದಯಾನಂದ ಅವರು ಮಾತನಾಡಿ ಡಿ.ದೇವರಾಜ ಅರಸು ಅವರು ಸಾಮಾಜಿಕ ಸುಧಾರಣೆಯ ಮತ್ತು ಹಿಂದುಳಿದ ವರ್ಗಗಳ ಹರಿಕಾರ ಎಂದು ತಿಳಿಸಿದರು. ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷರಾದ ಕೇಶವ ಕಾಮತ್ ಅವರು ಮಾತನಾಡಿ ಡಿ.ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅತ್ಯುತ್ತಮ ಆಡಳಿತ ನೀಡಿದ ಜನ ಸೇವಕ, ಹಿಂದುಳಿದ ವರ್ಗಗಳ ಆಶಾ ಕಿರಣ ಹಾಗೂ ಬೆಳಕು ಎಂದು ನುಡಿದರು.

ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಶೇಖರ್, ತಹಶೀಲ್ದಾರ್ ಶ್ರೀಧರ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ದೀಪಕ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಚೇರಿ ವ್ಯವಸ್ಥಾಪಕರಾದ ಶಿವಶಂಕರು, ಹಿಂದುಳಿದ ವರ್ಗಗಳ ತಾಲ್ಲೂಕು ಅಧಿಕಾರಿ ಮೋಹನ್ ಕುಮಾರ್, ಇತರರು ಇದ್ದರು. ಕೆ.ಆರ್.ಭಾರತಿ ನಿರೂಪಿಸಿದರು, ಶ್ರೀಕಾಂತ್ ವಂದಿಸಿದರು.

ಕಾಫಿ ತೋಟದಲ್ಲಿ ಹುಲಿ ಮೃತದೇಹ ಪತ್ತೆ



ಮಡಿಕೇರಿ,ಆ.20– ಕಾಫಿ ತೋಟದಲ್ಲಿ ಹುಲಿ ಮೃತದೇಹ ಪತ್ತೆಯಾಗಿರುವ ಘಟನೆ ಪೊನ್ನಂಪೇಟೆ ತಾಲೂಕಿನ ವೆಸ್ಟ್‌ನೆಮ್ಮಲೆ ಗ್ರಾಮದಲ್ಲಿ ನಡೆದಿದೆ.

ಇಲ್ಲಿನ ಕಾಫಿ ತೋಟದಲ್ಲಿ ಹುಲಿ ಮೃತ ದೇಹ ಪತ್ತೆಯಾಗಿದ್ದು, ವಯೋ ಸಹಜವಾಗಿ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ. ಸ್ಥಳಕ್ಕೆ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಮತ್ತು ವಿರಾಜಪೇಟೆ ಡಿಎಫ್‌ಓ ಜಗನ್ನಾಥ್ ಮತ್ತು ಅರಣ್ಯ ಇಲಾಖೆ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಹೆಣ್ಣು ಹುಲಿಯ ಗುರುತು ಪತ್ತೆ ಕಾರ್ಯ ಪ್ರಗತಿಯಲ್ಲಿದ್ದು, ಕಳೇಬರದ ಮರಣೋತ್ತರ ಪರೀಕ್ಷೆ ಬಳಿಕ ಸಾವಿಗೆ ನಿಖರ ಕಾರಣ ತಿಳಿಯಲಿದೆ ಎಂದು ಅರಣ್ಯಾಧಿಕಾರಿಗಳು ಮಾಹಿತಿ ನೀಡಿದ್ದಾರೆ. ಸ್ಥಳದಲ್ಲೇ ಹುಲಿಯ ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಿದ್ದು ಮುಂದಿನ ಕ್ರಮ ಕೈಗೊಂಡಿದ್ದಾರೆ.


ವಾಯ್ಸ್ ಆಫ್ ವಿರಾಜಪೇಟೆ–2025 ಸಂಗೀತ ಸ್ಪರ್ಧೆ

ವಿರಾಜಪೇಟೆ, ಆ.20– ಕೊಡಗು ಜಿಲ್ಲೆ ವಿರಾಜಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನ, ಶ್ರೀ ಗೌರಿಗಣೇಶ ಉತ್ಸವ ಸಮಿತಿ ಮತ್ತು ಎನ್. ವೆಂಕಟೇಶ್ ಕಾಮತ್ ಟ್ರಸ್ಟ್ ವತಿಯಿಂದ ಆ.31 ರಂದು ಬೆಳಗ್ಗೆ 11 ಗಂಟೆಗೆ ವಿರಾಜಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ವಾಯ್ಸ್ ಆಫ್ ವಿರಾಜಪೇಟೆ–2025 ಸಂಗೀತ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಜೂನಿಯರ್–12 ವರ್ಷದವರೆಗೆ, ಸೀನಿಯರ್–13 ವರ್ಷ ಮೇಲ್ಪಟ್ಟ ವಯೋಮಿತಿಯವರು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ವಿಜೇತರಿಗೆ ಆಕರ್ಷಕ ಬಹುಮಾನ ಮತ್ತು ಸಂಗೀತ ನಿರ್ದೇಶಕ ಬಿ. ಪ್ರಶಾಂತ್ ಬಾಳಿಗೆ ಬೆಳ್ತಂಗಡಿ ಅವರ ನಿರೂಪಣೆಯೊಂದಿಗೆ ಕಾರ್ಯಕ್ರಮ ನಡೆಯಲಿದೆ.

ಭಾಗವಹಿಸಲಿಚ್ಛಿಸುವ ಸ್ಪರ್ಧಿಗಳು ಮೊ.ಸಂಖ್ಯೆ 9008509929, 9448490008, 8105844824, 9663061714 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ರಾಜು ಚೆಂಗಪ್ಪ ನಿಧನ



ಮೈಸೂರು, ಆ.20– ಕೊಡಗು ಜಿಲ್ಲೆಯ ನಿವೃತ್ತ ಸರ್ಕಾರಿ ಅಧಿಕಾರಿ, ಮೈಸೂರಿನ ರಾಮಕೃಷ್ಣನಗರದ ನಿವಾಸಿ ಚಿಮ್ಮನಮಾಡ ರಾಜು ಚೆಂಗಪ್ಪ (87) ಬುಧವಾರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಕೊಡಗು ಜಿಲ್ಲೆ ಪೊನ್ನಪೇಟೆಯ ತೂಚಮಕೇರಿ ನಿವಾಸಿಯಾದ ದಿವಂಗತರು ಮೈಸೂರಿನ ರಾಮಕೃಷ್ಣನಗರದಲ್ಲಿ ವಾಸವಾಗಿದ್ದರು. ದಿವಂಗತರು ಪತ್ನಿ ದೇವಿಕಾ ನಾಯಕಂಡ, ಪುತ್ರರಾದ ಶಶಿಕುಮಾರ್, ಪವನ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗುರುವಾರ (ಆ.21) ಮಧ್ಯಾಹ್ನ 12 ಗಂಟೆಗೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ಅಂತ್ರಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಾಹಿತಿಗಾಗಿ ಮೊ.8197600380, 9482640625 ಮೂಲಕ ಸಂಪರ್ಕಿಸಬಹುದಾಗಿದೆ.

ಶ್ಯಾಮ್ ಪೂವಣ್ಣ



ನಾಪೋಕ್ಲು: ಇಲ್ಲಿಗೆ ಸಮೀಪದ ಕಕ್ಕಬೆ ನಾಲಡಿ ಗ್ರಾಮದ ನಿವಾಸಿ ಅಲ್ಲರಂಡ ನಾಣಯ್ಯ ಅವರ ಪುತ್ರ ಶ್ಯಾಮ್ ಪೂವಣ್ಣ (43) ಬುಧವಾರ ಅನಾರೋಗ್ಯದಿಂದ ನಿಧನರಾದರು.


ಮೃತರ ಅಂತ್ಯಕ್ರಿಯೆ ಗುರುವಾರ ಮೃತರ ತೋಟದಲ್ಲಿ ಜರುಗಲಿದೆ. ಮೃತರು ತಂದೆ ನಾಣಯ್ಯ, ಪತ್ನಿ, ಗಂಡು ಮಗು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಬೆಟ್ಟದಿಂದ ಬಿದ್ದು ವ್ಯಕ್ತಿ ಸಾವು

ಮಡಿಕೇರಿ,ಆ.20– ಬೆಟ್ಟದ ಮೇಲಿಂದ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ವ್ಯಕ್ತಿ ಮೃತಪಟ್ಟ ಘಟನೆ ಸೋಮವಾರಪೇಟೆ ತಾಲೂಕು ಶನಿವಾರಸಂತೆ ಮಾಲಂಬಿ ಸಮೀಪದ ಜೇನು ಕಲ್ಲು ಬೆಟ್ಟದಲ್ಲಿ ನಡೆದಿದೆ. ಮಾಲಂಬಿ ಗ್ರಾಮದ ಅಯ್ಯಪ್ಪ(53) ಮೃತ ದುರ್ದೈವಿ.

ಅಯ್ಯಪ್ಪ ಅವರು ಆ.15ರಂದು ಜೇನು ಕಲ್ಲು ಬೆಟ್ಟಕ್ಕೆ ಕಣಿಲೆ ತರಲೆಂದು ತೆರಳಿದ್ದರು. ಆದರೆ ಸಂಜೆಯಾದರೂ ಅಯ್ಯಪ್ಪ ಮನೆಗೆ ಬಾರದ ಹಿನ್ನೆಲೆಯಲ್ಲಿ ಮನೆ ಮಂದಿ ಮತ್ತು ಗ್ರಾಮಸ್ಥರು ಹುಡುಕಾಟ ನಡೆಸಿದರೂ ಪತ್ತೆಯಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಅಯ್ಯಪ್ಪ ಅವರ ಪತ್ನಿ ಸರೋಜ ಶನಿವಾರಸಂತೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ವ್ಯಕ್ತಿ ಕಾಣೆಯಾಗಿರುವ ಕುರಿತು ಪ್ರಕರಣ ದಾಖಲಿಸಿ ಕೊಂಡಿದ್ದರು. ಸ್ಥಳೀಯರು ಕಾಡಿನತ್ತ ತೆರಳಿದಾಗ ಕೊಳೆತ ಸ್ಥಿತಿಯಲ್ಲಿ ಅಯ್ಯಪ್ಪ ಮೃತ ದೇಹ ಪತ್ತೆಯಾಗಿದ್ದು, ಬೆಟ್ಟದ ಮೇಲಿಂದ ಕಾಲು ಜಾರಿ ಬಿದ್ದು ಅಯ್ಯಪ್ಪ ಮೃತಪಟ್ಟಿರುವುದು ಕಂಡು ಬಂದಿದೆ. ಶನಿವಾರಸಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಹೆಬ್ಬಾಲೆಯಲ್ಲಿ ಎಟಿಎಂ ಕೇಂದ್ರಕ್ಕೆ ಬೆಂಕಿ



ಮಡಿಕೇರಿ,ಆ.20– ಕೂಡಿಗೆ ಬಳಿಯ ಹೆಬ್ಬಾಲೆಯ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಇರುವ ರಾಷ್ಟ್ರೀಕೃತ ಬ್ಯಾಂಕೊಂದರ ಎ.ಟಿ.ಎಂನಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದಾಗಿ ಬೆಂಕಿ ಹೊತ್ತಿಕೊಂಡ ಘಟನೆ ನಡೆದಿದೆ ಎಟಿಎಂ ಕೇಂದ್ರದಲ್ಲಿ ಬೆಂಕಿ ಕಾಣಿಸಿಕೊಂಡ ಮಾಹಿತಿ ತಿಳಿದ ಹೆಬ್ಬಾಲೆಯ ಸಮಾಜ ಸೇವಕ ಹಾಗೂ ರೈತ ಸಂಘದ ಅಧ್ಯಕ್ಷ ಶರತ್ ಮತ್ತವರ ಸ್ನೇಹಿತರು ಬೆಂಕಿ ನಂದಿಸಲು ಪ್ರಯತ್ನಿಸಿದ್ದಾರೆ. ಆದರೆ ಬೆಂಕಿ ಹತೋಟಿಗೆ ಬಾರದ ಹಿನ್ನೆಲೆಯಲ್ಲಿ ಕೂಡಲೇ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಸ್ಥಳಕ್ಕಾಗಮಿಸಿದ ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿರಾಜಪೇಟೆಯಲ್ಲಿ ಗೌರಿ–ಗಣೇಶ ಉತ್ಸವ ಅದ್ದೂರಿ ಆಚರಣೆಗೆ ನಿರ್ಧಾರ

ವಿರಾಜಪೇಟೆ,ಆ.20–ರಾಜ್ಯದಲ್ಲೇ ಹೆಸರುವಾಸಿಯಾಗಿರುವ ವಿರಾಜಪೇಟೆಯ ಐತಿಹಾಸಿಕ ಗೌರಿ–ಗಣೇಶ ಉತ್ಸವವನ್ನು ಕಾನೂನು ಕಟ್ಟಳೆಗಳನ್ನು ಪಾಲನೆ ಮಾಡುವುದರೊಂದಿಗೆ ವಿಜೃಂಭಣೆ ಮತ್ತು ಸಾಮರಸ್ಯದಿಂದ ಆಚರಿಸಬೇಕು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಕರೆ ನೀಡಿದರು.

ಇಲ್ಲಿನ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ, ವಿರಾಜಪೇಟೆ ನಗರ ಐತಿಹಾಸಿಕ ಜನೋತ್ಸವ ಸಮಿತಿ ಸಭೆಯಲ್ಲಿ ಸಮಿತಿಯ ಅಧ್ಯಕ್ಷರೂ ಆಗಿರುವ ಪೊನ್ನಣ್ಣ ಅಧ್ಯಕ್ಷತೆ ವಹಿಸಿ ಮಾತನಾಡಿ, ಅತೀ ಮುಖ್ಯವಾಗಿ ಪರಿಸರ ಕಾಳಜಿಯೊಂದಿಗೆ ಈ ಗಣೇಶೋತ್ಸವವನ್ನು ಆಚರಿಸಬೇಕು. ಪ್ರಕೃತಿಗೆ ಹಾನಿಕಾರಕವಾದ, ಪ್ರಾಣಿ–ಪಕ್ಷಿಗಳಿಗೆ ಹಾಗೂ ಪರಿಸರಕ್ಕೆ ಮಾರಕವಾಗಬಹುದಾದಂತಹ ಯಾವುದೇ ಬಣ್ಣವಾಗಲಿ, ಪೇಪರ್ ವಸ್ತುಗಳನ್ನಾಗಲಿ ಬಳಸದೇ ಈ ಗಣೇಶೋತ್ಸವವನ್ನು ಆಚರಿಸೋಣ ಎಂದರು.


ಜನೋತ್ಸವ ಸಮಿತಿ ಸಭೆಯನ್ನು ಉದ್ಘಾಟಿಸುತ್ತಿರುವ ಶಾಸಕ ಪೊನ್ನಣ್ಣ.

ಉತ್ಸವದ ಶೋಭಾಯಾತ್ರೆಯಲ್ಲಿ ಮಂಟಪಗಳು ಚಲಿಸುವ ಮುಖ್ಯ ರಸ್ತೆ ಒಳಗೊಂಡಂತೆ ಗುಂಡಿ ಬಿದ್ದ ನಗರದ ರಸ್ತೆಗಳನ್ನು ದುರಸ್ತಿಪಡಿಸುವುದು ಸೇರಿದಂತೆ ಪಟ್ಟಣದಲ್ಲಿ ಮತ್ತು ಗಡಿಯಾರಕಂಬಕ್ಕೆ ವಿದ್ಯುತ್ ಅಲಂಕಾರ ಮಾಡುವಂತೆ ಮುಖ್ಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಬ್ಬರದ ಡಿಜೆ ಶಬ್ದದಿಂದ ಹಿರಿಯರು ಮತ್ತು ಪುಟ್ಟ ಮಕ್ಕಳಿಗೆ ಅಪಾಯವಾಗುವ ಸಾಧ್ಯತೆಗಳಿರುತ್ತದೆ. ಜೊತೆಗೆ ಸುಂದರ ಪರಿಸರ ಹೊಂದಿರುವ ಕೊಡಗಿನಲ್ಲಿ ಪರಿಸರ ಮಾಲಿನ್ಯವಾಗದಂತೆ ರಕ್ಷಿಸುವ ಜವಾಬ್ದಾರಿ ನಮ್ಮ ಮೇಲಿದೆ. ಉತ್ಸವದ ಸಂದರ್ಭ ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದೆ ಶಾಂತಿಯೊಂದಿಗೆ ಹಬ್ಬ ಆಚರಿಸಲು ಸಹಕರಿಸುವಂತೆ ಮನವಿ ಮಾಡಿದರು.

ಸಭೆಯಲ್ಲಿ ಹಾಜರಿದ್ದ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ರಘುರಾಮ್, ಪೊಲೀಸ್ ವೃತ್ತ ನಿರೀಕ್ಷಕರಾದ ಅನೂಪ್ ಮಾದಪ್ಪ, ಐತಿಹಾಸಿಕ ಜನೋತ್ಸವ ಸಮಿತಿ ಕಾರ್ಯಾಧ್ಯಕ್ಷ ಶಬರೀಶ್ ಶೆಟ್ಟಿ ಮಾತನಾಡಿದರು. ಬಸವೇಶ್ವರ ದೇವಾಲಯ ಗೌರಿ ಗಣೇಶೋತ್ಸವ ಸಮಿತಿಯ ಅಧ್ಯಕ್ಷ ರವಿಂದ್ರ ಕಾಮತ್, ಸೇರಿದಂತೆ ಮತ್ತಿತರರು ಮಾತನಾಡಿದರು. ವೇದಿಕೆಯಲ್ಲಿ ತಹಶೀಲ್ದಾರ್ ಪ್ರವೀಣ್, ಪುರಸಭೆ ಮುಖ್ಯಾಧಿಕಾರಿ ಹಾಗೂ ಜನೋತ್ಸವ ಸಮಿತಿ ಕಾರ್ಯದರ್ಶಿ ನಾಚಪ್ಪ, ಪುರಸಭೆ ಉಪಾಧ್ಯಕ್ಷರಾದ ಫಸಿಯಾ ತಬ್ಸುಂ, ಸ್ಥಾಯಿ ಸಮಿತಿ ಅಧ್ಯಕ್ಷ ಜಲೀಲ್, ಪುರಸಭೆಯ ಸದಸ್ಯ ರಜನಿಕಾಂತ್, ಜೂನಾ ಸುನೀತ ಇತರರು ಉಪಸ್ಥಿತರಿದ್ದರು.

ರಸ್ತೆ ಕಾಮಗಾರಿ ಪರಿಶೀಲಿಸಿದ ಶಾಸಕ ಪುಟ್ಟರಂಗಶೆಟ್ಟಿ


ಶಾಸಕ ಪುಟ್ಟರಂಗಶೆಟ್ಟಿ ನಗರಸಭೆ ವ್ಯಾಪ್ತಿಯ ವಾರ್ಡ್‌ಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಚಾಮರಾಜನಗರ, ಆ.20– ನಗರಸಭೆ ವ್ಯಾಪ್ತಿಯ ವಿವಿಧ ವಾರ್ಡ್‌ಗಳ ಬಡಾವಣೆಗಳಲ್ಲಿ ರಸ್ತೆ ನಿರ್ಮಾಣ ಕಾಮಗಾರಿಯನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ನಗರಸಭೆ ಸದಸ್ಯರು, ಪಿಡಬ್ಲ್ಯೂಡಿ ಎಂಜಿನಿಯರ್‌ಗಳ ಜತೆ ಪರಿಶೀಲಿಸಿದರು.

ಮೊದಲಿಗೆ ನಗರಸಭೆ ವ್ಯಾಪ್ತಿಯ ಕರಿನಂಜನಪುರದಿಂದ ಸೋಮವಾರಪೇಟೆ ಸಂಪರ್ಕ ರಸ್ತೆ, ಗಾಳೀಪುರ ಬಡಾವಣೆ, ಗುಂಡ್ಲುಪೇಟೆ ರಸ್ತೆಯಲ್ಲಿ ಒಳಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿ ಪರಿಶೀಲಿಸಿದರು.

ಇದೇ ವೇಳೆ ಶಾಸಕರು ಮಾತನಾಡಿ, ನಗರದಲ್ಲಿ ಒಳಚರಂಡಿ ಕಾಮಗಾರಿ ಆಗಿರುವೆಡೆ ರಸ್ತೆ ನಿರ್ಮಾಣವಾಗಿಲ್ಲ ಎಂದು ಸಾರ್ವಜನಿಕರಿಂದ ದೂರು ಕೇಳಿ ಬಂದಿತ್ತು. ಆ ಹಿನ್ನೆಲೆಯಲ್ಲಿ ತಾವು ಅಧಿಕಾರಿಗಳ ಜತೆ ಭೇಟಿ ನೀಡಿ, ಎಲ್ಲೆಲ್ಲಿ ರಸ್ತೆಗಳಿಲ್ಲ ಎಂಬುದನ್ನು ಪರಿಶೀಲಿಸಿದ್ದೇನೆ. ರಸ್ತೆ ನಿರ್ಮಾಣ ಮಾಡುವ ಸಂಬಂಧ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಪಿಡಬ್ಲ್ಯೂಡಿ ಎಂಜಿನಿಯರ್‌ಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ನಗರಸಭೆ ಸದಸ್ಯಆರ್.ಎಂ.ರಾಜಪ್ಪ, ಪಿಡಬ್ಲ್ಯೂಡಿ ಎಇಇ ಶಾಂತಾ, ಮುಖಂಡ ಶ್ರೀನಿವಾಸ್, ಸೈಯದ್, ಇರ್ಷದ್, ಮರಿಸ್ವಾಮಿ, ಬಡಾವಣೆಯ ನಿವಾಸಿಗಳು ಇದ್ದರು.

ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಕಾಲೇಜುಗಳಿಗೆ ಪ್ರಥಮ ಪಿಯುಸಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಆ.20– ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಹೊಸದಾಗಿ 2025–26ನೇ ಶೈಕ್ಷಣಿಕ ಸಾಲಿಗೆ ಜಿಲ್ಲೆಗೆ ಮಂಜೂರಾಗಿರುವ ವಸತಿ ವಿಜ್ಞಾನ ಕಾಲೇಜುಗಳಿಗೆ ಪ್ರಥಮ ಪಿಯುಸಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿಯ ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಕಾಲೇಜು ಹಾಗೂ ಕೊಳ್ಳೇಗಾಲ ತಾಲೂಕಿನ ತಿಮ್ಮರಾಜಿಪುರ ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಕಾಲೇಜಿನಲ್ಲಿ ಪ್ರಥಮ ಪಿಸಿಎಂಬಿ ವಿಷಯಗಳು ಲಭ್ಯವಿರುತ್ತದೆ.

ದಾಖಲಾತಿ, ವಸತಿ ವ್ಯವಸ್ಥೆ ಸಂಪೂರ್ಣ ಉಚಿತವಾಗಿರುತ್ತದೆ. ಈಗಾಗಲೇ ಪ್ರಥಮ ಪಿಯುಸಿಗೆ ಬೇರೆ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದರೂ ಸಹ ಯಾವುದೇ ಶುಲ್ಕವಿಲ್ಲದೇ ವಸತಿ ಶಾಲೆಗೆ ಪ್ರವೇಶ ಪಡೆಯಬಹುದಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 25 ಕೊನೆಯ ದಿನವಾಗಿದೆ.

ಆಸಕ್ತ ವಿದ್ಯಾರ್ಥಿಗಳು ತೆರಕಣಾಂಬಿಯ ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಕಾಲೇಜು ಮೊ.ಸಂ.9945374405 ಹಾಗೂ ತಿಮ್ಮರಾಜಿಪುರ ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಕಾಲೇಜು ಮೊ.ಸಂ.9741366336 ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂಚರಾ ನಿಧನ



ಚಾಮರಾಜನಗರ, ಆ.20– ಚಾಮರಾಜನಗರ ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಪುತ್ರಿ ಇಂಚರಾ(17) ಬುಧವಾರ ರಾತ್ರಿ ನಿಧನರಾಗಿದ್ದಾರೆ. ಉಸಿರಾಟದ ತೊಂದರೆಯಿಂದ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಆಕೆ ಚಿಕಿತ್ಸೆ ಫಲಕಾರಿಯಾಗದೇ ನಿಧನರಾಗಿದ್ದು, ತಂದೆ–ತಾಯಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ನಾಳೆ (ಆ.21) ಮಧ್ಯಾಹ್ನ 3 ಗಂಟೆಗೆ ಉಮ್ಮತ್ತೂರಿನ ಇಂದುಶೇಖರ್ ಅವರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜೀವ್‌ಗಾಂಧಿ, ದೇವರಾಜ ಅರಸು ಜನ್ಮದಿನ ಆಚರಣೆ

ಚಾಮರಾಜನಗರ, ಆ.20– ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯದಲ್ಲಿ ರಾಜೀವ್ ಗಾಂಧಿ ಹಾಗೂ ದಿವಂಗತ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಜನ್ಮದಿನವನ್ನು ಆಚರಿಸಲಾಯಿತು,

ಜಿಲ್ಲಾ ಕಾಂಗೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಅವರು ಇಬ್ಬರು ಮಹನೀಯರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ನಂತರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ರಾಜೀವ್‌ಗಾಂಧಿ ಹಾಗೂ ದೇವರಾಜ ಅರಸುರವರು ರಾಜ್ಯಕ್ಕೆ ಹಲವಾರು ಕೊಡುಗೆಗಳನ್ನು ನೀಡಿದ್ದಾರೆ. ದಿವಂಗತ ದೇವರಾಜ ಅರಸುರವರು ಇಡೀ ದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ 20 ಅಂಶ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದರು. ಸತತವಾಗಿ ಕರ್ನಾಟಕ ರಾಜ್ಯದಲ್ಲಿ 8 ವರ್ಷಗಳ ಕಾಲ ಸುಧೀರ್ಘವಾಗಿ ಉತ್ತಮ ಆಡಳಿತ ನಡೆಸಿದ್ದರು, ಬಡ ರೈತಕುಟುಂಬದಲ್ಲಿ ಜನಿಸಿದ ಅವರು ಕಷ್ಟಪಟ್ಟು ಓದಿ ಮುಂದೆ ಬಂದರು. ಅರಸು ಅವರ ಮನಸ್ಸು ವಿಶಾಲವಾಗಿದ್ದು ಅಲ್ಪಸಂಖ್ಯಾತರು ಪರಿಶಿಷ್ಟರು ಹಿಂದುಳಿದ ವರ್ಗಗಳು ಮತ್ತು ಶೋಷಿತರಿಗೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ನೆಲೆ ಕಲ್ಪಿಸಲು ಬದ್ರ ಬುನಾದಿ ಹಾಕಿದ ಕೀರ್ತಿ ಅವರಿಗೆ ಸಲುತ್ತದೆ ಎಂದರು.


ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯದಲ್ಲಿ ರಾಜೀವ್‌ಗಾಂಧಿ ಹಾಗೂ ದಿವಂಗತ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ರಾಜೀವ್‌ಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಾಗ ತಂತ್ರಜ್ಞಾನಕ್ಕೆ ಹೆಚ್ಚು ಒತ್ತು ನೀಡಿದ್ದರು. ಯುವಕರಿಗೆ ಮತದಾನದ ಹಕ್ಕು ಕೊಟ್ಟಂತಹವರು ಇವರು, ಇಂತಹ ಮಹಾನ್ ವ್ಯಕ್ತಿಗಳ ಜೀವನ ಆದರ್ಶಗಳನ್ನು ಮೈಗೂಡಿಸಿಕೊಂಡು ಪಕ್ಷವನ್ನು ಬಲಪಡಿಸಲು ಶ್ರಮಿಸಬೇಕುಎಂದು ಸಲಹೆ ನೀಡಿದರು,

ಚೂಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಜಿಲ್ಲಾ ಕಾಂಗ್ರೆಸ್ ಪ್ರದಾನ ಕಾರ್ಯದರ್ಶಿ ಚಿಕ್ಕ ಮಹದೇವ್, ಗ್ರಾಮಾಂತರ ಬ್ಲಾಕ್ ಅಧ್ಯಕ್ಷ ಎಎಸ್ ಗುರುಸ್ವಾಮಿ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನಾಗರತ್ನ, ನಗರಸಭಾ ಸದಸ್ಯರಾದ ಚಿನ್ನಮ್ಮ ಸ್ವಾಮಿ, ಚೂಡಾ ಸದಸ್ಯ ಪುಟ್ಟಸ್ವಾಮಿ, ಟೌನ್ ಬ್ಲಾಕ್ ಅಧ್ಯಕ್ಷೆ ನಾಗಶ್ರೀ, ಗ್ರಾಪಂ ಅಧ್ಯಕ್ಷ ರೂಪೇಶ್, ಮರಿಯಾದಹುಂಡಿ ಕುಮಾರ್, ನಾಗೇಂದ್ರ, ಮಲ್ಲಿಕಾರ್ಜುನ, ಮೋಹನ್ ನಾಗು, ಸೇವಾದಳದ ಅಧ್ಯಕ್ಷ ಜಯರಾಜ್, ಎಪಿಎಂಸಿ ಅಧ್ಯಕ್ಷ ಸೋಮೇಶ್, ಕಾಗಲವಾಡಿ ಚಂದ್ರು, ಜಿ.ಡಿ.ಪ್ರಕಾಶ್ ನಾಗಯ್ಯ ನಾಗವಳ್ಳಿ, ಚೂಡಾ ಮಾಜಿಅಧ್ಯಕ್ಷ ಸುಹೇಲ್ ಆಲಿಖಾನ್, ಗ್ರಾಮಾಂತರ ಯುವ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್, ಮಾಧು, ಅಫ್ಸರ್ ಅಹಮದ್, ಹಿಂದುಳಿದವರ್ಗಗಳ ಕಾಂಗ್ರೆಸ್ ಸಮಿತಿ ವಿಭಾಗದ ಜಿಲ್ಲಾಧ್ಯಕ್ಷ ಚೇತನ್ ಕುಮಾರ್, ಯಳಂದೂರುಸಿದ್ದರಾಜು, ಕೆಸಿ ರೇವಣ್ಣ, ಕಾರ್ಯಕರ್ತರು ಹಾಜರಿದ್ದರು.

ಮೊಬೈಲ್ ಹಾವಳಿಯಿಂದ ಛಾಯಾಗ್ರಹಣ ಕಣ್ಮರೆ

ಚಾಮರಾಜನಗರ, ಆ.20–ಛಾಯಾಗ್ರಹಣಕ್ಕೆ ಬಹಳ ವರ್ಷಗಳ ಇತಿಹಾಸವಿದೆ. ಕತ್ತಲು ಬೆಳಕಿನ ನಡುವೆ ಪ್ರಾರಂಭವಾದ ಛಾಯಾಗ್ರಹಣದಿಂದ ಹಲವಾರು ಪ್ರತಿಭೆಗಳು ಹೊರಹೊಮ್ಮಲು ಸಾಧ್ಯವಾಗಿದೆ ಎಂದು ಹಿರಿಯ ಛಾಯಾಗ್ರಾಹಕ ಹಾಗೂ ಸಂಘದ ಮಾಜಿ (ಕೆಪಿಎ) ಅಧ್ಯಕ್ಷ ಗಣೇಶ್ ದೀಕ್ಷಿತ್ ತಿಳಿಸಿದರು.

ನಗರದ ಜೋಡಿರಸ್ತೆಯಲ್ಲಿ ಇರುವ ಖಾಸಗಿ ಸಭಾಂಗಣದಲ್ಲಿ ಚಾಮರಾಜನಗರ ತಾಲೂಕು ಫೋಟೋಗ್ರಾಫರ್ ಮತ್ತು ವಿಡಿಯೋ ಗ್ರಾಫರ್ ಸಂಘದ ವತಿಯಿಂದ ನಡೆದ 186ನೇ ಛಾಯಾಗ್ರಹಣ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶ–ವಿದೇಶದಲ್ಲೂ ಛಾಯಾಗ್ರಹಣವನ್ನು ಪ್ರತಿಯೊಬ್ಬರೂ ಪ್ರೀತಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಮೊಬೈಲ್ ಪೋಟೋಗಳ ಹಾವಳಿಯಿಂದ ಛಾಯಾಗ್ರಹಣ ಕೆಲವು ಗ್ರಾಮಗಳಲ್ಲಿ ಕಣ್ಮರೆಯಾಗುತ್ತಿದೆ. ಸರ್ಕಾರಿ ಕಛೇರಿಗಳಲ್ಲೂ ಮೊಬೈಲ್ ಪೋಟೋಗಳನ್ನು ತೆಗೆದು ತೋರಿಸುವುದಕ್ಕೆ ಸರ್ಕಾರ ಕಡಿವಾಣ ಹಾಕಬೇಕಿದೆ. ಛಾಯಾಗ್ರಹಕ ಕುಟುಂಬವನ್ನು ನಡೆಸುವುದೇ ಕಷ್ಟವಾಗಿದೆ ಎಂದು ಹೇಳಿದರು.


ಹಿರಿಯ ಛಾಯಾಗ್ರಹಕ ಗಣೇಶ್ ದೀಕ್ಷಿತ್ ಕಾರ್ಯಕ್ರಮ ಉದ್ಘಾಟಿಸುತ್ತಿರುವುದು.

ಛಾಯಾಗ್ರಾಹಕರಿಗೆ ಕಾರ್ಮಿಕ ಇಲಾಖೆಯಿಂದ ಛಾಯಾಗ್ರಹಕ ಸದಸ್ಯರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಿದ ಜಿಲ್ಲಾ ಕಾರ್ಮಿಕ ಅಧಿಕಾರಿ ರಾಮಚಂದ್ರಯ್ಯ ಮಾತನಾಡಿ ಪ್ರತಿಯೊಬ್ಬರೂ ದುಡಿದು ಕೆಲಸ ಮಾಡುವವನು ಕಾರ್ಮಿಕನೇ ರಾಜ್ಯ ಸರ್ಕಾರ ಛಾಯಾಗ್ರಹಕರನ್ನು ಕಾರ್ಮಿಕ ಎಂದು ಗುರುತಿಸಿದೆ. ಸರ್ಕಾರದ ಸೌಲಭ್ಯಗಳ ಸ್ಮಾರ್ಟ್‌ಕಾರ್ಡ್ ಇರುವವರಿಗೆ ಅನುಕೂಲವಾಗುತ್ತದೆ. ಇಲಾಖೆಯ ನಿಯಮದ ಪ್ರಕಾರ ದಾಖಲೆ ಇರಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗೌರವ ಅಧ್ಯಕ್ಷ ಅನಂತ ನಾರಾಯಣ, ಜಿಲ್ಲಾಧ್ಯಕ್ಷ ಮಂಜೇಶ್, ಜಿಲ್ಲಾ ಕಾರ್ಯದರ್ಶಿ ಪ್ರವೀಣ್, ತಾಲೂಕು ಅಧ್ಯಕ್ಷರು ಕುಮಾರ್ ಕೆಎಂ (ಕಂಠಿ), ಉಪಾಧ್ಯಕ್ಷ ಶಿವಪ್ಪ ಜಿ,ತಾಲೂಕು ಕಾರ್ಯದರ್ಶಿ ಲೋಕೇಶ್ ಗಾಳಿಪುರ, ತಾಲೂಕು ಖಜಾಂಚಿ ಪ್ರದೀಪ್, ಮಾಜಿ ತಾಲೂಕು ಅಧ್ಯಕ್ಷರು ಸ್ವಾಮಿ.ಡಿ, ಮಾಜಿ ತಾಲೂಕು ಅಧ್ಯಕ್ಷರು ಎಮ್.ಸಿ.ನಾಗರಾಜು, ಹರದನಹಳ್ಳಿ ಕುಮಾರ್, ಸಂತೋಷ್ ಕುಮಾರ್ ಸಿಜಿ, ಬಾಲರಾಜು, ರಾಜ್ ಹೊಸೂರು, ಹಾಗೂ ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ನಾಗೇಂದ್ರ ಮತ್ತು ಕಾರ್ಯದರ್ಶಿ ಸುರೇಶ್, ಚಾಮರಾಜನಗರ ತಾಲೂಕು ಫೋಟೋಗ್ರಾಫರ್ ಮತ್ತು ವಿಡಿಯೋಗ್ರಾಫರ್ ಸಂಘದ ಕಮಿಟಿ ಪದಾ ಧಿಕಾರಿಗಳು ಮತ್ತು ಕಮಿಟಿ ಸದಸ್ಯರು ಮತ್ತು ಸಂಘದ ಸರ್ವಸದಸ್ಯರು ಇದ್ದರು.

ನಾಳೆ ನಗರದಲ್ಲಿ ನುಲಿಯ ಚಂದಯ್ಯ ಜಯಂತಿ

ಚಾಮರಾಜನಗರ, ಆ.20– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶ್ರೀ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮವನ್ನು ಆ.22 ರಂದು ಬೆಳಿಗ್ಗೆ 11 ಗಂಟೆಗೆ ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಎಂ.ಎಸ್.ಐ.ಎಲ್. ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ಘನ ಉಪಸ್ಥಿತಿ ವಹಿಸುವರು.

ಡಾ.ಸುಧಾಮೂರ್ತಿ ಕನ್ನಡದ ಅಸಾಮಾನ್ಯ ಸಾಧಕರು

ಚಾಮರಾಜನಗರ: ಕನ್ನಡದ ಹೆಮ್ಮೆಯ ಸಾಹಿತಿ, ಶ್ರೇಷ್ಠ ಕನ್ನಡತಿ ಡಾ. ಸುಧಾಮೂರ್ತಿ ಕನ್ನಡದ ಅಸಾಮಾನ್ಯ ಸಾಧಕರು. ಕನ್ನಡ ಇಂಗ್ಲಿಷ್, ಮರಾಠಿ, ಭಾಷೆಯ ಲೇಖಕರಾಗಿ, ಸಮಾಜ ಸೇವಕರಾಗಿ ಸೇವೆ ಸಲ್ಲಿಸುತ್ತಿರುವ ಸುಧಾ ಮೂರ್ತಿ ಕನ್ನಡಿಗರ ಶ್ರೇಷ್ಠ ಚಿಂತಕರು, ಸರಳ ಸಜ್ಜನರಾಗಿದ್ದಾರೆ ಎಂದು ಸಂಸ್ಕೃತಿ ಚಿಂತಕ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸುರೇಶ್ ಎನ್.ಋಗ್ವೇದಿ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಡಾ. ಸುಧಾ ಮೂರ್ತಿ ಅವರ ಸಾಹಿತ್ಯ ಕೊಡುಗೆಗಳು ಹಾಗೂ ಸಮಾಜ ಸೇವೆಯ ಮಹತ್ವ ಕುರಿತು ಮಾತನಾಡುತ್ತ, ಸುಧಾ ಮೂರ್ತಿ ಅವರು ಸುಮಾರು 19ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಅವರ ಕಥೆ,ಕಾದಂಬರಿ, ಚಿಂತನೆ ಹಾಗೂ ಮಕ್ಕಳ ಸರಣಿಯ ಪುಸ್ತಕಗಳು ವಿಶ್ವ ಪ್ರಸಿದ್ಧಿಯಾಗಿದೆ. ನುಡಿದಂತೆ ನಡೆಯುವ ಆದರ್ಶ ಸರಳ ಬದುಕಿನ ಸುಧಾ ಮೂರ್ತಿಯವರು ಕನ್ನಡ ನಾಡಿನ ಹೆಮ್ಮೆಯ ತಾಯಿ ಎಂದರು.

ನನ್ನ ಅಜ್ಜಿಗೆ ನಾನು ಹೇಗೆ ಓದಲು ಕಲಿಸಿದೆ ಮತ್ತು ಇತರ ಕಥೆಗಳು 15 ಭಾಷೆಗೆ ಭಾಷಾಂತರಗೊಂಡಿದೆ. ಅವಿಭಕ್ತ ಕುಟುಂಬದಲ್ಲಿ ಅಜ್ಜಿಯ ಪಾತ್ರ ಕುಟುಂಬ ನಿರ್ವಹಣೆ, ಅಜ್ಜಿಯ ಪ್ರೀತಿ, ಕರುಣೆ, ವಿಶ್ವಾಸ, ನಂಬಿಕೆ, ಧೈರ್ಯ ಎಲ್ಲವನ್ನು ಅರ್ಥಗರ್ಭಿತವಾಗಿ ತಿಳಿಸಿ ಸಮಾಜಕ್ಕೆ ಕುಟುಂಬ ಪ್ರಜ್ಞೆಯನ್ನು ಹೆಚ್ಚಿಸಿರುವ ಸುಧಾ ಮೂರ್ತಿಯವರ ಹಕ್ಕಿಯ ತೆರದಲ್ಲಿ, ಶಾಲಾ ಮಕ್ಕಳಿಗಾಗಿ ಕಂಪ್ಯೂಟರ್, ಕಾವೇರಿಯಿಂದ ಮೇ ಕಾಂಗಿಗೆ, ಡಾಲರ್ ಸೊಸೆ, ಋಣ, ಮಹಾಶ್ವೇತೆ,ಮನದ ಮಾತು, ಗುಟ್ಟೊಂದು ಹೇಳುವೆ ಮುಂತಾದ ಪುಸ್ತಕಗಳು ಜನಪ್ರಿಯವಾಗಿವೆ ಎಂದರು.

ಇವರ ಸೇವೆಯನ್ನು ಪರಿಗಣಿಸಿ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿಯನ್ನು, ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು, ವಿವಿಧ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ ಅಪಾರ ಜ್ಞಾನಿಗಳಾಗಿ, ಸರಳ ಸಜ್ಜನ ಬದುಕನ್ನು ನಡೆಸುತ್ತಿರುವ ಸುಧಾ ಮೂರ್ತಿ ನಮ್ಮೆಲ್ಲರ ಹೆಮ್ಮೆ ಎಂದು ಋಗ್ವೇದಿ ತಿಳಿಸಿದರು. ಹಿರಿಯ ಕನ್ನಡ ಚಳುವಳಿಗಾರ ರಾಜಗೋಪಾಲ್ ರವರು ಸುಧಾ ಮೂರ್ತಿ ಅವರ ಜನ್ಮದಿನದ ಅಂಗವಾಗಿ ಸಿಹಿ ಹಂಚಿ ಪುಸ್ತಕಗಳನ್ನು ನೀಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ರವಿಚಂದ್ರಪ್ರಸಾದ್, ಬಿಕೆ ಆರಾಧ್ಯ, ಸರಸ್ವತಿ, ಶಿವಲಿಂಗ ಮೂರ್ತಿ, ಪಣ್ಯದ ಹುಂಡಿ ರಾಜು, ಮಹೇಶ್ ಗೌಡ, ಸುರೇಶ್ ಗೌಡ, ಮನೋಜ್, ಕುಮಾರ್ ಇದ್ದರು.



ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

URGENT SALE
BVL PREMIO ESTATES
30*50 & 40*50
CORNERS / EAST FACING
STARTS FROM ₹3299/SFT
7892328320

BUILDING FOR RENT
Suitable for PG / hostel 24 rooms Near to Sharadadevi Nagar
Mob: 9620461052

Job Vacancy in Mysore
S.K. TILES PALACE
Tiles & Hardware showroom
Vishweshwara Nagar, Mysore.
Telecalling for female
Sales Executive for male
9972156256, 9620967801
Fresher & experience can apply

ಸೈಟುಗಳು ಮಾರಾಟಕ್ಕಿವೆ
30x40 E/F, JSS 3ನೇ ಹಂತ/ JSS ಯೂನಿವರ್ಸಿಟಿ ಹತ್ತಿರ/ ವರುಣ ಸರ್ಕಲ್, ಟಿ. ನರಸೀಪುರ ರಸ್ತೆ.
Mob: 9686071750

SITE FOR SALE
15 ಮೀಟರ್ (ಪೂ.ಪ) x 8.50 ಮೀಟರ್ (ಉ.ದ), East face. ಬೆಳವಾಡಿ (Near Vijayanagar 4th Stage). Price: 44 Lakhs (Negotiable).
Mob: 8105506211

ಬೇಕಾಗಿದ್ದಾರೆ
ಮೊಬೈಲ್ ಫೋನ್ ಶೋರೂಮ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ.
ಪಾರ್ಟ್ ಟೈಂ/ ಫುಲ್ ಟೈಂ
ಸಂಪರ್ಕಿಸಿ
9886409722

ಉದ್ಯೋಗವಕಾಶ
ಮೈಸೂರಿನಲ್ಲಿ ನೂತನವಾಗಿ ಆರಂಭವಾಗಿರುವ A.W.G. ಕಂಪನಿಗೆ SSLC, PUC, ITI, Dip., any Degree etc. ಆದಂತಹ 219 ಅಭ್ಯರ್ಥಿಗಳನ್ನು ನೇರ ಸಂದರ್ಶನದೊಂದಿಗೆ ನೇರ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ವಯೋಮಿತಿ: 18–31 ವರ್ಷ. ತಿಂಗಳಿಗೆ 21000 ರಿಂದ 27000. (ಉಚಿತ ಊಟ + ವಸತಿ + promotion). ಕನ್ನಡ ಬಲ್ಲವರಿಗೆ ಹೆಚ್ಚಿನ ಆದ್ಯತೆ. ಸ್ವಾತಿಗೌಡ
7406821955, 7349699460

ವೃದ್ಧಾಶ್ರಮ
ನಿಮ್ಮ ವಯಸ್ಸಾದ ಅಥವಾ ಹಾಸಿಗೆ ಹಿಡಿದ ವೃದ್ಧರನ್ನು ಇರಿಸಲು ಸುಸಜ್ಜಿತವಾದ ವೃದ್ಧಾಶ್ರಮ, ಮೆಡಿಕಲ್ ಸೌಲಭ್ಯ, ಶುದ್ಧ ಆಹಾರ, 24 ಗಂಟೆ ಬಿಸಿ ನೀರು, ಪ್ರತಿ ಜಾಗದಲ್ಲಿಯೂ ಸಿಸಿಟಿವಿ ಮತ್ತು ನಡೆದಾಡಲು ವಿಶಾಲವಾದ ಸ್ಥಳ.
ಸ್ಥಳ: ನಾಯ್ಡು ನಗರ, ಮೈಸೂರು
9916905188

Villa Plots FOR SALE
30x40,30x50,40x60
28 Acres Project,MUDA App
1 Kms from Adithya Circle, Dattagalli, Kergalli,Mysore
8660105902

HOUSE FOR SALE
20X30 South Face, Ground + First Floor, MANASI NAGARA, Agent Excuse
9108416410

RAI ESTATES
RERA APPROVED · MUDA APPROVED · E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ಬೇಕಾಗಿದ್ದಾರೆ
ಆಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡುವಂಥವರು , ಮಹಿಳೆಯರು ಬೇಕಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಫೇಲ್ /ಪಾಸ್ ಊಟ ವಸತಿ ದೊರೆಯುತ್ತದೆ
9110455297

ಬೇಕಾಗಿದ್ದಾರೆ
ಗ್ರಾಫಿಕ್ ಡಿಸೈನರ್
(Experienced in Corel Draw)
ಸೈನೇಜ್ ಬೋರ್ಡ್ ಮೇಕರ್
Minimum 3 years of experience
ಡ್ರೈವರ್ ಕಮ್ ಹೆಲ್ಪರ್
ಗ್ಯಾಲಕ್ಸಿ ಆಡ್ಸ್, ಆರೋಮ ಬೇಕರಿ ಹತ್ತಿರ, ಬೋಗಾದಿ ರೋಡ್
M : 8105406141

WANTED
AVS School Jayapura, Mysore Taluk
Wanted
Head Master - 01
8147472526

40X40
S/E ಕಾರ್ನರ್ ಸೈಟು @ Rs. 42 Lakhs MUDA Approved Layout ಲಾಲ್ ಬಹದ್ದೂರ್ ಶಾಸ್ತ್ರಿ ನಗರದ ನಂತರ ಚಾಮುಂಡಿ ಬೆಟ್ಟದ ಹಿಂಭಾಗ.
9964923399

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೆ ನೀಡಲಾಗುತ್ತದೆ.
ಒಂದು ಗ್ರಾಂ– 9300(24CT)
9108146123

ಸೈಟ್ ಮಾರಾಟಕ್ಕಿದೆ
ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಪಶ್ಚಿಮ ಮುಖದ 40X60 ಸೈಟ್ ಮಾರಾಟಕ್ಕಿದೆ.
ಬೆಲೆ: ರೂ. 69 ಲಕ್ಷ
9448601655

30x40 ಅಳತೆಯ ನಿವೇಶನಗಳು ದೊರೆಯುತ್ತವೆ
ರಮಣಶ್ರೀ ಸೆರೇನ್ ವಸತಿ ಬಡಾವಣೆ (ವರುಣ)
ಟಿ.ನರಸೀಪುರ ರಸ್ತೆ, ಸುತ್ತೂರು ರಾಜ್ಯ ಹೆದ್ದಾರಿಯಲ್ಲಿ ನೋಂದಾವಣೆಗೆ ಮತ್ತು ಮನೆ ನಿರ್ಮಿಸಲು ಸಿದ್ಧವಿರುತ್ತದೆ, ಬ್ಯಾಂಕ್ ಸಾಲ ಸೌಲಭ್ಯವಿರುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
7411914135

Fund ಆರ್ಡರ್ ತೆಗೆದುಕೊಳ್ಳುತ್ತೇವೆ
ಹೋಲ್‌ಸೇಲ್ ದರಗಳಲ್ಲಿ Estimate ಸಹ ಕೊಡುತ್ತೇವೆ. ಉಚಿತ ಡೆಲಿವರಿ ಲಭ್ಯವಿದೆ.
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ನಜರ್‌ಬಾದ್
Mob: 9739816440

COFFEE ESTATE FOR SALE
20 Acres Coffee Estate is for Sale near kodagu suitable for resort
STRICTLY NO BROKERS
8792306996

ಮಾರಾಟಕ್ಕಿದೆ
ಚಾಲ್ತಿಯಲ್ಲಿರುವ ಪ್ರಿಂಟಿಂಗ್ ಪ್ರೆಸ್ಸಿನ ಕಟಿಂಗ್ ಮಿಷನ್ & ಫರ್ಫರೇಟಿಂಗ್ ಮಿಷನ್ ಮಾರಾಟಕ್ಕಿದೆ.
ಸಂಪರ್ಕಿಸಿ: ಶ್ರೀ ಲಕ್ಷ್ಮೀ ಪ್ರಿಂಟರ್ಸ್ ಚಾಮರಾಜನಗರ.
Mob: 9481437989

ಬೇಕಾಗಿದ್ದಾರೆ
ದೋಸೆ ಭಟ್ರು (Dosa Chef). ವಾಷಿಂಗ್ & ಕ್ಲೀನಿಂಗ್ -2nd Shift. ಕೌಂಟರ್ – ಫುಡ್ ಪಾರ್ಸೆಲ್ ಪ್ಯಾಕಿಂಗ್. ಸಪ್ಲೈಯರ್/ವೇಟರ್. ಸೌತ್ ಅಸಿಸ್ಟೆಂಟ್ (ಹೆಲ್ಪರ್). ಮೈಸೂರ್ ನಲ್ಲಿ ಕಾಳಿದಾಸ ರೋಡ್ –ಜಯಲಕ್ಷ್ಮೀಪುರಂನಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ – ಉತ್ತಮ ಕೆಲಸಗಾರರಿಗೆ ಅತ್ಯುತ್ತಮ ಸಂಬಳ, ವಸತಿ ಮತ್ತು ESI ಕೊಡಲಾಗುವುದು. ಸಂಪರ್ಕಿಸಿ:
Mob: 7899028086

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

SBIT ಟ್ರಾವೆಲ್ಸ್
ಶ್ರೀಲಂಕಾ ಪ್ರವಾಸ
4N-5D 2025
| ಆ: 31 | ಸೆ: 04 |
ವಿಮಾನ ಟಿಕೆಟ್‌ಗಳು | ಹೋಟೆಲ್ | ಊಟ | ಪ್ರವೇಶ ಟಿಕೆಟ್‌ಗಳು | ಎಲ್ಲಾ ಪ್ರವಾಸಗಳು
9343524127
(ಸರಸ್ವತಿಪುರಂ, ಮೈಸೂರು)

ಟೈಲರಿಂಗ್ ತರಬೇತಿ
Limited Offer - * Basic Tailoring * Advance Tailoring * Fashion Trendy Tailoring * Embroidery Works.
ತಕ್ಷಣ ಸಂಪರ್ಕಿಸಿ:
ಗಾನವಿ ಇಂಟರ್‌ನ್ಯಾಷನಲ್, ಮೈಸೂರು
9620636665, 9620476665
9620436665, 6360737581

HOUSE FOR SALE
New 3 BHK independent house, East face @ Lalithadri Nagar (South), near Ring Road, Behind Indian Oil Petrol Bunk.
9110696752 / 9663452259

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂಡಿತ್ ಎಸ್. ಮಣಿಕಂಠನ್
MOB: 9480743991
ಅಷ್ಟಮಂಗಳ ಪ್ರಶ್ನೆಯಿಂದ ವಿವಾಹ ದಾಂಪತ್ಯ, ಆರೋಗ್ಯ, ಸಾಲಬಾಧೆ, ಸ್ತ್ರೀ ಪುರುಷ ಪ್ರೇಮ, ಶತ್ರುಬಾಧೆ ಹಾಗೂ ಗುಪ್ತ ಸಮಸ್ಯೆಗಳಿಗೆ ಭಗವತಿ ಕುಟ್ಟಿಚೇತನ್ ದೈವ ಶಕ್ತಿಯಿಂದ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ, ಪುರಾತನ ತಾಳೆ ಗ್ರಂಥದ ಆಧಾರದ ಮೇಲೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
(ಖಾಯಂ ಮನೆ ವಿಳಾಸ ಅಶೋಕ ರಸ್ತೆ, ಈಸ್ಟ್ ಕ್ರಾಸ್ 36, ಶುಭಂ ಜ್ಯುವೆಲರಿ ಎದುರು, ಮೈಸೂರು)

ಮನೆ ಭೋಗ್ಯಕ್ಕೆ ಇದೆ
20x30
ಜೋಡಿ ಬೇವಿನಮರದ ಹತ್ತಿರ ದಟ್ಟಗಳ್ಳಿ, ಸಂಪರ್ಕಿಸಿ:
Mob: 9900504362

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

WANTED
ACCOUNTANT
Tally Work Experience (Female)
TRAVEL INDIA EXPLORE
Kalidasa Road, Vontikoppal Mysore
Call 98446 50002
98445 96495

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WANTED
DTP Operator
Office Boy
Vignesh Graphics
Shivarampet, Mysuru
96322 22285

Solar Water Heaters


SUNZONE SOLAR SYSTEM
VM Double Road, Kuvempunagar, Mysuru
9845175443

WANTED
ಫರ್ನಿಷಿಂಗ್ ಅಂಗಡಿಯಲ್ಲಿ
TELECALLER WORK
ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷೆ ಮಾತಾಡಬೇಕು
1 Year Experience ಇರುವವರು ಬೇಕಾಗಿದ್ದಾರೆ Near Ashoka Road
Ph: 9916514950

ಮನೆ ಮಾರಾಟ / ಭೋಗ್ಯಕ್ಕೆ
ಸೌತ್ ಈಸ್ಟ್ ಡೋರ್ 30x40 ಗ್ರೌಂಡ್ ಫ್ಲೋರ್ ಮತ್ತು 1st, 2nd ಡ್ಯೂಪ್ಲೆಕ್ಸ್, D ಬ್ಲಾಕ್, JP ನಗರ, ಮೈಸೂರು–08
Mob: 9632023090

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS Factory ಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು. ವಯೋಮಿತಿ: 50 ವರ್ಷದೊಳಗೆ. ಸಂಬಳ: 18,500, 8 hrs, 26 days. ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9620777819 / 9620667819

ಕರ್ನಾಟಕ ರಾಜ್ಯ ಅಭಿವೃದ್ಧಿ ಪರಿಷತ್ತು
ಕಾಶಿ, ಅಯೋಧ್ಯೆ, ಪ್ರಯಾಗ್‌ರಾಜ್ ಪುಣ್ಯ ಯಾತ್ರೆ, ರೂ. 7000 ಗಳು ಮಾತ್ರ, ರೂ. 5000 ಸರ್ಕಾರ ಸಬ್ಸಿಡಿ ಪಡೆಯಲು ಅವಕಾಶವಿರುತ್ತದೆ.
9964683183 / 8147823336

ತಕ್ಷಣ ಬೇಕಾಗಿದ್ದಾರೆ
(J.K. Tyre) ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (SSLC pass). Age limit: 18–40. ಸಂಬಳ: 15,000. ಸೌಲಭ್ಯತೆ: ESI, PF, Canteen ಸೌಲಭ್ಯವಿರುತ್ತದೆ.
Contact: 6362491336
7019380847 / 9611601179

WANTED
Office Staff
Qualification: Any Degree
Skills: Basic Computer, M.S. Office.
Good communication.
WhatsApp your resume:
7204959799 / 7204932991

ಕೃಷಿ ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು ಜಯಪುರ ಹೋಬಳಿ, ಮಂಡೇನಹಳ್ಳಿಯಲ್ಲಿ ಮೈಸೂರಿನಿಂದ 24 ಕಿ.ಮೀ, ಹೈವೇಯಿಂದ 300 ಮೀಟರ್‌ನಲ್ಲಿ 1 ಎಕರೆ, 30 ಗುಂಟೆ, ಗೇಟ್, ಬೇಲಿ ಹಾಕಿರುವ ಜಮೀನು ಮಾರಾಟಕ್ಕಿದೆ. ಬೇಕಾದವರು ಸಂಪರ್ಕಿಸಿ: ಭೈರೇಗೌಡ
Mob: 9379633981

PRAKRUTHI PROPERTIES
FOR SALE
30x40@ 22 lakhs Near RT Nagar
BSNL Lyt Sites Also Avl.
Apartments @ Ramakrishna Nagar
Residential & Commercial Plots in & around Mysore
20x30 New 2BHK House, As Per your Plan With Interiors @ Just 42 Lakh in Bogadi
95386 90359, 90359 90359

ಆಲ್ಟ್ರೇಷನ್ ಟೈಲರ್
ಅಜಿಲಸ್ ಲ್ಯಾಬ್ ಪಕ್ಕ, ಇರ್ವಿನ್ ರಸ್ತೆ ಮೈಸೂರು
ಪುರುಷರ, ಮಹಿಳೆಯರ ಬಟ್ಟೆಗಳನ್ನು ರಿಪೇರಿ ಮಾಡಿಕೊಡುತ್ತೇವೆ.
ನೀವು ನಮ್ಮಲ್ಲಿಗೆ ಬರಲು ಆಗದಿದ್ದಲ್ಲಿ, ನಾವೇ ಸಮಯ ಹೊಂದಿಸಿ ನಿಮ್ಮ ಜಾಗಕ್ಕೆ ಬಂದು ಆರ್ಡರ್ ತೆಗೆದುಕೊಳ್ಳುತ್ತೇವೆ.
9880496212 / 9591614440

ಋಷಿ ಸಂಸ್ಕೃತಿ ವಿದ್ಯಾ ಕೇಂದ್ರ (ರಿ)
ಮೈಸೂರು
ಬೇಕಾಗಿದ್ದಾರೆ
ಮೈಸೂರು ನಗರ ಕುವೆಂಪುನಗರದಲ್ಲಿರುವ ಕೇಂದ್ರಕ್ಕೆ, ವಾಚ್‌ಮೆನ್ / ಕೇರ್‌ಟೇಕರ್ ಬೇಕಾಗಿದ್ದಾರೆ. ವಯೋಮಿತಿ: 30–35 ವಿದ್ಯಾರ್ಹತೆ: SSLC or PUC. ವಸತಿ ಸೌಕರ್ಯವಿದೆ.
Mob: 9448458050

ಬಸವ ಮಾರ್ಗ ಫೌಂಡೇಷನ್ (ರಿ)
ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಉಚಿತ ವಸತಿ ನಿಲಯ ಅವಕಾಶ.
Mob: 9606051232

ಬಸವ ಮಾರ್ಗ ವ್ಯಸನಮುಕ್ತ ಕೇಂದ್ರ (ರಿ)
54ನೇ ಉಚಿತ ಕುಡಿತ ಬಿಡಿಸುವ ಶಿಬಿರ.
ಸೆಪ್ಟೆಂಬರ್ 7 ರಿಂದ 16ರ ವರೆಗೆ.
8803344999
9742559999

ಬಾತ್ ರೂಂ ಲೀಕೇಜ್, ಸಂಪು ಲೀಕೇಜ್ ಸರಿಪಡಿಸಲಾಗುವುದು ಮತ್ತು ತಿಗಣೆ ಔಷಧಿ ಹೊಡಿಯಲಾಗುವುದು.
Mob: 9591830124

ಸೈಟು ಮಾರಾಟಕ್ಕಿದೆ
ಎ.ಪಿ.ಎಂ.ಸಿ. ಬಂಡಿಪಾಳ್ಯ, ನಂಜನಗೂಡು ರಸ್ತೆ, 30 X 40 ಸೈಟ್, ದಕ್ಷಿಣ ದಿಕ್ಕು, 60 ಅಡಿ ರಸ್ತೆ, 38 ಲಕ್ಷ.
Mob: 8762705887
Mysore

ITI ಗೆ ಪ್ರವೇಶಾವಕಾಶ
ITI (Fitter-NSQF) ವೃತ್ತಿಪರ SSLC / PUC, Pass / Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. N.C.V.T. ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
Also Admission for Nursery, LKG & UKG
Benaka ITI College
Near Cauvery Circle, Dr. Rajkumar Road, Raghavendra Nagar, Mysore.
9342123467 / 9141756695

ತೇಜಸ್ವಿನಿ ಟೂರಿಸ್ಟ್
28–8–2025 ರಿಂದ 18 ದಿನ ರೈಲು 14 ದಿನ ವಿಮಾನ, 4 ಜ್ಯೋತಿರ್ಲಿಂಗ, ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನ ಒಟ್ಟು 20 ಸ್ಥಳಗಳು. 5 ಸೀಟ್ ಮಾತ್ರ ಬಾಕಿ ಇದೆ.
23–9–2025, 12 ದಿನ ದೆಹಲಿ, ಹರಿದ್ವಾರ, ಋಷಿಕೇಶ, ಕಾಶಿ, ಅಯೋಧ್ಯೆ, ಪ್ರಯಾಗ್‌ರಾಜ್, ಇತ್ಯಾದಿ.
9379792644

SITE FOR SALE
Rajeshwari Aadya Griham 30x40 East face MUDA Approved & MCC katha, near Ramakrishnanagar 'I' Block, Contact:
Mob: 9538630129

HOTEL, GROCERY SHOP, AGARBATHI MANUFACTURING IS FOR SALE.
Mob: 9008372915

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಹಂಪಾಪುರ ಹೋಬಳಿ ಹಾಗೂ ಹುಲ್ಲಹಳ್ಳಿ ಹೋಬಳಿ ಹಾಗೂ ಗದ್ದಿಗೆ ಮುಖ್ಯ ರಸ್ತೆಯಲ್ಲಿ 9 ಗುಂಟೆ, 12 ಗುಂಟೆ, 18 ಗುಂಟೆ, 27 ಗುಂಟೆ, 36 ಗುಂಟೆ ಹಾಗೂ 1.4 ಗುಂಟೆ ಜಮೀನು ಅತಿ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿದೆ.
Mob: 9945661696

ತಕ್ಷಣ ಬೇಕಾಗಿದ್ದಾರೆ
ಕುವೆಂಪು ನಗರ ಏರಿಯಾದಲ್ಲಿ ಕೆಲಸ ಮಾಡಲು ಆಂಬ್ಯುಲೆನ್ಸ್ ಡ್ರೈವರ್‌ಗಳು ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು ವಯೋಮಿತಿ: 50 ವರ್ಷದೊಳಗೆ. ಸಂಬಳ: ಡ್ರೈವರ್ – 19500. ಸೆಕ್ಯೂರಿಟಿ ಸೂಪರ್‌ವೈಸರ್ –19,000. ಸೆಕ್ಯೂರಿಟಿ ಗಾರ್ಡ್– 18,000. ಊಟ, ತಿಂಡಿ ಸೌಲಭ್ಯವಿರುತ್ತದೆ.
9880727819 / 9620777819

ಮನೆ ಮಾರಾಟಕ್ಕಿದೆ
ನೆಲ ಮಹಡಿ 2 ಬಿಹೆಚ್‌ಕೆ
1ನೇ ಮಹಡಿ 1 ಬಿಹೆಚ್‌ಕೆ
ನಂ. 874, 7ನೇ ಕ್ರಾಸ್, E & F ಬ್ಲಾಕ್, ರಾಮಕೃಷ್ಣನಗರ, ಮೈಸೂರು. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
Mob: 8618144835

ಹೆಲ್ತ್‌ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲೋಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
Mob: 9916908454

ರೂಂಗಳು ಬಾಡಿಗೆಗೆ ಇದೆ
ಹಳೇ ಬೋಗಾದಿ
9980160399
9611539396

NEW GURUKULA INTERNATIONAL SCHOOL
Mahadeshwara Badavane
Wanted Teachers
Mob: 9741875540

ನಿವೇಶನ ಮಾರಾಟಕ್ಕಿದೆ
ಮೈಸೂರು ಸಿಟಿ, ರಿಂಗ್ ರಸ್ತೆ ಮಾನಂದವಾಡಿ – ಹೆಚ್.ಡಿ. ಕೋಟೆ ಸರ್ಕಲ್ ನಿಂದ ದಟ್ಟಗಳ್ಳಿ ಕಡೆಗೆ ಎಡಭಾಗದಲ್ಲಿ ಸುಮಾರು 500 ಮೀಟರ್ ದೂರದಲ್ಲಿರುವ ಅರ್ಪಣಾ ಹೌಸಿಂಗ್ ಸೊಸೈಟಿಗೆ ಸೇರಿದ ಉತ್ತರಾಭಿಮುಖವಾಗಿ 80 ಅಡಿ ರಸ್ತೆಯುಳ್ಳ 30x50 ಅಡಿ ಉಳ್ಳ 22ನೇ ನಂಬರ್ ನಿವೇಶನ. ಸಂಪರ್ಕಿಸಿ:
Mob: 9686379169

COMMERCIAL SITE FOR SALE
50x80 South, double main road, Vijayanagar 4th Stage, 2nd Phase.Buy & Sale more details contact:
Balaji Properties
Mob: 8904812796

CHANGE OF NAME
I, Shashikala B., residing at No. 2586, 5th Cross, K.G. Koppal, Mysore-570 009, do hereby state on oath as follows. I Shashikala B., hitherto known as Shashikala B, have changed my name and shall hereafter be known as Kala Mahesh. I declared this in front of Notary Ramadevi M. in Mysore.
Sd/- Kala Mahesh

WANTED
1) Housekeeping Supervisor - 02 Nos.
2) Houseman - 4 Nos.
3) Time Office Assistant - 01 No.
4) Waiters - 04 Nos. **Walk-in interview The Quorum Hotel**
#2257/1, Vinoba Road, Mysore-570 001. Contact:
9035062106 / 9620274630

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಪುರುಷರು ಅಥವಾ ಮಹಿಳೆಯರು ಅಡುಗೆ ಭಟ್ಟರು ಬೇಕಾಗಿದ್ದಾರೆ.
ಆಸಕ್ತಿಯುಳ್ಳವರು ಸಂಪರ್ಕಿಸಿ:
Mob: 9741862929

ಮನೆ ಭೋಗ್ಯಕ್ಕೆ ಬೇಕಾಗಿದೆ
2 BHK, ಪೂರ್ವ ದಿಕ್ಕು, ಸಂಜೀವಿನಿ ಸರ್ಕಲ್, ಲೋಕನಾಯಕ ನಗರ, ಬಸವನಗುಡಿ ಸರ್ಕಲ್, ಸುತ್ತ ಮುತ್ತ.
7899720535
7483998705

URGENTLY REQUIRED
03 BHK house for rent, East / North facing in and around, Ramakrishna Nagara, Srirampura, Vivekanandanagara, Dattagalli, Kuvempunagar, Saraswathipuram, Brokers Excuse.
Interested owners can contact @
9901241267 / 7975636575

ತಕ್ಷಣ ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು, ಅನುಭವವುಳ್ಳ ಅಕೌಂಟೆಂಟ್ ಮತ್ತು ಡ್ರೈವರ್ ಕಂ ಮಾರ್ಕೆಟಿಂಗ್ ಹಾಗೂ ಟೈಲರುಗಳು, ಹೆಲ್ಪರುಗಳು ಬೇಕಾಗಿದ್ದಾರೆ.
8105249880 / 7795285485

ಮಾರಾಟಕ್ಕಿದೆ
300 sq.ft. ರನ್ನಿಂಗ್, ಮೆನ್ಸ್ ಸಲೂನ್
ಬೋಗಾದಿ ರಿಂಗ್ ರೋಡ್.
Mob: 9845073374

ಸುವರ್ಣ ಯಾತ್ರ
ನೇಪಾಳ ಪ್ರವಾಸ 9 ದಿನಗಳು 11/9/25
ಚಾರ್ಧಾಮ್ ಯಾತ್ರ 13 ದಿನಗಳು 11/9/25
ಪುರಿ ಜಗನ್ನಾಥ ಪ್ರವಾಸ 29/8/25
ಗುಜರಾತ್ ಪ್ರವಾಸ 8 ದಿನಗಳು 5/9/25
ಶಿರಡಿ ಪ್ರವಾಸ 3 ದಿನಗಳು 29/8/25
9008381022 / 9019462508

ಬೇಕಾಗಿದ್ದಾರೆ
ಗೂಡ್ಸ್ ವಾಹನಕ್ಕೆ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 15,000 ರಿಂದ 25,000.
ವಸತಿ ಸೌಕರ್ಯವಿರುತ್ತದೆ.
Mob: 9741827359

DOCUMENT LOST
I, Ramesh C.S., R/at No. 590, 4/3rd Main Road, Ramakrishna Nagar, Mysuru-570 022, have lost all property documents of the above property & LIC Bond (721282808) and my son Visa Document. Finders pelase contact:
Mob: 8754517047

SITES FOR SALE
Near Roopa Nagar in Mysuru.
4 km from Bogadi Ring Road & Rajarajeshwari Nagar Ring Road, approved layout. Contact:
Mob: 8971918088

ಸೈಟು ಮಾರಾಟಕ್ಕಿದೆ
35x50, ದಕ್ಷಿಣ, 11B ಖಾತಾ, ಕೊಪ್ಪಲೂರು, ಜೆ.ಪಿ. ನಗರ ರಿಂಗ್ ರಸ್ತೆ ಹತ್ತಿರ ಹಾಗೂ 50x80, ಪೂರ್ವ, ನೃಪತುಂಗ ರಸ್ತೆ, ಕುವೆಂಪುನಗರ.
Mob: 9343361444

GO MYSORE HOLIDAYS
Luxury tourist bus available for family trips, corporate tours, wedding, college tours, package tours.
Sudhir Ganapathy
9036154301 / 9448738617

ತಕ್ಷಣ ಬೇಕಾಗಿದ್ದಾರೆ
(ನೈಟ್ ಶಿಫ್ಟ್ ಮಾತ್ರ)
ಹಳೇ RMC ಸರ್ಕಲ್, ಮೈಸೂರು.
ಪೆಟ್ರೋಲ್ ಬಂಕ್ ಕ್ಯಾಷಿಯರ್.
ವಯೋಮಿತಿ: 20 ರಿಂದ 40. ಪುರುಷರು.
9164777336 / 9902179776
ಮೈಸೂರು ಟೌನ್ ಅವರಿಗೆ ಮೊದಲ ಆದ್ಯತೆ.


ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಚುನಾಯಿತ ಜನಪ್ರತಿನಿಧಿಗಳಿಗೆ ದೇವರಾಜ ಅರಸು ಮಾದರಿ

ಕೆ.ಆರ್.ನಗರದಲ್ಲಿ ನಡೆದ ಅರಸು ಜಯಂತಿಯಲ್ಲಿ ಶಾಸಕ ಡಿ.ರವಿಶಂಕರ್

ಕೆ.ಆರ್.ನಗರ, ಆ.20– ಹಲವು ಪ್ರಥಮ ಮತ್ತು ಸಾಧನೆಗಳಿಗೆ ಕಾರಣರಾದ ಸಾಮಾಜಿಕ ಕ್ರಾಂತಿ ಹರಿಕಾರರೂ ಆದ ಹಿಂದುಳಿದ ವರ್ಗಗಳ ನೇತಾರ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ರಾಜಕೀಯ ನಾಯಕರು ಮತ್ತು ಚುನಾಯಿತ ಜನಪ್ರತಿನಿಧಿಗಳಿಗೆ ಮಾದರಿ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.



ಕಾರ್ಯಕ್ರಮದಲ್ಲಿ ಶಾಸಕ ಡಿ.ರವಿಶಂಕರ್, ಅರಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಪಟ್ಟಣದ ಆಡಳಿತಸೌಧದ ಕೃಷ್ಣರಾಜೇಂದ್ರ ಸಭಾಂಗಣದಲ್ಲಿ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕು ಆಡಳಿತ, ತಾಪಂ, ಪುರಸಭೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಅರಸು ಯುವಕರ ಸೇವಾಭಿವೃದ್ಧಿ ಸಂಘದ ಸಂಯುಕ್ತಾಶ್ರಯದಲ್ಲಿ ಬುಧವಾರ ನಡೆದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 110ನೇ ಜಯಂತಿಯಲ್ಲಿ ಅವರು ಮಾತನಾಡಿದರು.

ಶೋಷಿತರು ಮತ್ತು ದಮನಿತರ ಪರ ತಮ್ಮ ರಾಜಕೀಯ ಹಾಗೂ ಸಾರ್ವಜನಿಕ ಜೀವನದುದ್ದಕ್ಕೂ ಹೋರಾಟ ಮಾಡಿದ ಅವರು ಸಮಾಜದಲ್ಲಿ ನೊಂದ ಕಟ್ಟಕಡೆಯ ವ್ಯಕ್ತಿಯೂ ನೆಮ್ಮದಿಯಾಗಿ ಜೀವನ ನಡೆಸುವಂತಹ ಕಾರ್ಯಕ್ರಮಗಳನ್ನು ಜಾರಿಗೆ ತಂದ ಮಹಾನಾಯಕ ಎಂದು ಬಣ್ಣಿಸಿದರು.

ಆಡುಮುಟ್ಟದ ಸೊಪ್ಪಿಲ್ಲವೆಂಬಂತೆ ಅರಸರು ತಮ್ಮ ಅಧಿಕಾರಾವಧಿಯಲ್ಲಿ ಮಾಡದ ಜನಪರ ಕೆಲಸಗಳು ಇಲ್ಲ. ಇಂತಹ ಮಹಾನ್ ಪುರುಷ ನಮ್ಮ ಜಿಲ್ಲೆಯಲ್ಲಿ ಜನಿಸಿದ್ದು ನಮ್ಮೆಲ್ಲರ ಪುಣ್ಯ ವಿಶೇಷ ಎಂದು ಕೊಂಡಾಡಿದರು.

ಚುನಾಯಿತ ಜನಪ್ರತಿನಿಧಿಗಳು ತಮ್ಮ ಅಧಿಕಾರ ಸದ್ಬಳಕೆ ಮಾಡಿಕೊಂಡು ಹೇಗೆ ಕೆಲಸ ಮಾಡಬಹುದು ಎಂಬುದನ್ನು ಸಮಾಜಕ್ಕೆ ತೋರಿಸಿಕೊಡುವ ಮೂಲಕ ಸಾವಿರಾರು ಯುವಕರನ್ನು ರಾಜಕೀಯವಾಗಿ ಮುಂಚೂಣಿಗೆ ತಂದ ಅವರು ನಮಗೆ ದಾರಿದೀಪ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

> ತಮ್ಮ ಅಧಿಕಾರಾವಧಿಯಲ್ಲಿ ಹತ್ತು ಹಲವು ಜನಪರ ನಿರ್ಧಾರ ಕೈಗೊಂಡು ದಲಿತರು ಮತ್ತು ಹಿಂದುಳಿದ ವರ್ಗದವರ ಧ್ವನಿಯಾಗಿದ್ದ ನಮ್ಮ ಅರಸರು ಭೂ ಸುಧಾರಣಾ ಕಾಯಿದೆಯನ್ನು ಜಾರಿಗೆ ತರುವ ಮೂಲಕ ಬಡವರ ಪಾಲಿನ ದೇವರಾಗಿದ್ದಾರೆ.
> – ಡಿ.ರವಿಶಂಕರ್, ಶಾಸಕ.

ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ ಮಾತನಾಡಿ, ಹಿಂದುಳಿದ ವರ್ಗದ ಜನರ ಧ್ವನಿಯಾಗಿದ್ದ ಡಿ.ದೇವರಾಜ ಅರಸರಂತಹ ನಾಯಕರ ಚಿಂತನೆಗಳು ಪ್ರಸ್ತುತ ಸಮಾಜಕ್ಕೆ ಅತ್ಯಗತ್ಯವಾಗಿದ್ದು, ಅಂತಹ ಜನಪರ ಕಾಳಜಿಯುಳ್ಳ ನಾಯಕರು ಸಮಾಜದ ಆಸ್ತಿ ಎಂದು ನುಡಿದರು.

ಪಟ್ಟಣದ ಆಂಜನೇಯ ಬಡಾವಣೆ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಉದಯಗೌಡ ಅವರು, ಡಿ.ದೇವರಾಜ ಅರಸು ಅವರ ಜೀವನ ಮತ್ತು ಬದುಕಿನ ಸಾಧನೆಯ ಬಗ್ಗೆ ಉಪನ್ಯಾಸ ನೀಡಿದರು.

ಸಾಲಿಗ್ರಾಮ ತಹಸೀಲ್ದಾರ್ ರುಕಿಯಾ ಬೇಗಂ ಮಾತನಾಡಿದರು. ಈ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳ ಪ್ರತಿಭಾವಂತರಿಗೆ ನಗದು ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಸ್.ಮಹೇಶ್, ನಿರ್ದೇಶಕ ಸೈಯದ್ ಜಾಬೀರ್, ಪುರಸಭೆ ಉಪಾಧ್ಯಕ್ಷೆ ಪಲ್ಲವಿ ಆನಂದ್, ಸದಸ್ಯರಾದ ಕೋಳಿ ಪ್ರಕಾಶ್, ನಟರಾಜು, ಕೆ.ಎಸ್.ಶಂಕರ್, ಸೈಯದ್ ಸಿದ್ದಿಕ್, ಪಿರಿಯಾಪಟ್ಟಣ ತಾಲೂಕು ಅರಸು ಸಮಿತಿ ಅಧ್ಯಕ್ಷ ರಾಜು, ಕೆ.ಆರ್.ನಗರ ತಾಲೂಕು ಅರಸು ಸಮಾಜದ ಮುಖಂಡ ಕೃಷ್ಣ ದೇವರಾಜ ಅರಸು, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಸ್.ಮಹದೇವ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ, ರಾಜ್ಯ ರೈತ ಪರ್ವ ಸಂಘಟನೆ ಗೌರವಾಧ್ಯಕ್ಷ ಜೆ.ಎಂ.ಕುಮಾರ್, ಜಿಪಂ ಮಾಜಿ ಸದಸ್ಯ ಜಿ.ಆರ್.ರಾಮೇಗೌಡ, ತಾಲೂಕು ಕಾಂಗ್ರೆಸ್ ಸೇವಾದಳದ ಅಧ್ಯಕ್ಷ ಬಿ.ಹೆಚ್.ಕುಮಾರ್, ಕಾಂಗ್ರೆಸ್ ಮುಖಂಡರಾದ ಶಿವರಾಜು, ಸಂಪತ್, ತಾಪಂ ಇಓಗಳಾದ ವಿ.ಪು.ಕುಲದೀಪ್, ಎ.ಎನ್.ರವಿ, ಪುರಸಭೆ ಮುಖ್ಯಾಧಿಕಾರಿ ಜಿ.ಎಸ್.ರಮೇಶ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಕೆ.ಮೇಘನಾ, ಬಿಇಓ ಆರ್.ಕೃಷ್ಣಪ್ಪ ಬಿಸಿಎಂ ಇಲಾಖೆ ನಿಲಯ ಮೇಲ್ವಿಚಾರಕರಾದ ಮಹೇಶ್, ಮಧುಸೂದನ್, ಲೋಕೇಶ್, ರವಿ, ದಿಲೀಪ್, ಸತೀಶ್, ಸಿಬ್ಬಂದಿಗಳಾದ ಎಂ.ಎಸ್.ಬೆನಕರಾಜ್, ಪ್ರದೀಪ್ ದಿವ್ಯಾ, ಬೇಬಿಶ್ರೀ ಮೊದಲಾದವರು ಇದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಆಡಳಿತದಲ್ಲಿ ಸುಧಾರಣೆ ತಂದ ಧೀಮಂತ ರಾಜಕಾರಣಿ ಅರಸು



ಕಾರ್ಯಕ್ರಮದಲ್ಲಿ ಅರಸು ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿದರು.

ಹೆಚ್.ಡಿ.ಕೋಟೆ, ಆ.20– ಸಾಮಾಜಿಕ ಕ್ರಾಂತಿ ಮೂಲಕ ರಾಜ್ಯದಲ್ಲಿ ಆಡಳಿತ ಸುಧಾರಣೆ ತಂದ ಧೀಮಂತ ರಾಜಕಾರಣಿ ದಿ.ಡಿ.ದೇವರಾಜು ಅರಸು ಎಂದು ಪಶುಸಂಗೋಪನೆ ಇಲಾಖೆ ಸಹಾಯಕ ನಿರ್ದೇಶಕ ಡಾ.ವೈ.ಡಿ.ರಾಜಣ್ಣ ತಿಳಿಸಿದರು.

ಪಟ್ಟಣದ ತಾಲೂಕು ಆಡಳಿತ ಸೌಧದ ಆವರಣದಲ್ಲಿ ತಾಲೂಕು ಆಡಳಿತ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಬುಧವಾರ ಹಮ್ಮಿಕೊಂಡಿದ್ದ ಡಿ.ದೇವರಾಜು ಅರಸು ಅವರ 110ನೇ ಜಯಂತಿಯಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅವರು, ಹುಣಸೂರು ತಾಲೂಕಿನ ಕಲ್ಲಹಳ್ಳಿ ಗ್ರಾಮದ ಅರಸು ಅವರು ಸದಾ ಜನರೊಂದಿಗೆ ಬೆರೆತು ಅವರ ಪ್ರೀತಿ ವಿಶ್ವಾಸ ಗಳಿಸಿದ್ದರು. ರಾಜ್ಯದ ಮುಖ್ಯಮಂತ್ರಿಯಾಗಿ 8 ವರ್ಷಗಳ ಕಾಲ ಆಡಳಿತ ನಡೆಸಿದರು. ಸಾಮಾಜಿಕ ಪಿಡುಗಾಗಿದ್ದ ಮಲ ಹೊರುವ ಪದ್ಧತಿ, ಜೀತ ಪದ್ಧತಿ, ಋಣ ಪರಿಹಾರ ಕಾಯಿದೆಗಳನ್ನು ಜಾರಿಗೊಳಿಸುವ ಮೂಲಕ ರಾಜ್ಯದ ಬಡವರು ಮತ್ತು ಹಿಂದುಳಿದವರು ಬದುಕು ಕಟ್ಟಿಕೊಳ್ಳಲು ವರವಾಯಿತು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ದೇಶದ ಜನರಿಗೆ ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಸಮಾನತೆ ದೊರಕಿಸಿಕೊಟ್ಟರೇ, ಸಂವಿಧಾನದ ಆಶಯದಂತೆ ಡಿ.ದೇವರಾಜು ಅವರು ಕಾರ್ಯ ನಿರ್ವಹಿಸಿದರು ಎಂದರು.

ಈ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಚಿರಂತ್, ಸಾಹಿತ್ಯ, ಯಶೋಧ ಮತ್ತು ದೇವಿಕ ಅವರನ್ನು ಅಭಿನಂದಿಸಲಾಯಿತು. ವಿವಿಧ ವಿದ್ಯಾರ್ಥಿ ನಿಲಯಗಳಲ್ಲಿ ಆಯೋಜಿಸಿದ್ದ ಆಟೋಟ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳನ್ನು ಅಭಿನಂದಿಸಲಾಯಿತು.

ತಾಪಂ ಇಓ ಧರಣೀಶ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಶಶಿಕಲಾ, ಸರಗೂರು ತಹಸೀಲ್ದಾರ್ ಪರಶಿವಮೂರ್ತಿ, ಪಶು ಸಂಗೋಪನೆ ಇಲಾಖೆ ಸಹಾಯಕ ನಿರ್ದೇಶಕ ಲಿಂಗರಾಜು, ಎಸ್‌ಐ ಕಿರಣ್, ಪಪಂ ಸದಸ್ಯೆ ಸಣ್ಣತಾಯಮ್ಮ, ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್, ಮುಖಂಡರಾದ ಬಸವರಾಜು, ಹೆಚ್.ಕೆ. ಪ್ರಕಾಶ್, ನಾಗರಾಜ್, ಎಂ.ಡಿ.ಮಂಚಯ್ಯ, ತೋಟದ ಬೆಳಗಾರರ ಸಹಾಕಾರ ಸಂಘದ ಅಧ್ಯಕ್ಷ ನಂದೀಶ್, ಮಹೇಶ್, ಜವರಯ್ಯ, ದೇವರಾಜ, ಅನುಷಾ, ನಿಲಯ ಪಾಲಕರಾದ ರತ್ನಯ್ಯ, ಮಹಾದೇವನಾಯಕ, ಜಯಂತಿ, ಸುವರ್ಣ, ಗಾಯಿತ್ರಿ, ಲಕ್ಷ್ಮೀಕುಮಾರ್, ಮೋಹನ್ ದಾಸ್ ಇದ್ದರು.

ಸಮಾಜಕ್ಕೆ ಅರಸು ಕೊಡುಗೆ ಸ್ಮರಣೀಯ

ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು

ನಂಜನಗೂಡು, ಆ.20– ಸಾಮಾಜಿಕ ಕ್ರಾಂತಿ ಹರಿಕಾರ ಡಿ.ದೇವರಾಜ ಅರಸು ಅವರು ದೂರ ದೃಷ್ಟಿಯುಳ್ಳ ಮುತ್ಸದ್ದಿ ನಾಯಕರಾಗಿದ್ದರು. ಅವರು ಜಾರಿಗೆ ತಂದ ಉಳುವವನೇ ಭೂಮಿ ಒಡೆಯ ಕಾಯ್ದೆಯಿಂದಾಗಿ ಚಿಕ್ಕ ಸಮುದಾಯದ ಲಕ್ಷಾಂತರ ರೈತರು ಭೂಮಿ ಹೊಂದಲು ಸಾಧ್ಯವಾಯಿತು ಎಂದು ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಹೇಳಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಏರ್ಪಡಿಸಲಾಗಿದ್ದ ಡಿ.ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಿ.ದೇವರಾಜ ಅರಸು ಅವರು ಹಲವು ಕ್ರಾಂತಿಕಾರಕ ಯೋಜನೆಗಳನ್ನು ಜಾರಿಗೊಳಿಸಿ ಪ.ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಕ್ಕೆ ಅನುಕೂಲ ಮಾಡಿಕೊಟ್ಟರು. ಅಲ್ಲದೇ ದಕ್ಷ ಆಡಳಿತಗಾರರಾಗಿದ್ದ ಅವರು ಹಾವನೂರು ವರದಿ ಜಾರಿಗೊಳಿಸಿ ಸಣ್ಣ, ಶೋಷಿತ ಸಮುದಾಯಕ್ಕೆ ನೆರವಾದರು. ಅವರು ಜಾರಿಗೆ ತಂದ ಉಳುವವನೇ ಭೂಮಿ ಒಡೆಯ ಕಾಯ್ದೆಯಂತಹ ಕ್ರಾಂತಿಕಾರಕ ಯೋಜನೆ ಪರಿಣಾಮವಾಗಿ ಚಿಕ್ಕ ಸಮುದಾಯ ಭೂಮಿ ಹೊಂದಲು ಸಾಧ್ಯವಾಗಿದೆ. ನಂಜನಗೂಡು ತಾಲೂಕಿನಲ್ಲೂ ಲಕ್ಷಾಂತರ ರೈತರು ಇದರ ಫಲಾನುಭವಿಗಳಾಗಿದ್ದಾರೆ. ಡಿ.ದೇವರಾಜ ಅರಸು ಅವರ ಚಿಂತನೆಗಳು ಮತ್ತು ತತ್ವ ಸಿದ್ಧಾಂತಗಳು ಹಾಗೂ ಸಮಾಜಕ್ಕೆ ಅವರು ನೀಡಿರುವ ಕೊಡುಗೆಗಳು ಸ್ಮರಣೀಯವಾಗಿವೆ ಎಂದರು.

ಮುಖ್ಯ ಭಾಷಣಕಾರ ಮು.ನಾ.ರಮೇಶ್ ಮಾತನಾಡಿ, ಡಿ.ದೇವರಾಜ ಅರಸು ಅವರು ಮೊದಲಿಗೆ ವೃದ್ಧರು, ಅಂಗವಿಕಲರಿಗೆ ಮಾಸಾಸನ, ನಿರುದ್ಯೋಗಿ ಯುವಕರಿಗೆ ಸಹಾಯಧನದಂತಹ ಕಾರ್ಯಕ್ರಮಗಳನ್ನು ರೂಪಿಸಿ ಲಕ್ಷಾಂತರ ಬಡವರಿಗೆ ನೆರವಾಗಿದ್ದಾರೆ. ಜೊತೆಗೆ ಜೀತ, ಮಲ ಹೊರುವ ಪದ್ಧತಿಯ ನಿರ್ಮೂಲನೆ, ಕೊಳಗೇರಿಗಳ ನಿರ್ಮೂಲನೆ, ಜನತಾ ಮನೆಗಳ ನಿರ್ಮಾಣ ಸೇರಿದಂತೆ ಹಲವಾರು ಯೋಜನೆಗಳ ಮೂಲಕ ಸಾಮಾಜಿಕ ಪರಿವರ್ತನೆಗೆ ಶ್ರಮಿಸಿದ್ದಾರೆ. ಅವರ ಮನಸ್ಸು ಬಡವರ ಏಳಿಗೆಯ ಬಗ್ಗೆ ಸದಾ ತುಡಿಯುತ್ತಿತ್ತು ಎಂದರು.

ಕಾರ್ಯಕ್ರಮದಲ್ಲಿ ಸಾಧಕರು, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಕೆ.ಮಾರುತಿ, ಚೆನ್ನಪ್ಪ, ನಾರಾಯಣ, ಸುರೇಶ್, ವಿಜಯಕುಮಾರ್, ಮುಖಂಡರಾದ ದೊರೆಸ್ವಾಮಿ ನಾಯಕ, ಸೋಮಶೇಖರ್, ಪ್ರಕಾಶ್ ರಾಜೇ ಅರಸ್, ದೇವರಾಜು, ಜಗದೀಶ್, ಅಬ್ದುಲ್ ಖಾದರ್, ಸಿಡಿಪಿಓ ಭವ್ಯಶ್ರೀ, ಸುಕನ್ಯಾ, ಸಿದ್ದಲಿಂಗ, ಬಿಇಓ ಮಹೇಶ್ ಸೇರಿದಂತೆ ಹಲವರಿದ್ದರು.



ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಚಿರತೆ ದಾಳಿಗೆ ಮೇಕೆಗಳು ಬಲಿ

ಹೆಡತಲೆ, ಆ.20– ಚಿರತೆ ದಾಳಿಗೆ ಮೇಕೆಗಳು ಬಲಿಯಾಗಿರುವ ಘಟನೆ ನಂಜನಗೂಡು ತಾಲೂಕಿನ ಹೆಡತಲೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಮಾದನಾಯಕ ಅವರಿಗೆ ಸೇರಿದ ಮೇಕೆ ಬಲಿಯಾಗಿರುವುದು. ಮಾದನಾಯಕ ಅವರು ತಮ್ಮ ಜಮೀನಿನಲ್ಲಿ ಮೇಕೆಗಳನ್ನು ಮೇಯಿಸುವಾಗ ಏಕಾಏಕಿ ದಾಳಿ ನಡೆಸಿದ ಚಿರತೆ ಮೇಕೆ ಬಲಿ ಪಡೆದು, ಮತ್ತೊಂದನ್ನು ಎಳೆದೊಯ್ದಿದೆ ಎನ್ನಲಾಗಿದೆ.



ಇಲಾಖೆ ಅಧಿಕಾರಿ ರಮೇಶ್ ಪರಿಶೀಲನೆ ನಡೆಸಿ, ಪರಿಹಾರ ಕೊಡಿಸುವ ಭರವಸೆ ನೀಡಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ರೈತ ಮಾದನಾಯಕ ಕಳೆದ 1 ತಿಂಗಳಿಂದ 12 ಮೇಕೆಗಳು ನಾಪತ್ತೆಯಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಇದುವರೆಗೂ ಯಾವುದೇ ಪರಿಹಾರ ನೀಡಿಲ್ಲ. ಹೀಗಾಗಿ ಈಗಲಾದರೂ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ

ವಿದ್ಯಾರ್ಥಿಗಳು ಕೌಶಲ, ವೃತ್ತಿಪರ ಶಿಕ್ಷಣಕ್ಕೆ ಒತ್ತು ನೀಡಿ

ಹುಣಸೂರು ಆ.20– ವಿದ್ಯಾರ್ಥಿಗಳು ಕೌಶಲ ಹಾಗೂ ವೃತ್ತಿಪರ ಶಿಕ್ಷಣಕ್ಕೆ ಒತ್ತು ನೀಡಿ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ತಿಳಿಸಿದರು.

ನಗರದ ಜ್ಞಾನಧಾರ ಪದವಿ ಕಾಲೇಜು ವತಿಯಿಂದ ಆಯೋಜಿಸಿದ್ದ ವ್ಯಕ್ತಿತ್ವ ಅಭಿವೃದ್ಧಿ ಮತ್ತು ಜೀವನ ಕೌಶಲ ಕಾರ್ಯಾಗಾರ ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ, ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಯಶಸ್ಸು ಗಳಿಸಲು ಗುರಿ ಇರಬೇಕು. ಕಠಿಣ ದುಡಿಮೆ, ನಿರಂತರ ಸಾಧನೆ, ಸಮಾಜದಲ್ಲಿ ಗುರುತಿಸಿಕೊಳ್ಳಬೇಕೆಂಬ ಹಂಬಲ, ತುಡಿತವಿದ್ದರೆ ಸಾಧನೆಯ ಉತ್ತುಂಗಕ್ಕೇರಬಹುದು. ನನ್ನ ಅಧಿಕಾರಾವಧಿಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಒತ್ತು ನೀಡಿದ್ದು, ವಿದ್ಯಾರ್ಥಿಗಳಿಗೆ ಇಲ್ಲಿಯೇ ಉನ್ನತ ವ್ಯಾಸಂಗ ದೊರೆಯಬೇಕೆಂದು ಡಿ.ದೇವರಾಜ ಅರಸು ಕಾಲೇಜಿನಲ್ಲಿ ವಿವಿಧ ಸ್ನಾತಕೋತ್ತರ ಪದವಿ ಹಾಗೂ ರತ್ನಮ್ಮ ಸಂಶೋಧನಾ ಕೇಂದ್ರ ತೆರೆದು ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲಾಗಿದೆ ಎಂದರು.



ಕಾರ್ಯಕ್ರಮವನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು.

ಕಾಲೇಜಿನ ಮ್ಯಾನೇಜಿಂಗ್ ಡೈರೆಕ್ಟರ್ ಡಾ.ಜೆ.ಸಿ.ನಾಗೇಂದ್ರ, ಶ್ರೀಸಾಂಬ ಸದಾಶಿವ ಸ್ವಾಮೀಜಿ, ಡಾ.ಸಿ.ಯಮುನ, ಸೋಮಶೇಖರ್, ಹೆಚ್.ಕೆ.ಮಹದೇವ, ಸೇರಿದಂತೆ ಇತರರಿದ್ದರು.

ಎಸ್.ಕುಮಾರಸ್ವಾಮಿ ನಿಧನ


ತಿ.ನರಸೀಪುರ, ಆ.20– ಪಟ್ಟಣದ ಕೆನರಾ ಬ್ಯಾಂಕ್ ರಸ್ತೆಯಲ್ಲಿರುವ ಹಿರಿಯ ಉದ್ಯಮಿ ಹಾಗೂ ಪಾರ್ವತಿ ಸ್ಟೋರ್ ಮಾಲೀಕ ಎಸ್.ಕುಮಾರಸ್ವಾಮಿ (77) ಬುಧವಾರ ಬೆಳಗ್ಗೆ ನಿಧನರಾದರು.



ಪತ್ನಿ ಹಾಗೂ ಪುತ್ರ ಪುರಸಭಾ ಸದಸ್ಯ, ವೀರಶೈವ ಮಹಾಸಭಾ ಉಪಾಧ್ಯಕ್ಷ ಎಸ್.ಕೆ.ಕಿರಣ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಯಶೋಧರ್ ನಾಯಕ್

ನಂಜನಗೂಡು: ಫ್ರೆಂಡ್ಲಿ ಲಾಜಿಸ್ಟಿಕ್, ಫ್ರೆಂಡ್ಲಿ ಮೋಟರ್ಸ್, ಫ್ರೆಂಡ್ಲಿ ಹೋಮ್ಸ್ ಮಾಲೀಕ ಯಶೋಧರ್ ನಾಯಕ್ (72) ಮಂಗಳವಾರ ನಿಧನರಾದರು.



ಮೃತರು ಪತ್ನಿ, ಇಬ್ಬರು ಮಕ್ಕಳು, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಆ.21ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಶ್ರೀರಂಗಪಟ್ಟಣದ ಮೃತರ ತೋಟದಲ್ಲಿ ನೆರವೇರಲಿದೆ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಹಿಂದುಳಿದ ವರ್ಗಗಳ ಅಭಿವೃದ್ಧಿ ಹರಿಕಾರ ಅರಸು

ಮೈಸೂರು ಜಿಪಂ ಯೋಜನಾ ನಿರ್ದೇಶಕ ಕೆ.ಬಿ.ಪ್ರಭುಸ್ವಾಮಿ



ಕಾರ್ಯಕ್ರಮದಲ್ಲಿ ಡಿ.ದೇವರಾಜ ಅರಸು ಅವರ ಭಾವಚಿತ್ರಕ್ಕೆ ಅಧಿಕಾರಿಗಳು, ಮುಖಂಡರು ಪುಷ್ಪಾರ್ಚನೆ ಮಾಡಿದರು.

ತಿ.ನರಸೀಪುರ, ಆ.20– ತಮ್ಮ ದೂರದೃಷ್ಟಿತ್ವದ ಕಾರ್ಯಕ್ರಮಗಳಿಂದ ಸಾಮಾಜಿಕ ಅಭಿವೃದ್ಧಿ ಹರಿಕಾರ ಎನಿಸಿರುವ ಮಾಜಿ ಸಿಎಂ ಡಿ.ದೇವರಾಜ ಅರಸು ಅವರು ರಾಜಕೀಯವಾಗಿ ಬಹುದೊಡ್ಡ ಕ್ರಾಂತಿ ಮಾಡಿದ್ದಾರೆ ಎಂದು ಮೈಸೂರು ಜಿಪಂ ಯೋಜನಾ ನಿರ್ದೇಶಕ ಕೆ.ಬಿ.ಪ್ರಭುಸ್ವಾಮಿ ಸ್ಮರಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ತಾಲೂಕು ಆಡಳಿತ, ತಾಪಂ ಹಾಗೂ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆಯಲ್ಲಿ ಅರಸು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಅರಸು ಅವರು ಆಡಳಿತದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಹೆಸರಾಗಿದ್ದವರು. ಸಾಮಾಜಿಕ ಬದಲಾವಣೆ, ಬಡತನ ನಿರ್ಮೂಲನೆ, ಮನೆಗಳ ನಿರ್ಮಾಣದಲ್ಲಿ ಅದ್ವಿತೀಯ ಕೆಲಸ ಮಾಡಿದ್ದಾರೆ. ಹಿಂದುಳಿದ ವರ್ಗದವರ ಅಭಿವೃದ್ಧಿಗೆ ಅಂದೇ ಬುನಾದಿ ಹಾಕಿದ ಕೀರ್ತಿ ಅರಸು ಅವರದು. 70–80ರ ದಶಕದಲ್ಲಿ ಸಾಮಾಜಿಕ ಬದಲಾವಣೆಗೆ ಕಾರಣವಾಗಿ ನ್ಯಾಯ ಪ್ರತೀಕನೆಂಬ ಖ್ಯಾತಿಗೂ ಪಾತ್ರರಾಗಿದ್ದರು ಎಂದು ನೆನಪಿಸಿಕೊಂಡರು.

ಹಿಂದುಳಿದ ವರ್ಗಗಳ ಅಭಿವೃದ್ಧಿ ಹರಿಕಾರ ಡಿ.ದೇವರಾಜ ಅರಸು ಅವರು ರಾಜ್ಯದಲ್ಲಿ ಭೂ ಸುಧಾರಣೆ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಉಳುವವನೇ ಭೂಮಿ ಒಡೆಯನೆಂದು ಪರಿವರ್ತಿಸಿದರು. ಇದರಿಂದ ಭೂಮಿ ಇಲ್ಲದವರಿಗೆ ಉಳುಮೆಗಾಗಿ ಕೃಷಿ ಭೂಮಿ ದೊರೆಯಿತು. ನಿವೇಶನರಹಿತರಿಗೆ ನಿವೇಶನಗಳು ಮಂಜೂರಾದವು.

ಈ ಹಿಂದೆ ಹಲವು ನಾಯಕರು ರಾಜ್ಯದಲ್ಲಿ ಆಡಳಿತ ನಡೆಸಿದ್ದಾರೆ. ಆದರೆ 1969 ರಿಂದ 1979ರವರೆಗೆ ಅರಸು ಯುಗವಾಗಿತ್ತು. ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಸತಿ ನಿಲಯಗಳನ್ನು ಸ್ಥಾಪಿಸಿದರು. 1973 ನ.1 ರಂದು ಮೈಸೂರು ರಾಜ್ಯವನ್ನು 'ಕರ್ನಾಟಕ' ರಾಜ್ಯವೆಂದು ಮರುನಾಮಕರಣ ಮಾಡಿದರು. ಸಾರ್ವಜನಿಕರ ತೊಂದರೆಗಳನ್ನು ನಿವಾರಿಸುವಲ್ಲಿ ಡಿ.ದೇವರಾಜ ಅರಸು ಅವರ ಪಾತ್ರ ಬಹು ದೊಡ್ಡದು. ಕೃಷಿಕರು, ಬಡವರು, ಕೂಲಿ ಕಾರ್ಮಿಕರು ನೆಲೆ ಕಾಣಲು ಕಾರಣರಾದರು. ಮೀಸಲಾತಿ ವಿಸ್ತರಣೆ ತಂದರು. ಭೂ ಸುಧಾರಣೆ ಕಾಯ್ದೆ, ಜೀತಮುಕ್ತಿ ಪದ್ಧತಿ, ಕೃಷಿ, ಹೈನುಗಾರಿಕೆ ಸೇರಿದಂತೆ ಅನೇಕ ಸುಧಾರಣೆಗಳನ್ನು ತಮ್ಮ ಆಡಳಿತಾವಧಿಯಲ್ಲಿ ಜಾರಿಗೆ ತಂದರು. ಹೀಗಾಗಿ ಅವರ ಆದರ್ಶಗಳನ್ನು ಪಾಲಿಸುವ ಮೂಲಕ ಅವರ ಕನಸನ್ನು ನನಸು ಮಾಡಲು ಎಲ್ಲರೂ ಶ್ರಮಿಸಬೇಕು ಎಂದರು.

ಮುಖ್ಯ ಭಾಷಣ ಮಾಡಿದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಿವೃತ್ತ ನೌಕರ ಶರಣಪ್ಪ ಎಂ.ಮೊಗಲೆ, ದೇವರಾಜ ಅರಸು ಅವರು ಅನೇಕ ಕ್ರಾಂತಿಕಾರಿ ನಿರ್ಧಾರಗಳನ್ನು ಕೈಗೊಳ್ಳುವ ಮೂಲಕ ಹಿಂದುಳಿದ ವರ್ಗಗಳ ಸರ್ವತೋಮುಖ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಮಲ ಹೊರುವ, ಜೀತ ಪದ್ಧತಿಗಳಂತಹ ಸಾಮಾಜಿಕ ಅನಿಷ್ಟಗಳನ್ನು ನಿರ್ಮೂಲನೆ ಮಾಡುವಲ್ಲಿ ಡಿ.ದೇವರಾಜ ಅರಸು ಅವರ ಪಾತ್ರ ಅಪಾರವಾಗಿದೆ. ಉಳುವವನೇ ಭೂಮಿಯ ಒಡೆಯ ಎಂಬ ಭೂ ಸುಧಾರಣೆ ಕಾಯ್ದೆ ಜಾರಿಗೆ ತರುವ ಮೂಲಕ ದೇವರಾಜ ಅರಸು ರಾಷ್ಟ್ರಕ್ಕೆ ಮಾದರಿಯಾಗಿದ್ದಾರೆ ಎಂದರು.

ಈ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಹಾಗೂ ಕ್ರೀಡೆ, ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಪುರಸಭಾಧ್ಯಕ್ಷೆ ವಸಂತ ಶ್ರೀಕಂಠ, ಸದಸ್ಯರಾದ ಮುದ್ದಬೀರನಹುಂಡಿ ಗುರುಸ್ವಾಮಿ, ನಾಗರಾಜು, ಸಬೀಲ್ ಖಾನ್, ಸಿಸ್ಟಮ್ ಸಿದ್ದು, ತಾಪಂ ಇಓ ಅನಂತರಾಜು, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರ ಮೂರ್ತಿ, ಶಿರಸ್ತೇದಾರ್ ಮಂಜುಳಾ, ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ಸಾಮಾಜಿಕ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಎಂ.ರಮೇಶ್, ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷೆ ಮಹಾದೇವಮ್ಮ, ಪುಟ್ಟಮಲ್ಲಯ್ಯ, ಹಿಂದುಳಿದ ವರ್ಗಗಳ ಅಧಿಕಾರಿ ರಾಜಣ್ಣ, ಬಿಇಓ ಶಿವಮೂರ್ತಿ, ಬಿಆರ್‌ಸಿ ನಾಗೇಶ್, ಉಪನ್ಯಾಸಕ ಕುಮಾರಸ್ವಾಮಿ ಸೇರಿದಂತೆ ಇತರರಿದ್ದರು.

ಪ್ರಸ್ತುತ ಡಿಜಿಟಲ್ ತಂತ್ರಜ್ಞಾನಕ್ಕೆ ಒಗ್ಗಿಕೊಳ್ಳುವುದು ಅತ್ಯಗತ್ಯ

ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅಭಿಪ್ರಾಯ



ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಸಂಸ್ಥೆಯ ಆರ್.ಪಿ.ಸಿಂಘಾನಿಯಾ ಸಭಾಂಗಣದಲ್ಲಿ ಆಯೋಜಿಸಿದ್ದ 'ಡಿಜಿಟಲ್ ಇನೋವೇಶನ್ ಆ್ಯಂಡ್ ಟ್ರಾನ್ಸ್‌ಫಾರ್ಮೇಷನ್ ಇನ್ ಸೌತ್ ಈಸ್ಟ್ ಏಷ್ಯಾ' ಕುರಿತ ಅಂತಾರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಚಾಮರಾಜನಗರದ ಜಿಲ್ಲಾಧಿಕಾರಿ ಶಿಲ್ಪಾನಾಗ್ ಉದ್ಘಾಟಿಸಿದರು.

ಮೈಸೂರು, ಆ.20(ಎಂಟಿವೈ)– ತಂತ್ರಜ್ಞಾನ ಬೆಳೆದಂತೆ ಪ್ರತಿದಿನವೂ ಹೊಸ ಹೊಸ ಆವಿಷ್ಕಾರ ಆಗುತ್ತಿರುವ ಹಿನ್ನೆಲೆಯಲ್ಲಿ ಎಲ್ಲರೂ ಡಿಜಿಟಲ್ ತಂತ್ರಜ್ಞಾನಕ್ಕೆ ಒಗ್ಗಿಕೊಳ್ಳುವ ಅಗತ್ಯವಿದೆ ಎಂದು ಚಾಮರಾಜನಗರದ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅಭಿಪ್ರಾಯಪಟ್ಟಿದ್ದಾರೆ.

ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯ, ಜೆಎಸ್‌ಎಸ್ ವ್ಯವಹಾರ ಅಧ್ಯಯನ ಕೇಂದ್ರದ ವತಿಯಿಂದ ಬುಧವಾರ ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಸಂಸ್ಥೆಯ ಆರ್.ಪಿ.ಸಿಂಘಾನಿಯಾ ಸಭಾಂಗಣದಲ್ಲಿ ಆಯೋಜಿಸಿದ್ದ 'ಡಿಜಿಟಲ್ ಇನೋವೇಶನ್ ಆ್ಯಂಡ್ ಟ್ರಾನ್ಸ್‌ಫಾರ್ಮೇಷನ್ ಇನ್ ಸೌತ್ ಈಸ್ಟ್ ಏಷ್ಯಾ' ಕುರಿತ ಅಂತಾರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ದಶಕಗಳ ಹಿಂದೆ ಮನೆಗಳಲ್ಲಿ ಸ್ಥಿರ ದೂರವಾಣಿ ಸಂಪರ್ಕವಿತ್ತು. ಈಗ ಸ್ಮಾರ್ಟ್ ಫೋನ್‌ವರೆಗೂ ಆವಿಷ್ಕಾರವಾಗಿದೆ. ಇನ್ನೂ ಹೊಸತನದ ಫೋನ್‌ಗಳು ಬರುತ್ತಿವೆ. ಕಪ್ಪು–ಬಿಳುಪು ಟಿವಿಯಿಂದ ಇಂಟರ್‌ನೆಟ್ ಟಿವಿವರೆಗೂ ಬಂದಿದೆ. ಬ್ಯಾಂಕುಗಳಲ್ಲಿ ವಹಿವಾಟು ನಡೆಸಲು ತಾಸುಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಇತ್ತು. ಈಗ ಕುಳಿತ್ತಲ್ಲೇ ಆ್ಯಪ್ ಬಳಸಿಕೊಂಡು ಮೊಬೈಲ್‌ನಲ್ಲೇ ವಹಿವಾಟು ನಡೆಸಬಹುದು. ಇಷ್ಟರ ಮಟ್ಟಿಗೆ ಡಿಜಿಟಲ್ ಕ್ಷೇತ್ರದಲ್ಲಿ ಕ್ರಾಂತಿಯಾಗಿದ್ದು, ಇವುಗಳನ್ನು ಅಳವಡಿಸಿಕೊಂಡು ಸಮರ್ಪಕವಾದ ವ್ಯವಹಾರಿಕ ಕಾರ್ಯಗಳನ್ನು ಮಾಡಬಹುದಾಗಿರುವುದರಿಂದ ಮ್ಯಾನೇಜ್‌ಮೆಂಟ್ ಕೋರ್ಸ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಇವುಗಳಿಗೆ ಒಗ್ಗಿಕೊಳ್ಳುವುದು ಬಹಳ ಅವಶ್ಯವಿದೆ ಎಂದರು.

ಈಗಿನ ಕಾಲಮಾನವನ್ನು ಡಿಜಿಟಲ್ ಸುವರ್ಣಯುಗ ಎನ್ನಬಹುದು. ಮಷಿನ್ ಲರ್ನಿಂಗ್, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಮನುಷ್ಯನ ಜಾಗದಲ್ಲಿ ನಿಂತು ಕೆಲಸ ಮಾಡಲು ಪ್ರಾರಂಭಿಸಿವೆ. ಈ ಕ್ಷೇತ್ರಗಳಲ್ಲಿ ಹೊಸ–ಹೊಸ ಮುಂದುವರೆದ ತಂತ್ರಜ್ಞಾನಗಳನ್ನು ಬಳಕೆ ಮಾಡಲು ಅನೇಕ ದೇಶಗಳು ಮುಂದಡಿ ಇಟ್ಟಿವೆ. ಹೀಗಾಗಿ ಯುವ ಸಮೂಹಕ್ಕೆ ಅದರಲ್ಲೂ ಪದವೀಧರರಿಗೆ ಹೊಸ–ಹೊಸ ಅವಕಾಶಗಳು ಹೇರಳವಾಗಿ ಲಭ್ಯವಾಗಲಿವೆ. ಆದರೆ ನಿಮ್ಮಲ್ಲಿ ಅವಿಷ್ಕಾರದ ಜ್ಞಾನ ಮತ್ತು ಹೊಸತನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪಾರದರ್ಶಕತೆಗೆ ಇ–ಆಡಳಿತ ಜಾರಿ: ಕರ್ನಾಟಕ ರಾಜ್ಯ ಡಿಜಿಟಲ್ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ಆಡಳಿತ ನಡೆಸುತ್ತಿದೆ. ರಾಜ್ಯದಲ್ಲಿ ಸರ್ಕಾರಿ ವ್ಯವಹಾರ ಪಾರದರ್ಶಕತೆಯಿಂದ ಕೂಡಿರಬೇಕು ಎಂಬ ಉದ್ದೇಶದಿಂದ ಇ–ಆಡಳಿತ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಇದರಿಂದ ನಾಗರಿಕರು ಸರ್ಕಾರಿ ಸೇವೆ ಮತ್ತು ಸೌಲಭ್ಯವನ್ನು ಪಡೆಯಲು ವಿಳಂಬವಾಗುವುದಿಲ್ಲ ಹಾಗೂ ನಿಗದಿಪಡಿಸಿರುವ ಕಾಲಮಿತಿಯಲ್ಲಿ ಕೆಲಸಗಳು ನಡೆಯುತ್ತಿವೆ ಎಂದು ತಿಳಿಸಿದರು.

ಸರ್ಕಾರದ ಎಲ್ಲ ಇಲಾಖೆಗಳ ಸೇವೆಗಳನ್ನು ಇ–ಪೋರ್ಟಲ್‌ನಲ್ಲಿ ದೊರೆಯುವಂತೆ ಮಾಡಿದೆ. ಕಂದಾಯ ಇಲಾಖೆಯ ಕೆಲಸಗಳು ಆನ್‌ಲೈನ್‌ನಲ್ಲೇ ನಡೆಯುತ್ತಿವೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು 'ಪಂಚತಂತ್ರ ಸಾಫ್ಟ್‌ವೇರ್' ಮೂಲಕ ಕಾರ್ಯ ನಿರ್ವಹಿಸುತ್ತಿದೆ. ಈ ವ್ಯವಸ್ಥೆ ರಾಜ್ಯದ ಎಲ್ಲ ಗ್ರಾ.ಪಂ.ಗಳಲ್ಲೂ ಅನುಷ್ಠಾನಗೊಂಡಿದ್ದು, ಎಲ್ಲವನ್ನೂ ಆನ್‌ಲೈನ್ ಮೂಲಕ ವೀಕ್ಷಣೆ ಮಾಡಬಹುದಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ ರಾಜ್ಯದಲ್ಲೇ ಮೊದಲ ಬಾರಿಗೆ ಕಾರ್ಯ ನಿರ್ವಹಿಸುವ ಗ್ರಾಮ ಆಡಳಿತಾಧಿಕಾರಿಗಳಿಗೆ ಇ–ಕಚೇರಿಯನ್ನು ಅನುಷ್ಠಾನಗೊಳಿಸಲಾಗಿದೆ. ಈ ಸೌಲಭ್ಯದಲ್ಲಿ ಗ್ರಾಮ ಆಡಳಿತಾಧಿಕಾರಿಗಳು ಡಿಜಿಟಲ್ ತಂತ್ರಜ್ಞಾನದ ಮೂಲಕ ತಮ್ಮ ಕೆಲಸಗಳನ್ನು ನಿರ್ವಹಿಸಬಹುದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ವಹಿಸಿದ್ದರು. ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಬಿ.ಸುರೇಶ್, ಮಲೇಷಿಯಾ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯದ ಮುಖ್ಯಸ್ಥ ಪ್ರೊ. ಪ್ರೇಮಕುಮಾರ್ ರಾಜಗೋಪಾಲ್, ಜೆಎಸ್‌ಎಸ್ ಟೆಕ್ನಿಕಲ್ ಎಜುಕೇಷನ್ ಡಿವಿಷನ್ ನಿರ್ದೇಶಕ ಡಾ.ಬಿ.ಸುರೇಶ್, ಉಪಕುಲಪತಿ ಪ್ರೊ.ಎ.ಎನ್.ಸಂತೋಷ್‌ಕುಮಾರ್, ಕುಲಸಚಿವ ಡಾ.ಎಸ್.ಎ.ಧನರಾಜ್, ಎಸ್‌ಜೆಸಿಇ ಪ್ರಾಂಶುಪಾಲ ಡಾ.ಸಿ.ನಟರಾಜ್, ಡೀನ್ ಡಾ.ಪಿ. ನಾಗೇಶ್, ಜೆಎಸ್‌ಎಸ್ ಸಿಎಂಎಸ್ ಮುಖ್ಯಸ್ಥರಾದ ಡಾ.ಸ್ವರೂಪ ಸಿಂಹ, ಕಾರ್ಯಕ್ರಮದ ಸಂಯೋಜಕಿ ಡಾ. ಅರುಣ ಆದರ್ಶ ಮತ್ತಿತರರು ಉಪಸ್ಥಿತರಿದ್ದರು.

ಎಮ್ಮೆ ಖರೀದಿಸಲು ಹೋಗಿ 4.5ಲಕ್ಷ ಕಳೆದುಕೊಂಡ ನಿರ್ದೇಶಕ ಪ್ರೇಮ್




ಬೆಂಗಳೂರು, ಆ.20– ಕನ್ನಡ ಚಿತ್ರ ನಿರ್ದೇಶಕ ಪ್ರೇಮ್ ಎಮ್ಮೆ ಖರೀದಿಸಲು ಹೋಗಿ ಮೋಸಗೊಂಡು ಲಕ್ಷಗಟ್ಟಲೆ ಹಣ ಕಳೆದುಕೊಂಡಿದ್ದಾರೆ. ಅವರಿಗೆ ಹೈನುಗಾರಿಕೆಗಾಗಿ ಎಮ್ಮೆ ಕೊಡಿಸುವುದಾಗಿ 4.5 ಲಕ್ಷ ರೂಪಾಯಿ ಪಡೆದು ವಂಚಿಸಿರುವ ಆರೋಪದ ಮೇಲೆ ಗುಜರಾತ್ ಮೂಲದ ವನರಾಜ್ ಭಾಯ್ ಎಂಬಾತನ ವಿರುದ್ಧ ಚಂದ್ರಾಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರೇಮ್ ಅವರ ಮ್ಯಾನೇಜರ್ ಕಂ ನಟ ದಶಾವರ ಚಂದ್ರು ಅವರು ದೂರು ನೀಡಿದ್ದಾರೆ.

ಏನಿದು ಪ್ರಕರಣ: ಪ್ರೇಮ್ ಅವರು ತಮ್ಮ ಹೈನುಗಾರಿಕೆಗಾಗಿ ಎರಡು ಎಮ್ಮೆಗಳನ್ನು ಖರೀದಿಸಲು ಮುಂದಾಗಿದ್ದರು. ಈ ವೇಳೆ ವನರಾಜ್ ಭಾಯ್ ಎಂಬ ವ್ಯಕ್ತಿ ಇವರನ್ನು ಸಂಪರ್ಕಿಸಿ, ಎಮ್ಮೆಗಳನ್ನು ಕೊಡಿಸುವುದಾಗಿ ಭರವಸೆ ನೀಡಿದ್ದ. ಮುಂಗಡವಾಗಿ 25,000 ರೂಪಾಯಿ ಪಡೆದು ಆತ ವಾಟ್ಸಾಪ್ ಮೂಲಕ ಎರಡು ಎಮ್ಮೆಗಳ ವಿಡಿಯೋ ಕಳುಹಿಸಿದ್ದ. ಇದನ್ನು ನಂಬಿದ ಪ್ರೇಮ್ ಅವರು ಹಂತ ಹಂತವಾಗಿ ಆನ್‌ಲೈನ್ ಮೂಲಕ ಒಟ್ಟು 4.5 ಲಕ್ಷ ರೂ.ಗಳನ್ನು ಪಾವತಿಸಿದ್ದರು. ಆದರೆ, ಹಣ ಪಡೆದ ನಂತರ ವನರಾಜ್ ಭಾಯ್ ಎಮ್ಮೆಗಳನ್ನು ನೀಡದೇ ಹಣದೊಂದಿಗೆ ನಾಪತ್ತೆಯಾಗಿದ್ದಾನೆ. ಒಂದು ವಾರದಲ್ಲಿ ಎಮ್ಮೆಗಳನ್ನು ನೀಡುತ್ತೇನೆ ಎಂದಿದ್ದ ವನರಾಜ್ ಭಾಯ್ ಹಣದೊಂದಿಗೆ ಎಸ್ಕೇಪ್ ಆಗಿದ್ದಾನೆ. ಈಗ ಆತನ ಫೋನ್ ಸ್ವಿಚ್ ಆಫ್ ಆಗಿದ್ದು, ವಂಚನೆಗೊಳಗಾಗಿದ್ದೇನೆ ಎಂದು ಅರಿತ ಪ್ರೇಮ್ ದೂರು ದಾಖಲಿಸಿದ್ದಾರೆ.

ಆ.24, ಜಿಲ್ಲಾಮಟ್ಟದ ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆ

ಮೈಸೂರು, ಆ.20(ಪಿಎಂ)– ದಿನೇಶ್ ಕೋಚಿಂಗ್ ಸೆಂಟರ್ ವತಿಯಿಂದ ಆ.24ರಂದು ಜಿಲ್ಲಾಮಟ್ಟದ ಅಂತರ ಪ್ರೌಢಶಾಲಾ ಕನ್ನಡ ಚರ್ಚಾಸ್ಪರ್ಧೆ ಏರ್ಪಡಿಸಲಾಗಿದೆ. 'ಭಾರತದ ಅಭಿವೃದ್ಧಿಯಲ್ಲಿ ಹಳ್ಳಿಗಳಿಗಿಂತ ನಗರಗಳ ಪಾತ್ರವೇ ಹೆಚ್ಚು' ಚರ್ಚೆಯ ವಿಷಯವಾಗಿದೆ. ಮೈಸೂರಿನ ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಕೇಂದ್ರದಲ್ಲಿ ನಡೆಯುವ ಚರ್ಚಾ ಸ್ಪರ್ಧೆಯನ್ನು ಅಂದು ಬೆಳಗ್ಗೆ 10ಕ್ಕೆ ಕಾಮಾಕ್ಷಿ ಆಸ್ಪತ್ರೆಯ ಯುರಾಲಜಿಸ್ಟ್ ಡಾ.ಪ್ರಕಾಶ್ ಪ್ರಭು ಉದ್ಘಾಟಿಸಲಿದ್ದಾರೆ.

ಪ್ರಥಮ ಬಹುಮಾನ 5 ಸಾವಿರ ರೂ., ದ್ವಿತೀಯ ಬಹುಮಾನ 4 ಸಾವಿರ ರೂ., ತೃತೀಯ ಬಹುಮಾನ 3 ಸಾವಿರ ರೂ. ಹಾಗೂ ಸಮಾಧಾನಕರ ಬಹುಮಾನ (ಎರಡು) ತಲಾ 1 ಸಾವಿರ ರೂ. ನಗದು ಒಳಗೊಂಡಿದೆ. ವಿಜೇತ ಶಾಲೆಗೆ ಆಕರ್ಷಕ ಪಾರಿತೋಷಕ ದೊರೆಯಲಿದೆ. ಹೆಚ್ಚಿನ ವಿವರಗಳಿಗೆ ದೂ.ಸಂ. 0821–2342029, ಮೊ.ಸಂ. 86188 98929 ಅನ್ನು ಸಂಪರ್ಕಿಸಬಹುದು.

ಮೈಸೂರು ದಸರಾ: ಕಲಾವಿದರು, ಕಲಾತಂಡಗಳಿಂದ ಅರ್ಜಿ ಆಹ್ವಾನ

ಮೈಸೂರು, ಆ.20– 2025–26ನೇ ಸಾಲಿನಲ್ಲಿ ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವವನ್ನು ಸೆ.22ರಿಂದ ಅ.2ರವರೆಗೆ ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಗಿದೆ. ಈ ಸಂಬಂಧ ಸಾಂಸ್ಕೃತಿಕ ಉಪಸಮಿತಿಯಿಂದ ನವರಾತ್ರಿ ಪ್ರಯುಕ್ತ ಸೆ.22ರಿಂದ 30ರ ವರೆಗೆ ವಿವಿಧ ಕಲಾಪ್ರಕಾರಗಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅರಮನೆ ಹಾಗೂ ಇತರೆ ವೇದಿಕೆಗಳಲ್ಲಿ ಆಯೋಜಿಸಲು ಉದ್ದೇಶಿಸಲಾಗಿದ್ದು, ಸಾಂಸ್ಕೃತಿಕ ಕಾರ್ಯಕ್ರಮ ನೀಡಲು ಕಲಾವಿದರು/ಕಲಾತಂಡಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಕಲಾಮಂದಿರ, ವಿನೋಬಾ ರಸ್ತೆ, ಮೈಸೂರು–570005 ಇಲ್ಲಿಗೆ ನೇರವಾಗಿ ಅಥವಾ ಅಂಚೆ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಮಿಂಚಂಚೆ ಮೂಲಕವು ccdasara23@gamail.comವಿಳಾಸಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 05 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ: 0821–2513225 ನ್ನು ಸಂಪರ್ಕಿಸಬಹುದು. ಕಲಾವಿದರಿಗೆ ಕಾರ್ಯಕ್ರಮ ಕೊಡಿಸುವುದಾಗಿ ಯಾವುದೇ ಮಧ್ಯವರ್ತಿಗಳು ಸಂಪರ್ಕಿಸಿ ಹಣದ ಬೇಡಿಕೆ ಇಟ್ಟಲ್ಲಿ ತಕ್ಷಣ ಮಾಹಿತಿ ಸಮೇತ ಸಹಾಯಕ ನಿರ್ದೇಶಕರ ಕಚೇರಿಗೆ ದೂರು ಸಲ್ಲಿಸಬಹುದಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು, ಮೈಸೂರು ದಸರಾ ಮಹೋತ್ಸವ ಹಾಗೂ ಸಾಂಸ್ಕೃತಿಕ ಉಪಸಮಿತಿ ಕಾರ್ಯದರ್ಶಿಗಳಾದ ಡಾ.ಎಂ.ಡಿ.ಸುದರ್ಶನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗಳ ಪಟ್ಟಿ ಪ್ರಕಟ: ಆಕ್ಷೇಪಣೆಗಳಿಗೆ ಆಹ್ವಾನ

ಮೈಸೂರು, ಆ.20– ಮೈಸೂರು ಜಿಲ್ಲಾ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿಯಿರುವ 67 ಅಂಗನವಾಡಿ ಕಾರ್ಯಕರ್ತೆ ಮತ್ತು 251 ಸಹಾಯಕಿಯರ ಹುದ್ದೆಗಳಿಗೆ ಸರ್ಕಾರದ ನಿಯಮಾವಳಿಯಂತೆ ಅಭ್ಯರ್ಥಿಗಳನ್ನು ಜಿಲ್ಲಾ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆ ಸಮಿತಿಯಿಂದ ಅನುಮೋದಿಸಿದ ಅಭ್ಯರ್ಥಿಗಳನ್ನು ಸಂಬಂಧಿಸಿದ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾ ಕಚೇರಿಗಳಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಈ ತಾತ್ಕಾಲಿಕ ಆಯ್ಕೆ ಪಟ್ಟಿಯ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಅಭ್ಯರ್ಥಿಗಳು ಲಿಖಿತವಾಗಿ ಅಗತ್ಯ ಸಮರ್ಥನೀಯ ದಾಖಲೆಗಳೊಂದಿಗೆ ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾ ಕಚೇರಿಯ ಕೆಲಸದ ವೇಳೆಯಲ್ಲಿ ಆಗಸ್ಟ್ 28ರ ಸಂಜೆ 5.30 ರೊಳಗಾಗಿ ಸಲ್ಲಿಸಬಹುದಾಗಿದೆ. ತದನಂತರ ಬಂದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿ ಆಚರಣೆ


ಮೈಸೂರು ಲೋಕನಾಯಕ ನಗರದಲ್ಲಿ ಜನ ಸೇವಾ ಸಮಿತಿ ವತಿಯಿಂದ ಸಂಗೊಳ್ಳಿ ರಾಯಣ್ಣ ಜಯಂತಿಯನ್ನು ಆಚರಿಸಲಾಯಿತು.

ಮೈಸೂರು, ಆ.20– ಮೈಸೂರಿನ ಲೋಕಾನಾಯಕ ನಗರದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿಯನ್ನು ಜನ ಸೇವಾ ಸಮಿತಿ ವತಿಯಿಂದ ಆಚರಿಸಲಾಯಿತು.

ಈ ವೇಳೆ ಸಮಿತಿಯ ಅಧ್ಯಕ್ಷ ಚಿನ್ನಪ್ಪ ಮಾತನಾಡಿ, ರಾಯಣ್ಣನ ತ್ಯಾಗ ಅಪಾರವಾದದ್ದು. ಅವರು ಬ್ರಿಟಿಷರು ತೆರಿಗೆಯನ್ನು ಏರಿದಾಗ ಅದನ್ನು ವಿರೋಧಿಸಿ ಕಿತ್ತೂರು ರಾಣಿ ಚೆನ್ನಮ್ಮ ಅವರ ಆಜ್ಞೆಯಂತೆ ತಮಗೇಕೆ ಕೊಡಬೇಕು ಕಪ್ಪ ಎಂದು ಬ್ರಿಟಿಷರ ವಿರುದ್ಧ ಹೋರಾಟವನ್ನು ಮಾಡಿ ದೇಶಕ್ಕೆ ಮಾದರಿಯಾಗಿದ್ದಾರೆ. ಅವರನ್ನು ಒಂದು ಜಾತಿಗೆ ಸೀಮಿತಗೊಳಿಸಬಾರದು ಇಂತಹ ಮಹಾನ್ ದೇಶಭಕ್ತರನ್ನು ಎಲ್ಲರೂ ಸ್ಮರಿಸುವಂತಹ ಕೆಲಸವಾಗಬೇಕು ಎಂದರು.

ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್ ಬಾಲಕೃಷ್ಣ ಮಾತನಾಡಿ, ದಕ್ಷಿಣ ಭಾರತದಲ್ಲಿ ಬ್ರಿಟಿಷರು ಸಂಗೊಳ್ಳಿ ರಾಯಣ್ಣ ಕಂಡರೆ ಹೆದರುತ್ತಿದ್ದರು. ರಾಯಣ್ಣ, ಕಿತ್ತೂರು ರಾಣಿ ಚೆನ್ನಮ್ಮ ಅವರಿಗೆ ಬಲಗೈ ಭಂಟರಾಗಿದ್ದರು. ಆಗಿನ ಕಾಲದಲ್ಲಿ ಗೆರಿಲ್ಲಾ ಯುದ್ಧವನ್ನು ಮಾಡಿ ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿದ್ದರು. ಇಂಥ ಮಹಾನಾಯಕನ ಜಯಂತಿ ಆಚರಿಸುವುದು ನಮ್ಮೆಲ್ಲರ ಪುಣ್ಯ ಎಂದರು.

ಸೋಮಶೇಖರ್, ಶಿವನೇಗೌಡ, ನಟರಾಜ, ಮಂಜೇಗೌಡ, ಮಂಜು ಅರಸು, ಗಿರೀಶ, ಪುಟ್ಟರಾಜು, ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಪ್ರದರ್ಶಕ ಕಲೆ, ದೃಶ್ಯ ಕಲೆಗಳ ಅನುಸಂಧಾನ ಕುರಿತು ವಿಚಾರ ಸಂಕಿರಣ

ಮೈಸೂರು, ಆ.20– ಶ್ರೀ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, ಮೈಸೂರು ಶ್ರೀ ಗುಬ್ಬಿ ವೀರಣ್ಣ ಅಧ್ಯಯನ ಪೀಠ (ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜು ಮಾನಸಗಂಗೋತ್ರಿ)ದ ಸಹಯೋಗದಲ್ಲಿ ಪ್ರದರ್ಶಕ ಕಲೆ ಮತ್ತು ದೃಶ್ಯ ಕಲೆಗಳ ಅನುಸಂಧಾನ ಕುರಿತು ವಿಚಾರ ಸಂಕಿರಣ ಉದ್ಘಾಟನಾ ಸಮಾರಂಭವನ್ನು ಆ.22 ರಂದು ಬೆಳಗ್ಗೆ 10.30 ಗಂಟೆಗೆ ಕಾವಾ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಲೋಕನಾಥ್ ಎನ್.ಕೆ. ಕಾರ್ಯಕ್ರಮ ಉದ್ಘಾಟಿಸಲಿದ್ದು, ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ (ಕಾವಾ) ಡೀನ್ ಎ.ದೇವರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಹಿರಿಯ ರಂಗಕರ್ಮಿಗಳಾದ ಡಾ.ಸಿ. ಬಸವಲಿಂಗಯ್ಯ, ಹಿರಿಯ ನೃತ್ಯ ಕಲಾವಿದರಾದ ವಿದುಷಿ ಡಾ. ತುಳಸಿ ರಾಮಚಂದ್ರ ಆಗಮಿಸಲಿದ್ದಾರೆ.

ವಿಶ್ವವಿದ್ಯಾ ನಿಲಯ ಲಲಿತಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಅನಿಟ ಬ್ರ್ಯಾಕ್ಸ್, ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ (ಕಾವಾ) ಆಡಳಿತಾಧಿಕಾರಿಗಳಾದ ನಿರ್ಮಲಾ ಮಠಪತಿ, ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ (ಕಾವಾ) ಶೈಕ್ಷಣಿಕ ಸಂಯೋಜಕರಾದ ಎ.ಪಿ. ಚಂದ್ರಶೇಖರ್ ಅವರು ಉಪಸ್ಥಿತರಿರಲಿದ್ದಾರೆ.

ಭಕ್ತಿಯಿಂದ ನಂಬಿ ಕರೆದೆಡೆ ಶಿವನು ಓಗೊಡುತ್ತಾನೆ...

ದೇವನೂರು ಶ್ರೀ ಗುರುಮಲ್ಲೇಶ್ವರ ತ್ರಿವಿಧ ದಾಸೋಹ ಮಠದ ಶ್ರೀ ಮಹಾಂತ ಸ್ವಾಮಿಗಳ ಭಕ್ತಿನುಡಿ


ದೇವಲಾಪುರ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದಲ್ಲಿ ಮೈಸೂರು ಜಿಲ್ಲೆಯಲ್ಲಿಯೇ ಪ್ರಥಮ ವಚನ ಪಾಠಶಾಲೆ ಮತ್ತು ಶ್ರಾವಣ ಮಾಸದ ಪ್ರಯುಕ್ತ ಪ್ರವಚನ ಕಾರ್ಯಕ್ರಮದ ಉದ್ಘಾಟನೆ ನಡೆಯಿತು.

ಮೈಸೂರು, ಆ.20– ನಂಬಿ ಕರೆದೆಡೆ ಶಿವನು ಓಗೊಡುತ್ತಾನೆ ಎಂದು ದೇವನೂರು ಶ್ರೀ ಗುರುಮಲ್ಲೇಶ್ವರ ತ್ರಿವಿಧ ದಾಸೋಹ ಮಠದ ಶ್ರೀ ಮಹಾಂತ ಸ್ವಾಮಿಗಳು ಹೇಳಿದರು. ಅವರು ದೇವಲಾಪುರ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದಲ್ಲಿ ಮೈಸೂರು ಜಿಲ್ಲೆಯಲ್ಲಿಯೇ ಪ್ರಥಮ ವಚನ ಪಾಠಶಾಲೆ ಮತ್ತು ಶ್ರಾವಣ ಮಾಸದ ಪ್ರಯುಕ್ತ ಪ್ರವಚನ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಮಾತನಾಡಿದರು. ವಚನ ಸಾಹಿತ್ಯ ಅನುಭಾವಿಕ ಸಾಹಿತ್ಯವಾಗಿದ್ದು, ಶರಣರು ಮೇಲಾಗಲೊಲ್ಲದೆ ಕೀಳಾಗಿರುವೆನು ಎಂದು ಹೇಳಿ ಎಲ್ಲರಿಗಿಂತ ತಾನು ಮೇಲೆಂದು ಮೆರೆಯುವ ಅಹಂಕಾರವನ್ನು ಹತ್ತಿರ ಸುಳಿಯದಂತೆ ನೋಡಿಕೊಂಡು ಜನಸೇವೆ ಮಾಡುತ್ತಾ ಹಿಂದೆ ನಿಲ್ಲಬಯಸಿದುದರಿಂದ 900 ವರ್ಷ ಕಳೆದರೂ ಅವರು ಜನಮಾನಸದಲ್ಲಿ ಶಾಶ್ವತವಾಗಿ ನೆಲೆಯೂರಿದ್ದಾರೆ ಎಂದರು.

ಬರಡನಪುರ ಶ್ರೀ ಮಹಾಂತೇಶ್ವರ ಮಠದ ಶ್ರೀ ಪರಶಿವಮೂರ್ತಿಸ್ವಾಮಿಗಳು ಮಾತನಾಡಿ, ಮನದ ಮೈಲಿಗೆಯನ್ನು ಕಳೆಯಲು ಶರಣರ ವಚನಗಳು ಸಹಕಾರಿಯಾಗಿದ್ದು, ಇಂತಹ ವಚನ ಸಾಹಿತ್ಯದ ಅಭಿರುಚಿ ಬಾಲ್ಯದಲ್ಲಿಯೇ ಚಿಗುರೊಡೆದಾಗ ಸುಸಂಸ್ಕೃತ ವ್ಯಕ್ತಿಗಳಾಗಿ ರೂಪುಗೊಳ್ಳಲು ಸಹಾಯಕವಾಗುತ್ತದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ. ಡಿ.ಎಸ್ ಗುರು ಇಂದಿನ ಕಾಲಘಟ್ಟದಲ್ಲಿ ಮನುಷ್ಯ ತಾನು ಮಾತ್ರ ಬದುಕಬೇಕು ಎಂಬ ಸ್ವಾರ್ಥ ಹೆಚ್ಚಾಗಿ ಸಮಾಜ ನೈತಿಕ ಅಧಃಪತನದತ್ತ ವಾಲುತ್ತಿರುವುದು ನೋವಿನ ಸಂಗತಿ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನೈತಿಕ ಮೌಲ್ಯಗಳನ್ನು ಗಟ್ಟಿಗೊಳಿಸಲು ದೇವಲಾಪುರ ಮಠದಲ್ಲಿ ವಚನ ಪಾಠಶಾಲೆ ಪ್ರಾರಂಭವಾಗುತ್ತಿರುವುದು ಆಶಾದಾಯಕ ಬೆಳವಣಿಗೆ ಎಂದರು.

ಶರಣರ ವಿಚಾರಧಾರೆ ವಿಷಯದ ಬಗ್ಗೆ ಪ್ರವಚನ ನೀಡಿ ಮಾತನಾಡಿದ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಕಣ್ಮರೆಯಾಗುತ್ತಿದ್ದ ವಚನ ಸಾಹಿತ್ಯವನ್ನು ಗುರು ರೂಪದಲ್ಲಿ ಬೆಳಕಿಗೆ ತಂದ ಡಾ. ಫ.ಗು. ಹಳಕಟ್ಟಿ, ಲಿಂಗ ಸ್ವರೂಪದಲ್ಲಿ ಸಂಶೋಧಿಸಿದ ಕರ್ನಾಟಕದ ಗಾಂಧಿ ಹರ್ಡೇಕರ್ ಮಂಜಪ್ಪ ಮತ್ತು ಜಂಗಮ ಸ್ವರೂಪವಾಗಿ ಪ್ರಚುರಪಡಿಸಿದ ಉತ್ತಂಗಿ ಚೆನ್ನಪ್ಪನವರನ್ನು ಪ್ರತಿಯೊಬ್ಬ ಸಾಹಿತ್ಯಾಭಿಮಾನಿಯೂ ಸ್ಮರಿಸಬೇಕು ಎಂದರು.

ವಚನ ಪಾಠಶಾಲೆ ಉದ್ಘಾಟಿಸಿ ಮಾತನಾಡಿದ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ಕನ್ನಡ ವರ್ಣಮಾಲೆಯ ಅಕ್ಷರಗಳನ್ನು ಉಚ್ಛಾರ ಮಾಡಿದಾಗ ಒಂದೊಂದು ಅಕ್ಷರದಲ್ಲಿಯೂ ವಚನಕಾರರು ಮತ್ತು ವಚನಗಳನ್ನು ಕಾಣಬೇಕು. ಅ ಎಂದರೆ ಅಲ್ಲಮ ಪ್ರಭು, ಆ ಎಂದರೆ ಆಯ್ದಕ್ಕಿ ಮಾರಯ್ಯ, ಇ ಎಂದರೆ ಇಮ್ಮಡಿ ಮುರಿಘಾ ಗುರುಸಿದ್ಧ ಸ್ವಾಮಿಗಳು ನೆನಪಾಗಬೇಕು ಎಂದು ವಚನ ವರ್ಣಮಾಲೆಯನ್ನು ಪರಿಚಯಿಸಿದರು.

ದೇವಲಾಪುರ ಶ್ರೀ ಗುರುಮಲ್ಲೇಶ್ವರ ಮಠದ ಶ್ರೀ ಜಡೇಸ್ವಾಮಿಗಳು ಮಾತನಾಡಿ ಶ್ರೀಮಠಕ್ಕೆ ಭಕ್ತರೇ ಆಸ್ತಿ. ಸಮಾಜಕ್ಕೆ ಶರಣರು ನೀಡಿರುವ ಅಮೂಲ್ಯವಾದ ವಚನ ಸಾಹಿತ್ಯವನ್ನು ಜನಮಾನಸಕ್ಕೆ ತಲುಪಿಸುವ ನಿಟ್ಟಿನಲ್ಲಿ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥೆಯ ಸಹಕಾರದೊಂದಿಗೆ ವಚನ ಪಾಠ ಶಾಲೆ ಪ್ರಾರಂಭಿಸುತ್ತಿದ್ದೇವೆ. ಭಕ್ತರು ಇದರ ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು. ನಿವೃತ್ತ ಗ್ರಾಮಲೆಕ್ಕಾಧಿಕಾರಿ ನಾಗರಾಜು ನಿರೂಪಿಸಿದರು. ದೇವಿಕಾ ನಂದೀಶ್ ಪ್ರಾರ್ಥಿಸಿದರು. ವಿವಿಧ ಮಠಗಳ ಮಠಾಧೀಶರು ಮತ್ತು ಗ್ರಾಮಸ್ಥರು, ಶ್ರೀಮಠದ ಸದ್ಭಕ್ತರು ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕೂಲಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕೂಲಿ (ಕ) + ಕೂಲಿ (ತ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವಾರ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9986022634)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕೂಲಿ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ವಾರ್ –2 (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ವಾರ್–2 (ಹಿಂ)	5 ಪ್ರದರ್ಶನಗಳು

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಹನೀಯರ ಹುಟ್ಟುಹಬ್ಬ ಆಚರಣೆ


ಅಪೂರ್ವ ಸ್ನೇಹ ಬಳಗದ ವತಿಯಿಂದ ಚಾಮರಾಜ ಜೋಡಿ ರಸ್ತೆಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಪುಸ್ತಕ ಹಾಗೂ ಲೇಖನಿ ನೀಡುವ ಮೂಲಕ ರಾಜ್ಯಸಭಾ ಸದಸ್ಯರು, ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಸುಧಾಮೂರ್ತಿ ಹಾಗೂ ಪದ್ಮಶ್ರೀ ಪುರಸ್ಕೃತ ಎಸ್.ಎಲ್.ಭೈರಪ್ಪನವರ ಹುಟ್ಟುಹಬ್ಬ ಆಚರಿಸಲಾಯಿತು. ಅಪೂರ್ವ ಸ್ನೇಹ ಬಳಗದ ಅಧ್ಯಕ್ಷರಾದ ಅಪೂರ್ವ ಸುರೇಶ್, ಜೆಡಿಎಸ್ ಕಾರ್ಯಾಧ್ಯಕ್ಷ ಎಸ್ ಪ್ರಕಾಶ್ ಪ್ರಿಯದರ್ಶನ್, ಚಕ್ರಪಾಣಿ, ಜತ್ತಿ ಪ್ರಸಾದ್, ಮಹಾನ್ ಶ್ರೇಯಸ್, ಶಾಲೆಯ ಮುಖ್ಯ ಶಿಕ್ಷಕರಾದ ರತ್ನಮಾಲ, ಶೃತಿ, ನರಸಿಂಹ, ಶಾಲೆಯ ಶಿಕ್ಷಕ ವೃಂದ ಹಾಗೂ ಇನ್ನಿತರರು ಹಾಜರಿದ್ದರು

59ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ

ಮೈಸೂರು, ಆ.20– ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಕಲೆಮನೆ ಸಭಾಂಗಣದಲ್ಲಿ 3ನೇ ವರ್ಷದ ಗೋಕುಲಾಷ್ಟಮಿ ಪ್ರಯುಕ್ತ 59ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವವನ್ನು ಆ. 24 ರಂದು ಮಧ್ಯಾಹ್ನ 3.30ಕ್ಕೆ ಹಮ್ಮಿಕೊಳ್ಳಲಾಗಿದೆ,

ಮುಖ್ಯ ಅತಿಥಿಗಳಾಗಿ ಮೈಕಾಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ನಿರ್ದೇಶಕ ಡಾ.ಜಿ ರಾಮಚರಣ್, ಸಿ ಎಸ್ ವಿಶ್ವಾಸ್ ಕೃಷ್ಣ, ಕಲಾತ್ಮಕ ನಿರ್ದೇಶಕರಾದ ಶ್ರೀಮತಿ ಕ್ಷಮಾ ಕಟ್ವಾರ್, ಸಂಗೀತ ಶಿಕ್ಷಕರಾದ ಶ್ರೀಮತಿ ಸುಧಾಕೃಷ್ಣ ಎಂ ವಿ, ಭಾಗವಹಿಸಲಿದ್ದಾರೆ. ವೈಣಿಕ ವಿದ್ವಾನ್ ಶ್ರೀ ಆರ್ ಕೆ ಪದ್ಮನಾಭ ಅವರಿಂದ ವೀಣಾವಾದನ; ಗುರು ಶ್ರೀಮತಿ ಆರತಿ ಅರುಣ್ ಮತ್ತು ಶಿಷ್ಯರಿಂದ ಭರತನಾಟ್ಯ ನೃತ್ಯ, ಶ್ರೀಮತಿ ಸುಜಾ ಸಂದೀಪ್, ಬೆಂಗಳೂರು ಅವರಿಂದ ಭರತನಾಟ್ಯ ನೃತ್ಯ, ವಿದುಷಿ ಕೀರ್ತನ ಸತೀಶ್ ಕುಮಾರ್ ಮತ್ತು ಶಿಷ್ಯರಿಂದ ಭರತನಾಟ್ಯ ನೃತ್ಯ ಕಾರ್ಯಕ್ರಮ ನಡೆಯಲಿದೆ.

ಮಹಾರಾಜ ಟ್ರೋಫಿ-2025

ಗುಲ್ಬರ್ಗಾಕ್ಕೆ ಭರ್ಜರಿ ಜಯ



ಗುಲ್ಬರ್ಗಾ ಮಿಸ್ಟಿಕ್ಸ್ ತಂಡದ ಆಟಗಾರರ ಸಂಭ್ರಮ.

ಮೈಸೂರು, ಆ.20– ಪ್ರವೀಣ್ ದುಬೆ ಹಾಗೂ ಕೃಷ್ಣಮೂರ್ತಿ ಸಿದ್ಧಾರ್ಥ್ ಅವರ ಜುಗಲ್ ಬಂದಿ ಆಟಕ್ಕೆ ಮಂಕಾದ ಮೈಸೂರು ವಾರಿಯರ್ಸ್, ಗುಲ್ಬರ್ಗಾ ಮಿಸ್ಟಿಕ್ಸ್ ವಿರುದ್ಧ 7 ವಿಕೆಟ್‌ಗಳ ಹೀನಾಯ ಸೋಲು ಅನುಭವಿಸಿದೆ.

ಮೈಸೂರಿನ ಮಾನಸ ಗಂಗೋತ್ರಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಬುಧವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಮೈಸೂರು ವಾರಿಯರ್ಸ್ ಎಂ.ವೆಂಕಟೇಶ್ ಅವರ 93(53) ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 209 ರನ್ ಕಲೆ ಹಾಕಿತು.

210 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಗುಲ್ಬರ್ಗಾ ಪ್ರವೀಣ್ ದುಬೆ ಅಜೇಯ 53(19) ಹಾಗೂ ಕೃಷ್ಣಮೂರ್ತಿ ಸಿದ್ಧಾರ್ಥ್ ಅಜೇಯ 49(34) ರನ್‌ಗಳ ನೆರವಿನಿಂದ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 213 ರನ್ ಗಳಿಸಿ 7 ವಿಕೆಟ್‌ಗಳ ರೋಚಕ ಗೆಲುವು ದಾಖಲಿಸಿತು.

ಗುಲ್ಬರ್ಗಾ ಗೆಲ್ಲಲು ಅಂತಿಮ ಓವರ್‌ನಲ್ಲಿ 11 ರನ್ ಅವಶ್ಯಕತೆ ಇತ್ತು. ಕೊನೆ ಬಾಲ್‌ನಲ್ಲಿ 3 ರನ್ ಅವಶ್ಯಕತೆ ಇದ್ದಾಗ ಎಲ್.ಎನ್.ಕುಮಾರ್ ಅವರ ಬೌಲಿಂಗ್ ನಲ್ಲಿ ಚೆಂಡನ್ನು ಬ್ಯಾಕ್ವರ್ಡ್ ಪಾಯಿಂಟ್ ಮೇಲೆ ಸಿಕ್ಸರ್‌ಗೆ ಅಟ್ಟಿ ತಂಡಕ್ಕೆ ಗೆಲುವು ತಂದುಕೊಟ್ಟ ಪ್ರವೀಣ್ ದುಬೆ ಅಮೋಘ ಅರ್ಧಶತಕ ದಾಖಲಿಸಿ ಪಂದ್ಯಶ್ರೇಷ್ಠ ಪ್ರಶಸ್ತಿಗೂ ಭಾಜನರಾದರು.

ಸಂಕ್ಷಿಪ್ತ ಸ್ಕೋರ್

ಮೈಸೂರು ವಾರಿಯರ್ಸ್: ಸಿ.ಎ.ಕಾರ್ತಿಕ್ 17(13), ಎಂ.ವೆಂಕ ಟೇಶ್ ಔಟಾಗದೇ 93(53), ಮನೀಶ್‌ಪಾಂಡೆ 29(19), ಯಶೋವರ್ಧನ್ ಪ್ರತಾಪ್ 48(24), ಲವಿಶ್ ಕುಶಾಲ್ 25ಕ್ಕೆ2, ಪೃಥ್ವಿರಾಜ್ ಶೇಖಾವತ್ 26ಕ್ಕೆ 1.

ಗುಲ್ಬರ್ಗಾ ಮಿಸ್ಟಿಕ್ಸ್: ಲುವ್ನಿತ್ ಸಿಸೋಡಿಯಾ 37(13), ನಿಕಿನ್ ಜೋಸ್ 21(18), ಸ್ಮರಣ್ ರವಿಚಂದ್ರನ್ 38(24), ಕೃಷ್ಣಮೂರ್ತಿ ಸಿದ್ಧಾರ್ಥ್ ಔಟಾಗದೇ 49(34), ಪ್ರವೀಣ್ ದುಬೆ ಔಟಾಗದೇ 53(19), ಸಿ.ಎ.ಕಾರ್ತಿಕ್ 36ಕ್ಕೆ1, ಶಿಖರ್ ಶೆಟ್ಟಿ 32ಕ್ಕೆ1

ಟೈಗರ್ಸ್ ವಿರುದ್ಧ ಬ್ಲಾಸ್ಟರ್ಸ್‌ಗೆ ಅಮೋಘ ಜಯ

ಮೈಸೂರು, ಆ.20– ಇಲ್ಲಿನ ಮಾನಸ ಗಂಗೋತ್ರಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಬುಧವಾರ ಸಂಜೆ ನಡೆದ ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್, ಹುಬ್ಬಳ್ಳಿ ಟೈಗರ್ಸ್ ತಂಡವನ್ನು 3 ವಿಕೆಟ್‌ಗಳಿಂದ ಮಣಿಸಿತು. ಹುಬ್ಬಳ್ಳಿ ನೀಡಿದ 141 ರನ್ ಬೆನ್ನತ್ತಿದ ಬೆಂಗಳೂರು 19.2 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 145 ರನ್ ಗಳಿಸಿ ಜಯ ಗಳಿಸಿತು. ಇದಕ್ಕೂ ಮೊದಲು ಬ್ಯಾಟ್ ಮಾಡಿದ ಹುಬ್ಬಳ್ಳಿ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 141 ರನ್ ಗಳಿಸಿತ್ತು. ಉತ್ತಮ ಬ್ಯಾಟಿಂಗ್ ಬೌಲಿಂಗ್ ಪ್ರದರ್ಶನ ತೋರಿದ ಎಂ.ಜಿ.ನವೀನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸಂಕ್ಷಿಪ್ತ ಸ್ಕೋರ್

ಹುಬ್ಬಳ್ಳಿ ಟೈಗರ್ಸ್: ಶಿವಕುಮಾರ್ ರಕ್ಷಿತ್ 61(42), ಕೃಷ್ಣನ್ ಶ್ರೀಜಿತ್ 20(24), ಎಲ್.ಮನ್ವಂತ್ ಕುಮಾರ್ 16(17), ವಿದ್ಯಾಧರ್ ಪಾಟೀಲ್ 25ಕ್ಕೆ2, ಎಂ.ಜಿ.ನವೀನ್ 31ಕ್ಕೆ2

ಬೆಂಗಳೂರು ಬ್ಲಾಸ್ಟರ್ಸ್: ಎಲ್.ಆರ್.ಚೇತನ್ 32(24), ನವೀನ್ ಎಂ.ಜಿ ಔಟಾಗದೇ 33(12), ಸೂರಜ್ ಅಹುಜಾ 27(20), ಯಶ್‌ರಾಜ್ ಪುಂಜಾ 34ಕ್ಕೆ3, ರಿತೇಶ್ ಭಟ್ಕಳ್ 17ಕ್ಕೆ1

ಧರ್ಮಸ್ಥಳ ಕ್ಷೇತ್ರದ ಘನತೆಗೆ ಧಕ್ಕೆ ಆರೋಪ; ಕಾನೂನು ಕ್ರಮಕ್ಕೆ ಯುವ ಬ್ರಿಗೇಡ್ ಮನವಿ



ಎಡಿಸಿ ಡಾ.ಪಿ.ಶಿವರಾಜ್ ಅವರಿಗೆ ಮನವಿ ಸಲ್ಲಿಸುತ್ತಿರುವ ಯುವ ಬ್ರಿಗೇಡ್ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು.

ಮೈಸೂರು, ಆ.20(ಪಿಎಂ)– ಶ್ರೀ ಕ್ಷೇತ್ರ ಧರ್ಮಸ್ಥಳದ ಘನತೆಗೆ ಕೆಲವರು ಧಕ್ಕೆ ತರುತ್ತಿದ್ದಾರೆ ಎಂದು ಆರೋಪಿಸಿ ಹಾಗೂ ಅಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಯುವ ಬ್ರಿಗೇಡ್ ಸಂಘಟನೆ ವತಿಯಿಂದ ಬುಧವಾರ ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಲಾಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳದ ಬಗ್ಗೆ ಮಹೇಶ್ ಶೆಟ್ಟಿ ತಿಮ್ಮರೋಡಿ, ಗಿರೀಶ್ ಮಟ್ಟಣ್ಣ ನವರ್ ಮತ್ತು ಸಮೀರ್ ಎಂಬುವವರು ಅವಹೇಳನಕಾರಿ ಹೇಳಿಕೆಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ನೀಡುತ್ತಿದ್ದಾರೆ. ಇವರನ್ನು ಕೂಡಲೇ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಕೋರಲಾಗಿದೆ. ಯುವ ಬ್ರಿಗೇಡ್ ಮೈಸೂರು ನಗರ ಸಂಚಾಲಕ ಸಾಗರ್, ಮುಖಂಡರಾದ ಸಂಜಯ್, ನಾರಾಯಣ, ನಂಜುಂಡಸ್ವಾಮಿ, ಕಾರ್ಯಕರ್ತರಾದ ಶ್ರೀನಿಧಿ, ನಂಜುಂಡಸ್ವಾಮಿ ಹಾಗೂ ಇತರರು ಮೈಸೂರು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಅವರಿಗೆ ಮನವಿ ಸಲ್ಲಿಸಿದರು.

6ನೇ ತಿಂಗಳ ಸವಿನೆನಪು



ಬಿ.ಎಂ ದೀಪಕ್
ಬಿ.ಇ. ಸಿವಿಲ್ ಇಂಜಿನಿಯರ್
ಇಂದಿಗೆ ನೀನು ನಮ್ಮನ್ನ ಅಗಲಿ 6 ತಿಂಗಳು.
ಸದಾ ನಿನ್ನ ನೆನಪಿನ ದುಃಖದಲ್ಲಿ
ತಂದೆ: ಬಿ.ಪಿ. ಮಂಜು, ತಾಯಿ: ಕೆ.ವಿ ಶೋಭ,
ತಂಗಿ: ಬಿ.ಎಮ್. ಪೂಜಾ ಚಿಕ್ಕಪ್ಪ, ಬಿ.ಪಿ ಲೋಕೇಶ್,
ತಾತಾ, ಅಜ್ಜಿ ಹಾಗೂ ಅನುರಾಧ ಹರೀಶ್, ಪಲ್ಲವಿ ಶೇಖರ್
ಮತ್ತು ಕುಟುಂಬಸ್ಥರು, ಬೆಟ್ಟದಪುರ, ಪಿರಿಯಾಪಟ್ಟಣ ತಾ||

ದಾಖಲಾತಿ ಕಳೆದಿದೆ

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು ಕಸಬಾ ಹೋಬಳಿ ಅಂತರವಳ್ಳಿ ಗ್ರಾಮದಲ್ಲಿ ವಾಸವಿರುವ ಲೇ|| ಬೋರಯ್ಯ ರವರ ಮಗ ಅನಿಲ್ ಎ.ಬಿ ಅವರು ದಿನಾಂಕ: 15–04–2025 ರಲ್ಲಿ ಜಂಜರ್ ನಂ.400 ಸ್ವತ್ತಿನ ಸಂ.367 1st ಪುಸ್ತಕ ನಂ. MLU–1–03833–2008–09 CD ನಂ MLU035, ಸದರಿ ಮೂಲ ಕ್ರಯಪತ್ರ ಕಳೆದು ಹೋಗಿರುತ್ತದೆ ಯಾರಿಗಾದರೂ ಸಿಕ್ಕಲ್ಲಿ ಸಂಪರ್ಕಿಸಿ
ಚಿಕ್ಕ ಬೋರಣ್ಣ. ವಕೀಲರು ಬಿಎ.ಎಲ್.ಎಲ್.ಬಿ
ಕೆ.ಜಿ. ಕೊಪ್ಪಲು, ಮೈಸೂರು
9844070669

In the court of the Hon'ble Prl. District and Session judge at Mysuru
COM: O S No. 283/2023

Plaintiffs: Canara Bank, Vijayanagara, 2nd Stage Branch, Mysuru

V/s

Defendants: Fabro Engineering It is Partnership Firm. Rept by its Partners.
1. Prakash. G S/o Govindappa.P Aged about 52 Years
2. Sathish G S/o Govindappa.P Aged about 51 Years
Office address : No.5/A-1, J- Part, Hebbal Industrial & Residential Area, Metagalli Post, Devaraja Mohalla, Mysuru- 570016
Both are R/at #5039, 5th Main, 7th Cross, Vijayanagara, 2nd Stage, Mysuru- 570017.

Notice to the Defendant No.1 & 2 Through Paper Publication

That the Plaintiff has filed the above said suit against the defendant for the relief of recovery of money.

You are hereby summoned to appear before the court in person or through a pleader duly instructed and able to answer all material question relating to the above said suit on **25-09-2025 at 11.00 am** in default of your appearance before the court on the said date before mentioned, the suit will be heard and determined in your absence as ex-parte.

Given under the seal of the court this 19th day of August, 2025 at Mysuru.

By order of the Court
Chief Administrative officer
District and Sessions judge at Mysuru

M S Tejakshi
Advocate for Plaintiff
Date : 19-08-2025
Place: Mysuru

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು ಜಿಲ್ಲೆ–571110, ತಿ.ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಬೊಮ್ಮನಾಯಕನಹಳ್ಳಿ ವಾಸಿಯಾದ ಶ್ರೀ. ಮಹದೇವಸ್ವಾಮಿ @ ಕೆ. ಮಹದೇವಸ್ವಾಮಿ ಬಿನ್. ಕೃಷ್ಣ ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು(07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರು–ವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂಧಿತರಾಗುವುದಿಲ್ಲ,

ಷೆಡ್ಯೂಲ್

ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಬೊಮ್ಮನಾಯ್ಕನಹಳ್ಳಿ ಗ್ರಾಮದ ಸರ್ವೆ ನಂಬರ್, 183/2 ರಲ್ಲಿನ ಒಂದು ಎಕರೆ ಐದು ಗುಂಟೆ (1.05.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ:– ರಸ್ತೆ, ಪಶ್ಚಿಮಕ್ಕೆ:– ಸರ್ವೆ ನಂಬರ್ 183/1, ಉತ್ತರಕ್ಕೆ:– ಸರ್ವೆ ನಂಬರ್ 184 ದಕ್ಷಿಣಕ್ಕೆ:– ಸರ್ವೇ ನಂಬರ್ 182.

Sd/- M.N. Prakash Kalappa
Advocate, KAR-1996-2000
#2-3, First Floor, PRI Complex, 67/7A, New Sayyajirao Road, Fort Mohalla, Mysore-570004
20-08-2025, ಮೈಸೂರು

GSSS Gita Bharati School of Excellence
Siddartha Nagar, Mysuru - 570 011.

APPOINTMENT NOTIFICATION

Post	Qualification
Atal Tinkering Lab Instructor	BE / Diploma in ECE/ EEE/ CSE with innovative and creative abilities will be preferred. Fluency in English is must.

Application with recent passport size photo must be sent by post / courier to **The Secretary, GSSS(R), KRS Road, Metagalli, Mysuru - 570 016** on or before **30-08-2025.**

Dr. M. Jagannatha Shenoi, President
Smt. Anupama B. Pandit, Secretary

2ನೇ ವರ್ಷದ ಸವಿನೆನಪು



ಶ್ರೀಮತಿ ಬಟ್ಟಮ್ಮ
ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖಿತಪ್ತರು: ಮಕ್ಕಳು, ಸೊಸೆಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು



ಹಸಿರು ನಮ್ಮ ಉಸಿರು

SAD DEMISE



Sri. Yashodhara Ganapa Nayak
Chairman
Friendly Group of Companies

With profound grief and deep sorrow, we inform you of the sad demise of Sri. Yashodhara Ganapa Nayak, the Chairman of Friendly Group of Companies, Yashodhara Trust, on 19th August 2025. He is a respected and prestigious personality who touched many lives with his invaluable contributions.

THE CREMATION WILL BE HELD ON:
21st August 2025
Between 12.30 PM and 3.30 PM
at Friendly Layout, Srirangapatna.

We request you to join us in paying our last respects and offering prayers for the departed soul.

Deeply Mourned By
Friendly Group of Companies

ನಗರಸಭಾ ಕಾರ್ಯಾಲಯ, ಹುಣಸೂರು
CITY MUNICIPAL COUNCIL, HUNSUR MYSORE
ಮೈಸೂರು ಜಿಲ್ಲೆ – 571105
E-mail: ka. hunsur.cmc@gmail.com ಫೋನ್: 08222–252048
ಸಂ:ಹುನಕಾ:/ಆ.ಶಾ/ಪಿ.ಆರ್/17/2025–26 ದಿನಾಂಕ: 20/08/2025

ಟೆಂಡರ್ ಪ್ರಕಟಣೆ

15ನೇ ಹಣಕಾಸು ಯೋಜನೆಯಡಿಯಲ್ಲಿ ನಮ್ಮ ಕ್ಲಿನಿಕ್‌ಗಳ ಕಾರ್ಯನಿರ್ವಹಣೆಗಾಗಿ ನಿಗಧಿಪಡಿಸಿರುವ ಸಾಮಾಗ್ರಿಗಳ ಖರೀದಿಗಾಗಿ ಅರ್ಹ ಸರಬರಾಜುದಾರರಿಂದ ಕರೆಯಲಾಗಿದ್ದು, ಆಸಕ್ತ ಸರಬರಾಜುದಾರರು ಈ ಕಛೇರಿಯ ಆರೋಗ್ಯ ಶಾಖೆಯಲ್ಲಿ ಖಾಲಿ ಟೆಂಡರ್ ನಮೂನೆಗಳನ್ನು ಪಡೆದು ಕೆಳಕಂಡ ಸಾಮಾಗ್ರಿಗಳಿಗೆ ದರಗಳನ್ನು ನಮೂದಿಸಿ ಇ.ಎಂ.ಡಿ ಮೊತ್ತರೂ. 2000/– ಗಳ ಡಿ.ಡಿಯೊಂದಿಗೆ ಮುಚ್ಚಿದ ಲಕೋಟೆಯಲ್ಲಿ ಈ ಕಛೇರಿಯ ಆರೋಗ್ಯ ವಿಭಾಗದಲ್ಲಿ ಕೊನೆಯ ದಿನಾಂಕ: 29–08–2025 ರಂದು ಸಂಜೆ 04–30 ಗಂಟೆಯ ಒಳಗಾಗಿ ಸಲ್ಲಿಸುವುದು.

ಕ್ರಂ.ಸಂ	ಸಾಮಾಗ್ರಿಗಳ ವಿವರ	ಅವಶ್ಯ ಸಂಖ್ಯೆ
1)	Register, OPD Slip and Patient History Book	1
2)	UPS System	1
3)	UPHC Branding	1

ಸಹಿ/–ಪೌರಾಯುಕ್ತರು, ನಗರಸಭೆ, ಹುಣಸೂರು

ಪುರಸಭಾ ಕಾರ್ಯಾಲಯ, ಸಕಲೇಶಪುರ
ದೂರವಾಣಿ ಸಂಖ್ಯೆ: 08173–244042 email: itstaff_ulb_sakleshpur@yahoo.com
Website: www.sakaleshpurtown.gov.in
ನಂ/ಮುನಿಸಿ/ಜೆ.ಇ/ಪಿಆರ್/ /2025–26 ದಿನಾಂಕ 18–08–2025

ಕೊಟೇಷನ್ ದರ ಆಹ್ವಾನ

ಸಕಲೇಶಪುರ ಪುರಸಭಾ ವ್ಯಾಪಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ವಸ್ತುಗಳನ್ನು ಮಳಲಿ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಾಗಿಸಲು ಅವಶ್ಯಕವಾದ ಟಿಪ್ಪರ್ ವಾಹನವನ್ನು ಖರೀಧಿಸುವ ಸಂಬಂಧ ಅರ್ಹ ಸಂಸ್ಥೆ/ಗುತ್ತಿಗೆದಾರರಿಂದ ದರ ಆಹ್ವಾನ ಮಾಡಲಾಗಿದ್ದು. ತಮ್ಮ ದರದ ಕೊಟೇಷನನ್ನು ಮುಖ್ಯಾಧಿಕಾರಿ ಪುರಸಭೆ ಸಕಲೇಶಪುರರವರಿಗೆ ದಿನಾಂಕ: 19–08–2025 ರಿಂದ 01-09–2025 ರೊಳಗೆ ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಕ್ರ.ಸಂ.ವಿವರ: Garbage tipper 5 cubic metre- Tipping Angle 45.0 or higher (degree), Tipper Container Capacity/Volume 5.0 (cubic meter), Body Plate Thickness 1.6 Or higher (millimeter), Tipper Sub Frame Thickness (mm) 3.0 Or higher (millimeter), Tipper Container Material Mild Steel as per IS 2062, Stainless Steel Or higher, Vehicle Category N2 (GVW >3.5<=12 tonnes), Chassis Load Carrying Capacity (Kg) 7000.0 Or higher (kilogram), Axle Configuration 4 X 2, Maximum Engine Output / Powe 92.0 Or higher (kiloWatt), Vehicle Emission Compliance BS VI Chassis Warranty 1, 2, 3 Or higher (year) ಗುತ್ತಿಗೆದಾರರು ಸಲ್ಲಿಸಬೇಕಾಗಿರುವದರ: ರೂ ಅಂಕಿಗಳಲ್ಲಿ:____ ರೂ ಅಕ್ಷರಗಳಲ್ಲಿ:____

ಸಹಿ/–ಅಧ್ಯಕ್ಷರು, ಪುರಸಭೆ, ಸಕಲೇಶಪುರ
ಸಹಿ/–ಉಪಾಧ್ಯಕ್ಷರು, ಪುರಸಭೆ, ಸಕಲೇಶಪುರ
ಸಹಿ/–ಮುಖ್ಯಾಧಿಕಾರಿ, ಪುರಸಭೆ, ಸಕಲೇಶಪುರ

ವಾಸಾಸಂಇ/ಹಿಸನಿ/ಹಾಸನ/467/ಕೆಪಿಎಂಪಿಎ/2025–26